ಸಂಪುಟ: ೦೬/ ಸಂಚಿಕೆ: ೨೮೬/ರವಿವಾರ ದಿನಾಂಕ : ೧೨-೦೧-೨೦೨೫/ ಪುಟ: ೬/ ಬೆಲೆ ೨-೦೦

ಸತ್ಯಕ್ಕೆ ಕಿರಣ ಸುಳ್ಳಿಗೆ ಕಿಡಿ

ಕಛೇರಿ ದೂರವಾಣಿ ಸಂಖ್ಯೆ 0831-3564491

# ಬೆಳಗಿನ ಸೂರ್ಯೋದಯ

ಕನ್ನಡ ಪ್ರಾದೇಶಿಕ ದಿನಪತ್ರಿಕೆ

ಬೆಳಗಾವಿ ■ ಧಾರವಾಡ ■ ಬಾಗಲಕೋಟ ■ ವಿಜಯಪುರ ■ ಗದಗ ■ ಕೊಪ್ಪಳ ■ ಹಾವೇರಿ ■ ಕಾರವಾರ

ಸಂಪಾದಕರು : ಗುರುರಾಜ ಈರಪ್ಪಾ. ಕದಮ, Editor : GURURAJ IRAPPA. KADAM Cell : 9620099959

Volume : 06/ ISSUE : 286/ SUNDAY Date : 12-01-2025/ RNI No. KARKAN/2019/77640/ Postal Reg No. PMG/KA/NK/BM/135/21-24 / POST AT Vantamury Colony Post Office / email : belaginasuryodaya@gmail.com / Page : 6 / Rs. 2.00

## ಲೋಕಸೇವಾ ಆಯೋಗ ಕಾರ್ಯ ಪಾರದರ್ಶಕವಾಗಿರಲಿ: ಉಪರಾಷ್ಟ್ರಪತಿ ಜಗದೀಪ್ ಧನಕರ್



ಬೆಂಗಳೂರು: ರಾಜ್ಯಗಳ ಲೋಕಸೇವಾ ಆಯೋಗಗಳು ಪಾರದರ್ಶಕತೆ, ಜವಾಬ್ದಾರಿ ಹಾಗೂ ಬದ್ಧತೆಯಿಂದ ಕೆಲಸ ನಿರ್ವಹಿಸಿ ವೃತ್ತಿಪರತೆಯನ್ನು ಎತ್ತಿಹಿಡಿಯಬೇಕೆಂದು ಭಾರತದ ಗೌರವಾನ್ವಿತ ರಾಷ್ಟ್ರಪತಿಗಳಾದ ಜಗದೀಪ್ ಧನಕರ್ ತಿಳಿಸಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಕರ್ನಾಟಕ ಹಾಗೂ ಕೇಂದ್ರ ಲೋಕಸೇವಾ ಆಯೋಗಗಳ ಸಹಭಾಗಿತ್ವದಲ್ಲಿ ಶನಿವಾರದಂದು ಹಮ್ಮಿಕೊಳ್ಳಲಾದ ರಾಜ್ಯ ಲೋಕಸೇವಾ ಆಯೋಗಗಳ ಅಧ್ಯಕ್ಷರುಗಳ 25ನೇ ರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿ, ಎಲ್ಲಾ ರಾಜ್ಯಗಳ ಲೋಕಸೇವಾ ಆಯೋಗಗಳು ಬಲವರ್ಧನೆಗೆ ಅದರ ಅಧ್ಯಕ್ಷರ, ಸದಸ್ಯರ ಪಾತ್ರ ಹಿರಿದಾಗಿದೆ. ಇದು ಒಳ್ಳೆಯ ಆಡಳಿತಕ್ಕೆ ಕೈಗನ್ನಡಿಯಾಗಬೇಕು. ಇಂದಿನ ಯುವಜನರ ಆಕಾಂಕ್ಷೆಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಆಯೋಗ ಕೆಲಸ ನಿರ್ವಹಿಸಬೇಕು ಎಂದರು.

ಆಡಳಿತಶಾಹಿ ವರ್ಗವನ್ನು ಬಲವರ್ಧನೆಗೊಳಿಸಲು ಆಯೋಗ ಸ್ಪಷ್ಟ, ದಿಟ್ಟ ಹೆಜ್ಜೆಗಳನ್ನಿಡಬೇಕು. ಉತ್ತಮ ಆಡಳಿತ, ನಡಾವಳಿಗಳನ್ನು ಜನರಿಗೆ ನೀಡಬೇಕು ವಿಕಸಿತ ಭಾರತ –2027 ರ ದೂರದೃಷ್ಟಿಯನ್ನು ಸಕಾರಗೊಳಿಸಬೇಕು. ಈಗಾಗಲೇ ನಾವು ಜಿ.ಎಸ್.ಟಿ. ಮೂಲಕ ಏಕ ರೂಪದ ರಾಷ್ಟ್ರೀಯ ತೆರಿಗೆ ನೀಡಿ ತಂದಿದ್ದೇವೆ. ಕೇಂದ್ರ ಹಾಗೂ ರಾಜ್ಯಮಟ್ಟದ ಸೇವಾ ಆಯೋಗಗಳು ಪಾರದರ್ಶಕತೆ, ದಕ್ಷತೆ ಹಾಗೂ ನಿಷ್ಠಯಿಂದ ಕೆಲಸ ನಿರ್ವಹಿಸಬೇಕು ಎಂದು ನುಡಿದರು.

ಪರೀಕ್ಷೆಗಳನ್ನು ಸಮರ್ಥ–'ರ್ವಾಗಿ ನಡೆಸಿ ಜನರ ವಿಶ್ವಾಸಾರ್ಹತೆ ಪಾತ್ರವಾಗಬೇಕು. ಆಕಾಂಕ್ಷಿಗಳಲ್ಲಿ ಪರೀಕ್ಷೆಗಳ ಹಾಗೂ ಪ್ರಶ್ನೆ ಪತ್ರಿಕೆಯ ಸೋರಿಕೆಯ ಭಯ ಹೋಗಲಾಡಿಬೇಕು. ಭ್ರಷ್ಟಾಚಾರ ನಿರ್ಮೂಲನೆಗೆ ಕರ್ನಾಟಕ ಸಾರ್ವಜನಿಕ ಪರೀಕ್ಷೆ (ನೇಮಕಾತಿಯಲ್ಲಿನ ಭ್ರಷ್ಟಾಚಾರ ಮತ್ತು ಅನುಚಿತ ವಿಧಾನಗಳ ನಿಗ್ರಹ) ಕಾಯ್ದೆ 2024 ಅನ್ನು ತಂದಿರುವುದು ಗಮನಾರ್ಹ. ಆದ–'ರೂ ಯಾವುದೇ ಅಡೆ ತಡೆಗಳಿಲ್ಲದೆ ಇವನ್ನು ಅನುಷ್ಠಾನಗೊಳಿಸಲು ರಾಜ್ಯ ಸಜ್ಜಾಗಬೇಕು ಎಂದರು.

ಆಯೋಗಗಳು ಸಾಮರ್ಥ್ಯ ನಿರ್ಮಾಣ, ವೃತ್ತಿ ಪರತೆಗಳಿಗೆ ಒತ್ತು ನೀಡಿ ತರಬೇತಿಗಳನ್ನು ಸಹ ನಡೆಸಬೇಕಿದೆ. ಆಗಿಂದಾಗ್ಗೆ ಆಗುವ ನಿಯಮಗಳು, ಕಾಯ್ದೆಗಳಿಗೆ ಅನ್ವಯ ಆಯೋಗ ತನ್ನ ಕೆಲಸ ನಿರ್ವಹಣೆ ಜೊತೆಗೆ ಉತ್ತಮ ಪ್ರತಿಫಲ ನೀಡಬೇಕಿದೆ. ಸಂವಿಧಾನದ ತತ್ವ ಮತ್ತು ಮೌಲ್ಯಗಳನ್ನು ಎತ್ತಿ ಹಿಡಿದು, ವ್ಯಕ್ತಿ, ಸಮಾಜದ ಏಳ್ಗೆಗೆ ಶ್ರಮಿಸಬೇಕು ಎಂದು ತಿಳಿಸಿದರು.

ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, 1951 ರಲ್ಲಿ ಸ್ಥಾಪಿಸಲಾದ ಕರ್ನಾಟಕ ಲೋಕಸೇವಾ ಆಯೋಗ ತನ್ನಡೆ ಆದ ಕಾರ್ಯಕ್ಷಮತೆ ಪಾರದರ್ಶಕತೆಗೆ ಹೆಸರಾಗಿದೆ. ಪಿ.ಸಿ. ಹೋಟಾ ಸಮಿತಿ ಶಿಫಾರಸ್ಸಿನಂತಹ ಸರ್ಕಾರ ನೇಮಕಾತಿಯಲ್ಲಿ ಸೂಕ್ತ ಬದಲಾವಣೆ ತಂದಿದೆ. ಗ್ರೂಪ್ "ಸಿ" ಮತ್ತು ಗ್ರೂಪ್ "ಬಿ" ಹುದ್ದೆಗಳಿಗೆ ಸಂದರ್ಶನವನ್ನು ರದ್ದು ಮಾಡಿ ಪ್ರಕ್ರಿಯೆಯಲ್ಲಿ ಸಮತೋಲನ ತರಲಾಗಿದೆ. ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಯ ಸಂದರ್ಶನ ಅಂಕಗಳನ್ನು 25 ಕ್ಕೆ ಇಳಿಸಿ ನೇಮಕಾತಿಯಲ್ಲಿ ಪಾರದರ್ಶಕತೆ ತರಲಾಗಿದೆ. ಆದಾಗ್ಯೂ ಪ್ರಶ್ನೆ ಪತ್ರಿಕೆ ಸೋರಿಕೆ ಮುಂತಾದ ಸಮಸ್ಯೆಗಳು ಉದ್ಭವಿಸುತ್ತಿದ್ದು, ಸರ್ಕಾರ ಇದನ್ನು ತಡೆಗಟ್ಟಲು ಕಠಿಣ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚಳವಾಗಿದ್ದು, ತ್ವರಿತ ನೇಮಕಾತಿ ಪ್ರಕ್ರಿಯೆಗಾಗಿ ಕೇಂದ್ರ ಲೋಕ ಸೇವಾ ಆಯೋಗದ ಮಾದರಿಯನ್ನು ಅನುಸರಿಸಲು ಕ್ರಮಕೈಗೊಳ್ಳಲಾಗಿದೆ. ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿಯನ್ನು ಸಹ ಸರಳೀಕರಣಗೊಳಿಸಲಾಗಿದೆ. ಆದ–'ನಿಕ ಡಿಜಿಟಲ್ ತಂತ್ರಜ್ಞಾನಗಳಾದ ಕೃತಕ ಬುದ್ಧಿಮತ್ತೆ ಮುಂತಾದವುಗಳ ಬಳಕೆಯನ್ನು ಇತರೆ ರಾಜ್ಯದವರಿಂದ ತಿಳಿದು ಅಳವಡಿಸಿಕೊಳ್ಳಲಾಗುತ್ತಿದೆ. ಇದರಿಂದ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿದಂತಾಗುತ್ತದೆ ಎಂದು ಹೇಳಿದರು.

ಮಹಿಳೆಯ ಹಾಗೂ ಹಿಂದುಳಿದ ಜನಾಂಗಗಳಿಗೆ ಉದ್ಯೋಗದಲ್ಲಿ ಅವಕಾಶ ಕಲ್ಪಿಸಲು ಸಹ ಕರ್ನಾಟಕ ಲೋಕಸೇವಾ ಆಯೋಗ ಬದ್ಧವಾಗಿದೆ. ಇದಕ್ಕೆ ಡಿಟ್ಟ ಹೆಜ್ಜೆಯನ್ನು ಸಹ ಇಡಲಾಗಿದೆ. ಆಯ್ಕೆಯಾದವರಿಗೆ ಕಾಲಕಾಲಕ್ಕೆ ಸೂಕ್ತ ತರಬೇತಿ ನೀಡಿ ಸಮಾಜದ ಬೇಡಿಕೆಗಳನ್ನು ಪೂರೈಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಆಯೋಗ ದಕ್ಷತೆ, ಪಾರದರ್ಶಕತೆ ಹಾಗೂ ಇನ್ನಷ್ಟು ಹೊಣೆಗಾರಿಕೆಯಿಂದ ಕಾರ್ಯನಿರ್ವಹಿಸುತ್ತದೆ. ಇದ–ರಿಂದ ಉತ್ತಮ ಸಮಾಜ ನಿರ್ಮಾಣಕ್ಕೆ ಬುನಾದಿಯಾಗುತ್ತದೆ ಎಂದರು.

ಈ ಕಾರ್ಯಕ್ರಮದಲ್ಲಿ ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರ ಧರ್ಮಪತ್ನಿ ಸುದೇಶ ಧನಕರ್, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರಾದ ಪ್ರೀತಿ ಸುದಾನ್, ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರಾದ ಶಿವಶಂಕರಪ್ಪ ಸಾಹುಕಾರ್, ಹರಿಯಾಣ ಲೋಕಸೇವಾ ಆಯೋಗದ ಅಧ್ಯಕ್ಷ ಅಲೋಕ್ ವರ್ಮಾ, ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಡಿಜಿ ಐಜಿಪಿ ಡಾ. ಅಲೋಕ್ ಮೋಹನ್ ಹಾಗೂ ವಿವಿಧ ರಾಜ್ಯಗಳ ಲೋಕಸೇವಾ ಆಯೋಗದ ಅಧ್ಯಕ್ಷರುಗಳು, ಇನ್ನಿತರ ಗಣ್ಯರು ಉಪಸ್ಥಿತರಿದ್ದರು.

## ಬೆಳಗಾವಿ ನಗರವನ್ನು ಡ್ರಗ್ಸ್ ಮುಕ್ತವಾಗಿ ಮಾಡಬೇಕು




ಬೆಳಗಾವಿ: ನಗರದಲ್ಲಿನ ಯುವ ಸಮೂಹ ಡ್ರಗ್ ಜಾಲಕ್ಕೆ ಬಲಿಯಾಗಿ, ಮಾದಕ ವಸ್ತು ಸೇವನೆಯ ನಶೆಯಲ್ಲಿ ಅದಕ್ಕೆ ದಾಸರಾಗಿ ಇಡೀ ಸಮಾಜವನ್ನೇ ಹಾಳು ಮಾಡುವಂತಹ ವಾತಾವರಣ ನಿರ್ಮಾಣವಾಗುತ್ತಿದ್ದು, ಆ ಕೆಟ್ಟ ಪರಿಸ್ಥಿತಿಯನ್ನು ಹೋಗಲಾಡಿಸಲು ಬೆಳಗಾವಿಯಲ್ಲಿ "ಆಶಿಫ್ (ರಾಜು) ಸೇಠ್ ಫೌಂಡೇಶನ್" ಅನ್ನು ಪ್ರಾರಂಭ ಮಾಡುತ್ತಿರುವೆವು ಎಂದು ಬೆಳಗಾವಿಯ ಉತ್ತರ ಮತಕ್ಷೇತ್ರದ ಶಾಸಕ ಆಶಿಫ್ (ರಾಜು) ಸೇಠ್ ಹೇಳಿದ್ದಾರೆ.

ನಗರದ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಬೆಳಗಾವಿ ನಗರದಲ್ಲಿ ಡ್ರಗ್ಸ್ ತಗೆದುಕೊಳ್ಳುವ ಯುವಸಮೂಹದ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಇದು ಕಳವಳದ ಸಂಗತಿಯಾಗಿದೆ, ಇದನ್ನು ನಿಯಂತ್ರಿಸಲು ಹಾಗೂ ನಗರವನ್ನು ಡ್ರಾಗ್ಸ್ ಮುಕ್ತ ಮಾಡಲು, ಅದೇ ರೀತಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲು, ಸರ್ವರಿಗೂ ಆರೋಗ್ಯ ಸೌಲಭ್ಯ ನೀಡುವ ನಿಟ್ಟಿನಲ್ಲಿ ನಮ್ಮ ಈ ಫೌಂಡೇಶನ್ ಸ್ಥಾಪನೆ ಮಾಡಿದ್ದೇವೆ ಎಂದರು. ಡ್ರಗ್ಸ್ ವ್ಯಸನೀಗಳಿಗೆ, ದಾಸರಾದ ಯುವಕರಿಗೆ ವಿಶೇಷ ಮಾರ್ಗದರ್ಶನ ಮಾಡಬೇಕು, ಅವರಿಗಾಗಿ ವಿಶೇಷ ಕಾರ್ಯಾಗಾರ ನಡೆಸಬೇಕು, ಅಧಿಕ ವ್ಯಸಣಿ ಆದವರಿಗೆ ವ್ಯಸನ ಮುಕ್ತ ಕೇಂದ್ರ ಮಾಡಬೇಕು ಎನ್ನುವದು ನಮ್ಮ ಟ್ರಸ್ಟಿನ ಯೋಜನೆಯಾಗಿದೆ, ಅದರ ಜೊತೆಗೆ ಸಮಾಜದಲ್ಲಿ ಬಡ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ, ಅವರಿಗೆ ಗುಣಮಟ್ಟದ ಶಿಕ್ಷಣ ಪಡೆಯಲು ಸಹಕಾರ ಮಾಡುವದು ನಮ್ಮ ಫೌಂಡೇಶನ್ನಿನ ಉದ್ದೇಶವಾಗಿದೆ ಎಂದು ವಿವರಿಸಿದರು.

## ಸರಕಾರದ ಸೌಲತ್ತುಗಳು ಸಮರ್ಪಕವಾಗಿ ತಲುಪಿಸಿ : ತಿಮ್ಮಾಪೂರ




ಮುಧೋಳ: ಸಭೆಗೆ ಸುಳ್ಳು ಮಾಹಿತಿ ನೀಡಿದ, ಅಪೂರ್ಣ ಮಾಹಿತಿಯೊಂದಿಗೆ ಬಂದಿದ್ದ ಹಾಗು ಸರಕಾರದ ಸೌಲತ್ತುಗಳು ಸಾರ್ವಜನಿಕ–ರಿಗೆ ಸರಿಯಾದ ಸಮಯಕ್ಕೆ ಸಮರ್ಪಕವಾಗಿ ಒದಗಿಸದೆ ಕರ್ತವ್ಯಲೋಪ ಎಸಗಿದರೆ ಅಂಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪೂರ ಎಚ್ಚರಿಕೆ ನೀಡಿದರು.

ನಗರದಲ್ಲಿ ಡಾ.ಅಂಬೇಡ್ಕರ್, ಡಾ.ಬಾಬು ಜಗಜೀವನರಾಂ ಬಭವನದಲ್ಲಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಸಹಯೋಗದಲ್ಲಿ ನಡೆದ ದ್ವಿತೀಯ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆವಹಿಸಿ ಪರಿಶೀಲನೆ ವೇಳೆ ಕೆಲ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು, ಸಾರ್ವಜನಿಕರಿಂದ ಬಂದ ಅರ್ಜಿಗಳನ್ನು ಪಡೆದು ಅವರ ಕೆಲಸಗಳನ್ನು ನಿಗದಿತ ಅವಧಿಯಲ್ಲಿ ಮುಗಿಸಿ ಕೊಡುವ ಕ್ರಮ ತೆಗೆದುಕೊಳ್ಳಬೇಕು, ಯಾರಿಂದಲೂ ಯಾವುದೇ ದೂರುಗಳು ಇಲ್ಲದಂತೆ ಕೆಲಸ ಮಾಡಿದರೆ ನಿಮಗೆ ಯಾವುದೇ ತೊಂದರೇಯಾಗಲಿ, ಶಿಸ್ತು ಕ್ರಮಗಳನ್ನಾಗಲಿ ತೆಗೆದುಕೊಳ್ಳುವದಿಲ್ಲ ಎಂದರು.

ಸರ್ಕಾರಿ ಆಸ್ಪತ್ರೆಗಳಿಗೆ ಸರ್ಕಾರದಿಂದ ಮೂಲಭೂತ ಸೌಕರ್ಯ, ಔಷಧ ನೀಡುತ್ತಿದ್ದರೂ ಆಸ್ಪತ್ರೆಯ ವೈದ್ಯರು, ಸಿಬ್ಬಂದಿಗಳು ಹೊರರೋಗಿಗಳಿಗೆ ಮತ್ತು ಬಾಣಂತಿಯರ ಸಮಸ್ಯೆಗೆ ಸ್ಪಂದಿಸದೇ ಇರುವ ವೈದ್ಯರು ಹಾಗೂ ಸಿಬ್ಬಂದಿಯವರ ಕುರಿತು ಸಾಕಷ್ಟು ದೂರುಗಳಿವೆ. ಎಚ್ಚರಿಕೆಯಿಂದ ಕಾರ್ಯನಿರ್ವಹಿಸಿ ಎಂದು ಸೂಚಿಸಿದರು.

ಇದು ದ್ವಿತಿಯ ಸಭೆ ಆಗಿರುವದ–ರಿಂದ ಸಾರ್ವಜನಿಕರಿಂದ ದೂರು ಬಂದಿರುವ ಅಧಿಕಾರಿಗಳ ಹೆಸರನ್ನು ಹೇಳಿ ಮುಜುಗರ ಮಾಡುವದಿಲ್ಲ, ಆದರೆ ನೀವೇ ಅರ್ಥ ಮಾಡಿಕೊಂಡು ದೂರುಗಳು ಬರದಂತೆ ಕೆಲಸ ಮಾಡಿ, ಸಾರ್ವಜನಿಕರಿಂದ ನನಗೆ ದೂರವಾಣಿ ಕರೆಗಳ ಮೂಲಕ ದೂರು ಬಂದರೆ ಪರಿಣಾಮ ನೀವೇ ಎದುರಿಸಬೇಕಾಗುತ್ತದೆ ಹಾಗೂ ತಪ್ಪಿದಲ್ಲಿ ಹಿರಿಯ ಅಧಿಕಾರಿಗಳು ಅಂತಹ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಸೂಚನೆ ನೀಡಿದರು.

ಜಾಗ ಖಾಲಿ ಮಾಡಿ : ಆಹಾರ ಮತ್ತು ನಾಗರಿಕ ಇಲಾಖಾಧಿಕಾರಿ ನಿಮ್ಮ ಕಾರ್ಯ ಸಮರ್ಪಕವಾಗಿಲ್ಲ, ಇನ್ನೆರಡು ವರ್ಷ ನಿಮ್ಮ ಸೇವಾವಧಿ ಬೇರೆಡೆ ಮಾಡಿ ಮುಗಿಸಿ ಅಂತಾ ಕಳೆದ ಸಭೆಯಲ್ಲಿಯೇ ನಿಮಗೆ ತಾಕಿತ್ತು ಮಾಡಿದ್ದೆ ಯಾಕೆ ಹೋಗಿಲ್ಲ, ಇಲ್ಲಿಂದ ಮೊದಲು ಜಾಗ ಖಾಲಿ ಮಾಡಿಕೊಡಿ ಸಚಿವರು ಸೂಚಿಸಿದರೂ ಸಭೆಗೆ ಮಾಹಿತಿ ನೀಡಿದ ಅವರು ತಾಲೂಕಿನಲ್ಲಿ ಕುಟುಂಬಗಳ ಸಂಖ್ಯಗಳಿಗಿಂತ ಪಡಿತರ ಚೀಟಿಗಳ ಸಂಖ್ಯೆ ಹೆಚ್ಚಾಗಿವೆ 2011ರ ಜನಗಣತಿ ಪ್ರಕಾರ 62ಸಾವಿರ ಕುಟುಂಬಗಳಿದ್ದು, ಸದ್ಯ 71ಸಾವಿರ ಪಡಿತರ ಚೀಟಿಗಳು ವಿತರಣೆಯಾಗಿವೆ. ಒಂದೇ ಮನೆಯಲ್ಲಿ ಹೆಚ್ಚು ಕಾರ್ಡ ಮಾಡಿಕೊಂಡಿದ್ದರ ಪರಿಣಾಮ ಪಡಿತರ ಕಾರ್ಡಗಳು ಹೆಚ್ಚಾಗಿವೆ ಎಂದು ಸಚಿವರ ಗಮನಕ್ಕೆ ತಂದಾಗ ಕಾರ್ಡಗಳನ್ನು ಅರ್ಹರಿಗೆ ಸಿಗುವಂತೆ ಕೆಲಸ ಮಾಡಿ ಎಂದು ಬೇಸರದಿಂದ ಹೇಳಿದರು.

ಮುಂದಿನ ಸಭೆಯಲ್ಲಿ ಎಲ್ಲ ಅಧಿಕಾ–ರಿಗಳು ಖುದ್ದಾಗಿ, ಕಡ್ಡಾಯವಾಗಿ ಭಾಗವಹಿಸಿ ಸರ್ಕಾರದಿಂದ ನಾಗರಿಕರಿಗೆ, ರೈತರಿಗೆ ನೀಡುವ ಸೌಲತ್ತುಗಳ ಬಗ್ಗೆ ಮಾಹಿತಿ ನೀಡಬೇಕು ಹಾಗೂ ಹಿಂದಿನ, ಈಗಿನ ಸಭೆಗಳಲ್ಲಿ ನಡೆದ ವಿಚಾರಗಳನ್ನು ಹಾಗೂ ಆ ಕುರಿತ ಬೆಳವಣಿಗೆಗಳನ್ನು ಮುಂದಿನ ಸಭೆಯಲ್ಲಿ ವಿವರವಾಗಿ ಮಾಹಿತಿ ತರಬೇಕು ಎಂದರು.

ಜಿಲ್ಲಾಧಿಕಾರಿ ಕೆ. ಜಾನಕಿ, ಯುಕೆಪಿ ಜಿಲ್ಲಾಧಿಕಾರಿ ಪ್ರಕಾಶ ರಜಪೂತ, ಸಿಇಒ. ಕುರೇರ, ಜಮಖಂಡಿ ಉಪವಿಭಾಗಾಧಿಕಾರಿ ಶ್ವೇತಾ ಬಿಡಿಕರ್, ತಹಸಿಲ್ದಾರ್ ಮಹಾದೇವ ಸನಮುರಿ, ಇ.ಓ ಉಮೇಶ ಸಿದ್ನಾಳ, ನಾಮನಿರ್ದೇಶಕ ಸದಸ್ಯರು, ವಿವಿಧ ಇಲಾಖೆಯ ಅಧಿಕಾರಿಗಳಿದ್ದರು.

****

## ಮುಖ್ಯಮಂತ್ರಿ ಕುರ್ಚಿ ಕಿತ್ತಾಟದಿಂದ ಕಾಂಗ್ರೆಸ್ ಸರ್ಕಾರದ ಪತನ ಖಚಿತ: ಜಗದೀಶ್ ಶೆಟ್ಟರ್



ಹುಬ್ಬಳ್ಳಿ: ಕಾಂಗ್ರೆಸ್‌ನ ಕುರ್ಚಿ ಗುದ್ದಾಟ ಜೋರಾಗಿದೆ. ಮುಖ್ಯಮಂತ್ರಿ ಕುರ್ಚಿಗಾಗಿ ಅವರಲ್ಲೇ ಗುದ್ದಾಟ ನಡೆದಿದೆ. ಮುಖ್ಯಮಂತ್ರಿ ಕುರ್ಚಿ ಕಿತ್ತಾಟದಿಂದ ಕಾಂಗ್ರೆಸ್ ಸರ್ಕಾರ ಪತನವಾಗುವುದು ಖಚಿತ ಎಂದು ಸಂಸದ ಜಗದೀಶ್ ಶೆಟ್ಟರ್ ಭವಿಷ್ಯ ನುಡಿದಿದ್ದಾರೆ.

ನಗರದಲ್ಲಿಂದು ಮಾಧ್ಯಮದವರೊಂದಿಗೆ ಮಾತನಾಡಿದ ಅವರು, "ಇದು ಒಂದಲ್ಲ ಒಂದು ದಿನ ಇದು ಹೊರ ಬರುತ್ತೆ ಅಂತ ಹೇಳಿದ್ದೆ. ಈಗಾಗಲೇ ಔತಣಕೂಟ ಆರಂಭವಾಗಿದೆ. ಕೆಲ ಸಚಿವರು ಸೇರಿ ಔತಣ–ಕೂಟ ಆಯೋಜನೆ ಮಾಡಿದರು. ಆದರೆ, ಎಸ್‌ಸಿ, ಎಸ್‌ಟಿ ಶಾಸಕರು, ಮಂತ್ರಿಗಳ ಔತಣ–ಕೂಟಕ್ಕೆ ಅಡ್ಡಗಾಲು ಹಾಕಿದರು. ಅಡ್ಡಗಾಲು ಹಾಕೋ ಕೆಲಸವನ್ನು ಡಿ. ಕೆ. ಶಿವಕುಮಾರ್ ಮಾಡಿದ್ದಾರೆ" ಎಂದು ಆರೋಪಿಸಿದರು.

"ಸಚಿವರಾದ ಕೆ. ಎನ್. ರಾಜಣ್ಣ, ಎಂ. ಬಿ. ಪಾಟೀಲ್ ಹೇಳಿಕೆ ನೋಡಿದರೆ ಸಿದ್ದರಾಮಯ್ಯ ಹಾಗೂ ಡಿ. ಕೆ. ಶಿವಕುಮಾರ್ ಎಂಬ ಎರಡು ಗುಂಪುಗಳು ಇರುವುದು ಎದ್ದು ಕಾಣುತ್ತಿದೆ. ಇದು ಮೊದಲು ಒಳಗೊಳಗೇ ಇತ್ತು, ಈಗ ಹೊರ ಬರುತ್ತಿದೆ. ಆದಷ್ಟು ಬೇಗ ಕಾಂಗ್ರೆಸ್ ಸರ್ಕಾರ ಪತನ ಆಗುತ್ತದೆ" ಎಂದು ಹೇಳಿದರು.

"ಊಟಕ್ಕೆ ಕರೆ ಕೊಟ್ಟವರು ಸ್ಪಷ್ಟೀಕರಣ ನೀಡಿದ್ದಾರೆ. ನಮ್ಮಲ್ಲಿ ಸಮಸ್ಯೆ ಇದೆ. ಆದ–'ರೆ, ಅದನ್ನು ಸರಿ ಮಾಡುವ ಕೆಲಸ ಹೈಕಮಾಂಡ್‌ನವರು ಮಾಡ್ತಾರೆ. ಎಸ್‌ಸಿ, ಎಸ್‌ಟಿ ಸಮಸ್ಯೆಗಳ ಕುರಿತು ಚರ್ಚಿಸಲು ಔತಣಕೂಟ ಸೇರಿದ್ದೇವೆ ಅಂತ ರಾಜಣ್ಣ ಹೇಳುತ್ತಾರೆ. ಈ ರೀತಿಯ ಸಮಸ್ಯೆಗಳನ್ನು ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಬೇಕು. ಇದನ್ನು ಚರ್ಚೆ ಮಾಡೋಕೆ ಮಂತ್ರಿಗಳು ಸೇರಿದ್ರೆ ಜನ ನಂಬುತ್ತಾರಾ?. ಎಸ್‌ಸಿ, ಎಸ್‌ಟಿ ಜನರ ಮೇಲೆ ಅವರಿಗೆ ಕಾಳಜಿಯೇ ಇಲ್ಲ. ರಾಜಣ್ಣ ಹೇಳಿಕೆ ನೋಡಿದ್ರೆ ರಾಜಕೀಯ ಸಲುವಾಗಿ ಮಾಡ್ತಿದ್ದಾರೆ. ಎಸ್‌ಸಿ, ಎಸ್‌ಟಿ ಕಲ್ಯಾಣ–ಕ್ಕಾಗಿ ಅಲ್ಲ ಎಂದು ತಿಳಿಯುತ್ತದೆ. ಎಸ್‌ಸಿ, ಎಸ್‌ಟಿ ಸಮಸ್ಯೆಗಳ ಬಗ್ಗೆ ಚರ್ಚಿಸಲು ಡಿನ್ನರ್ ಮೀಟಿಂಗ್ ಮಾಡುವ ಅವಶ್ಯಕತೆಯೇ ಇರಲಿಲ್ಲ" ಎಂದು ಹೇಳಿದರು.

ಪರಮೇಶ್ವರ್ ಡಿನ್ನರ್ ಮೀಟಿಂಗ್ ರದ್ದಾಗಿದ್ದಕ್ಕೆ ಆಕ್ರೋಶ ವ್ಯಕ್ತಪಡಿಸಿದ ವಿಚಾರಕ್ಕೆ ಪ್ರತಿಕ್ರಿಯೆ ನೀಡಿರುವ ಅವರು, "ಇದರ ಹಿಂದೆ ರಾಜಕೀಯ ಇದೆ. ಡಿ. ಕೆ. ಶಿವಕುಮಾರ್‌ಗೆ ತಮ್ಮ ವಿರುದ್ಧ ಷಡ್ಯಂತ್ರ ನಡೀತಾ ಇದೆ ಅಂತ ಅನಿಸಿದೆ. ಹೀಗಾಗಿ ಶತ್ರು ಸಂಹಾರದ ಪೂಜೆ ಪುನಸ್ಕಾರ ಆರಂಭಿಸಿದ್ದಾರೆ. ಇನ್ನು ಕೆಲವು ದಿನಗಳಲ್ಲಿ ಬಯಲಲ್ಲೇ ಗುದ್ದಾಟ ನಡೆಯುತ್ತದೆ" ಎಂದರು.

## ಮಂಗಳೂರು: ಕಂಬಳಕ್ಕೆ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಹೂಮಳೆ ಸುರಿಸಿ ಭರ್ಜರಿ ಸ್ವಾಗತ



ಮಂಗಳೂರು: ನಗರದ ಹೊರವಲಯದಲ್ಲಿ ನಡೆಯುವ ನರಿಂಗಾನ ಕಂಬಳಕ್ಕೆ ಆಗಮಿಸಿದ ಸಿಎಂ ಸಿದ್ದರಾಮಯ್ಯರಿಗೆ ದಾರಿ ಮಧ್ಯೆ ನಾಟೆಕಲ್‌ನಲ್ಲಿ ಅಭಿಮಾನಿಗಳು ಹೂಮಳೆ ಸುರಿಸಿ ಭರ್ಜರಿ ಸ್ವಾಗತ ನೀಡಿದರು.

ವಿಧಾನಸಭೆಯ ಸ್ಪೀಕರ್ ಯು. ಟಿ. ಖಾದರ್ ಅವರ ನೇತೃತ್ವದಲ್ಲಿ ನಡೆಯುವ ನರಿಂಗಾನ ಕಂಬಳದಲ್ಲಿ ಭಾಗಿಯಾಗಲು ಮಂಗಳೂರು ವಿಮಾನ ನಿಲ್ದಾಣಕ್ಕೆ ಆಗಮಿಸಿದ ಸಿಎಂ ಸಿದ್ದರಾಮಯ್ಯ ಬಳಿಕ ರಸ್ತೆ ಮಾರ್ಗವಾಗಿ ನರಿಂಗಾನ ಕಂಬಳಕ್ಕೆ ಆಗಮಿಸಿದ್ದರು. ಕಾರು ನಾಟೆಕಲ್ ತಲುಪುತ್ತಿದ್ದಂತೆ ಅಭಿಮಾನಿಗಳ ಜೈಕಾರ ಮುಗಿಲು ಮುಟ್ಟಿತ್ತು.

ನಾಟೆಕಲ್‌ನಲ್ಲಿ ಕಾರಿನಿಂದ ಇಳಿದ ಸಿಎಂ ಸಿದ್ದರಾಮಯ್ಯ ಅವರಿಗೆ ಬೃಹತ್ ಗಾತ್ರದ ಹೂವಿನ ಮಾಲೆ ಹಾಕಿ ಅಭಿಮಾನಿಗಳಿಂದ ಸ್ವಾಗತ ಮಾಡಲಾಯಿತು. ಬಳಿಕ ಹೂವಿನ ಮಳೆ ಸುರಿಸಿದರು. ಬಳಿಕ ನರಿಂಗಾನ ಕಂಬಳಕ್ಕೆ ಆಗಮಿಸುತ್ತಿದ್ದಂತೆ ಸಿಎಂ ನೋಡಲು ಮುಗಿಬಿದ್ದರು. ಈ ವೇಳೆ ಅಭಿಮಾನಿಗಳಿಗೆ ಸಿಎಂ ಶೇಕ್ ಹ್ಯಾಂಡ್ ಮಾಡಿದರು.

ಪರಿಹಾರ ವಿತರಿಸಿದ ಸಿಎಂ : ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ತಾಲೂಕಿನ ಮಂಜಿನಾಡಿ ಗ್ರಾಮದಲ್ಲಿ ಸಿಲಿಂಡರ್ ಸೋರಿಕೆಯಿಂದ ಉಂಟಾದ ಅಗ್ನಿ ಅನಾಹುತದಲ್ಲಿ ಮೃತಪಟ್ಟವರ ಕುಟುಂಬಕ್ಕೆ ಪರಿಹಾರದ ಚೆಕ್ ವಿತರಿಸಿದರು.

ಒಂದೇ ಕುಟುಂಬದ ಖತೀಜತ್ತುಲ್ ಖುಬ್ರ, ಝುಲೈಕಾ ಮೆಹ್ದಿ, ಸಲ್ಮಾ ಮಝಿಯಾ ಮೃತಪಟ್ಟವರಾಗಿದ್ದು, ಇವರ ಪರವಾಗಿ ತಲಾ ಐದು ಲಕ್ಷದ ಚೆಕ್ ಅನ್ನು (ಒಟ್ಟು 15 ಲಕ್ಷ) ಇವರ ಕುಟುಂಬದ ಸದಸ್ಯರಿಗೆ ಮುಖ್ಯಮಂತ್ರಿಗಳು ನೀಡಿದರು.

ನಾಟೆಕಲ್ ಮಂಜನಾಡಿ ಎಂಬಲ್ಲಿನ ಮನೆಯೊಂದರಲ್ಲಿ ಇತ್ತೀಚೆಗೆ ಉಂಟಾದ ಭಾರೀ ಸ್ಫೋಟದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ತಾಯಿ ಹಾಗೂ ಇಬ್ಬರು ಪುತ್ರಿಯರು ಚಿಕಿತ್ಸೆ ಫಲಿಸದೇ ಸಾವನ್ನಪ್ಪಿದ್ದರು. ಮಂಜನಾಡಿಯ ಖಂಡಿಗ ನಿವಾಸಿ ವಿದೇಶದಲ್ಲಿರುವ ಮುತ್ತಲಿಬ್ ಎಂಬವರ ಮನೆಯಲ್ಲಿ ಈ ಸ್ಫೋಟ ಸಂಭವಿಸಿತ್ತು.

ಮುತ್ತಲಿಬ್ ಪತ್ನಿ ಖುಬ್ರಾ ಮತ್ತು ಮೂವರು ಪುತ್ರಿಯರಾದ ಮೆಅದಿಯಾ, ಮಝಿಯಾ, ಮಾಯಿದಾ ಮನೆಯಲ್ಲಿ ಒಂದೇ ಕೋಣೆಯಲ್ಲಿ ಮಲಗಿದ್ದರು. ಮಧ್ಯರಾತ್ರಿ ಮನೆಯೊಳಗಡೆ ಭಾರೀ ಸ್ಫೋಟಗೊಂಡ ಶಬ್ಧ ಕೇಳಿಬಂದಿತ್ತು. ಸ್ಫೋಟದ ತೀವ್ರತೆಗೆ ಆರ್‌ಸಿಸಿ ಮನೆಯ ಮೇಲ್ಭಾಗದಲ್ಲಿನ ಸಿಮೆಂಟ್ ಶೀಟ್ ಮೇಲ್ಚಾವಣಿ ಸಂಪೂರ್ಣ ಹಾರಿ ಹೋಗಿದೆ. ತಾಯಿ ಮಕ್ಕಳು ಮಲಗಿದ್ದ ಕೊಠಡಿ, ಮಂಚ, ಕಿಟಕಿ ಸಂಪೂರ್ಣ ಛಿದ್ರಗೊಂಡು ಸುಟ್ಟು ಕರಕಲಾಗಿದ್ದವು.

ಗಾಯದ ನಡುವೆಯೂ ಓರ್ವ ಪುತ್ರಿ ಮನೆ ಬಾಗಿಲು ತೆಗೆದಿದ್ದಾಳೆ. ತಕ್ಷಣ ನೆರವಿಗೆ ಧಾವಿಸಿದ ಸ್ಥಳೀಯರು, ಬೆಂಕಿ ನಂದಿಸಿ ಗಂಭೀರ ಸ್ಥಿತಿಯಲ್ಲಿದ್ದ ತಾಯಿ ಹಾಗೂ ಮೂವರು ಮಕ್ಕಳನ್ನು ದೇರಳಕಟ್ಟೆಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಿದ್ದರು. ಮನೆಯೊಳಗಿದ್ದ ಅಡುಗೆ ಅನಿಲ ತುಂಬಿದ್ದ ಸಿಲಿಂಡರ್ ಸ್ಫೋಟಿಸಿ ಈ ಘಟನೆ ನಡೆದಿತ್ತು.

****

## ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಭೇಟಿಯಾದ ಸಂಸದ ಜಗದೀಶ್ ಶೆಟ್ಟರ್ ಬೆಳಗಾವಿಯಲ್ಲಿ NIFTEM ಸ್ಥಾಪನೆಗೆ ಮನವಿ



ಬೆಳಗಾವಿ: ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಸಂಸದ ಜಗದೀಶ್ ಶೆಟ್ಟರ್ ಅವರು ಶುಕ್ರವಾರ ಭೇಟಿ ಮಾಡಿದ್ದು, ಬೆಳಗಾವಿಯಲ್ಲಿ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಫುಟ್ ಟೆಕ್ನಾಲಜಿ ಎಂಟರ್ ಪ್ರೆನರ್ಶಿಪ್ ಆಯಂಡ್ ಮ್ಯಾನೇಜ್ ಮೆಂಟ್ ಸ್ಥಾಪನೆಗೆ ಮನವಿ ಮಾಡಿದರು.

ಇದಕ್ಕೂ ಮುನ್ನ ಕೇಂದ್ರ ಆಹಾರ ಸಂಸ್ಕರಣಾ ಉದ್ಯಮ ಸಚಿವರಾದ ಚಿರಾಗ್ ಪಾಸ್ವಾನ್ ಅವರನ್ನು ಭೇಟಿ ಮಾಡಿ, ಅವ–ರಿಗೂ ಮನವಿ ಸಲ್ಲಿಸಿದರು.

ಈ ಪ್ರಸ್ತಾವನೆ ಅನುಮೋದನೆ, ಅಗತ್ಯ ಅನುದಾನ ಮಂಜೂರಾತಿಗಾಗಿ ಕೇಂದ್ರ ಹಣ–ಕಾಸು ಸಚಿವರಲ್ಲಿ ಕೇಂದ್ರ ಆಹಾರ ಸಂಸ್ಕರಣಾ ಉದ್ಯಮ ಸಚಿವಾಲಯ ಮಂಡಿಸುತ್ತಿದೆ. ಇದಕ್ಕೆ ಅನುಮೋದನೆ ನೀಡಿ, ರಾಜ್ಯದ ರೈತ–ರಿಗೆ, ಗ್ರಾಹಕರಿಗೆ, ಕ್ಷೇತ್ರದ ಎಲ್ಲಾ ಜನತೆಗೆ ಅನುಕೂಲತೆಯನ್ನು ಕಲ್ಪಿಸಿ ಕೊಡುವಂತೆ ಮನವಿ ಮಾಡಿದರು.

ಶೆಟ್ಟರ್ ಅವರ ಮನವಿಗೆ ಸ್ಪಂದಿಸಿರುವ ನಿರ್ಮಲಾ ಅವರು, ಬೆಳಗಾವಿಯಲ್ಲಿ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಫುಟ್ ಟೆಕ್ನಾಲಜಿ ಎಂಟರ್ ಪ್ರೆನರ್ಶಿಪ್ ಆಯಂಡ್ ಮ್ಯಾನೇಜ್ ಮೆಂಟ್ ಸ್ಥಾಪಿಸುವ ಕು–ರಿತ ಪ್ರಸ್ತಾವನೆಗೆ ಅನುಮೋದನೆ ನೀಡುವ ಭರವಸೆ ನೀಡಿದ್ದಾರೆಂದು ತಿಳಿದುಬಂದಿದೆ.

## ನಮ್ಮ ಸರಕಾರ ಸುಭದ್ರವಾಗಿದೆ

### ಸರಕಾರದ ಬಗ್ಗೆ ಭವಿಷ್ಯ ನುಡಿಯುವುದು ಬೇಡ: ಡಿಸಿಎಂ ಡಿ.ಕೆ. ಶಿವಕುಮಾರ್



ಬೆಂಗಳೂರು: ನಮ್ಮ ಸರಕಾರ ಸುಭದ್ರವಾಗಿದ್ದು, ಯಾವುದೇ ಸ್ವಾಮೀಜಿಗಳು ಸರಕಾರದ ಬಗ್ಗೆ ಭವಿಷ್ಯ ನುಡಿಯುವುದು ಬೇಡ ಎಂದು ಮನವಿ ಮಾಡುತ್ತೇನೆ. ಸಿದ್ದರಾಮಯ್ಯ ರಾಜ್ಯದ ಮುಖ್ಯಮಂತ್ರಿಗಳಾಗಿದ್ದು ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡುತ್ತಿದ್ದೇವೆ ಎಂದು ಅವರು, ಯಾವ ಪವರ್ ಇಲ್ಲ, ಶೇರು ಇಲ್ಲ. ಐದು ವರ್ಷ ಕಾಂಗ್ರೆಸ್ ಸರಕಾರ ಇರುತ್ತದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಶನಿವಾರ ನಗರದಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಯಾರೂ ಸಭೆ ಮಾಡುವುದನ್ನು ನಾವು ತಡೆದಿಲ್ಲ. ಅದರ ಅವಶ್ಯಕತೆ ನಮಗಿಲ್ಲ. ದೊಡ್ಡವರ ಬಗ್ಗೆ ಮಾತನಾಡುವುದು ಬೇಡ ಎಂದು ಔತನಕೂಟ ಸಭೆ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, 'ಯಾವ ಡಿನ್ನರ್ ಸಭೆ ಇಲ್ಲ' ಎಂದು ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಉತ್ತರ ನೀಡಿದರು.

'ಸಾಮಾಜಿಕ, ಆರ್ಥಿಕ ಸಮೀಕ್ಷಾ ವರದಿ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದು, ಅಲ್ಲಿ ಈ ಕುರಿತು ಚರ್ಚಿಸುತ್ತೇವೆ. ಆದರೆ, ಒಕ್ಕಲಿಗ ಮತ್ತು ಲಿಂಗಾಯತ ಸಮುದಾಯದ ಸಭೆಯ ಬಗ್ಗೆ ನನಗೆ ಗೊತ್ತಿರುವ ಮಾಹಿತಿ ಇಲ್ಲ' ಎಂದು ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ನಾನು ಹಾಗೂ ಸಿಎಂ ಚರ್ಚೆ ಮಾಡಿ ಜ.13ರಂದು ಸಿಎಲ್‌ಪಿ ಸಭೆ ಕರೆದಿದ್ದೇವೆ. ಅಂದು ಇಡೀ ದಿನ ಪಕ್ಷಕ್ಕೆ ಮುಡಿಪಾಗಿಡಬೇಕು ಎಂದು ಹೇಳಿ, ಅಂದಿನ ಕಾರ್ಯಕ್ರಮ ರದ್ದು ಮಾಡಿದ್ದೇವೆ. ಬೆಳಗ್ಗೆ 11 ಗಂಟೆಗೆ ಭಾರತ ಜೋಡೋ ಭವನದಲ್ಲಿ ಬ್ಲಾಕ್, ಜಿಲ್ಲಾಧ್ಯಕ್ಷರ ಸಭೆ ಕರೆಯಲಾಗಿದೆ. ಸಂಜೆ 4 ಗಂಟೆಗೆ ಪದಾಧಿಕಾರಿಗಳ ಸಭೆ ಕರೆದಿದ್ದೇವೆ. ಸಂಜೆ 6 ಗಂಟೆಗೆ ಶಾಸಕರು, ಸಚಿವರ ಸಭೆ ಮಾಡಿ ಜವಾಬ್ದಾರಿ ನೀಡಲಾಗುವುದು ಎಂದರು.

ಕಾಂಗ್ರೆಸ್ ಕಚೇರಿ ನಿರ್ಮಾಣ: ಜ.14ರಂದು ನಾನು ಹಾಗೂ ಸಿಎಂ ದಿಲ್ಲಿಗೆ ತೆರಳಲಿದ್ದು, 15ರಂದು ಹೊಸದಿಲ್ಲಿಯ ಕಾಂಗ್ರೆಸ್ ನೂತನ ಕಚೇರಿ ಉದ್ಘಾಟನೆ ಮಾಡಲಾಗುವುದು ಎಂದ ಅವರು, 'ಗಾಂಧಿ ಭಾರತ ಕಾರ್ಯಕ್ರಮ ಅಂಗವಾಗಿ ಇದೇ ತಿಂಗಳು 21ರಂದು ನಡೆಯಲಿರುವ ಜೈಬಾಪು, ಜೈಭೀಮ್, ಜೈ ಸಂವಿಧಾನ ಸಮಾವೇಶ ಹಾಗೂ 100 ಕಾಂಗ್ರೆಸ್ ಕಚೇರಿ ನಿರ್ಮಾಣದ ಬಗ್ಗೆ ಹಿರಿಯ ನಾಯಕರ ಸಭೆಯಲ್ಲಿ ಚರ್ಚಿಸಲಾಯಿತು ಎಂದು ತಿಳಿಸಿದರು.

ಈಗಾಗಲೇ 72 ಕಡೆ ಕಾಂಗ್ರೆಸ್ ಕಚೇರಿ ನಿರ್ಮಾಣಕ್ಕೆ ಅರ್ಜಿ ಬಂದಿವೆ. ಉಳಿದ ಕಡೆಗಳು ಸೇರಿ 100 ಕಚೇರಿ ನಿರ್ಮಾಣ ಮಾಡಲಾಗುವುದು. ಸಚಿವರು ಪಕ್ಷದ ಹಿರಿಯ ನಾಯಕರಿಗೆ ಇದರ ಜವಾಬ್ದಾರಿ ನೀಡಲಾಗಿದೆ. ಶಾಸಕರಿಗೂ ಬೇರೆ ಬೇರೆ ಜವಾಬ್ದಾರಿ ನೀಡಲಾಗಿದೆ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

## ಜ.14, 15ರಂದು ರಾಜ್ಯದ ಹಲವೆಡೆ ಮಳೆ ಸಾಧ್ಯತೆ: ಹವಾಮಾನ ಇಲಾಖೆ ಮುನ್ಸೂಚನೆ



ಬೆಂಗಳೂರು: ಬಂಗಾಳಕೊಲ್ಲಿಯಲ್ಲಿ ಮೇಲ್ಮೈ ಸುಳಿಗಾಳಿ ಉಂಟಾಗಿರುವ ಪರಿಣಾಮ ರಾಜ್ಯದ ಹಲವೆಡೆ ಜ.14ರಿಂದ 2 ದಿನಗಳ ಕಾಲ ಮಳೆ ಸುರಿಯುವ ಮುನ್ಸೂಚನೆಯಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ. ಬಂಗಾಳ ಕೊಲ್ಲಿಯ ಮೇಲೆ ಚಂಡಮಾರುತದ ಪರಿಚಲನೆ ಇದ್ದು, ಸಮುದ್ರ ಮಟ್ಟದಿಂದ 3.1 ಕಿ.ಮೀ. ವರೆಗೆ ವಿಸ್ತರಿಸಿದೆ. ಇದರಿಂದ ಜ.14 ಮತ್ತು 15ರಂದು ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ದಕ್ಷಿಣ ಕರ್ನಾಟಕ ವ್ಯಾಪ್ತಿಯ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರದಲ್ಲಿ ಮಳೆ ಪ್ರಾರಂಭವಾಗಿ, ಹಾಸನ, ಕೊಡಗು, ಮಂಡ್ಯ ಮೈಸೂರು ಹಾಗೂ ತುಮಕೂರಿಗೆ ಮಳೆ ವಿಸ್ತರಿಸಲಿದೆ. ಉತ್ತರ ಕರ್ನಾಟಕ ಹಾಗೂ ಕರಾವಳಿ ಭಾಗಗಳಲ್ಲಿ ಒಣ ಹವೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಪ್ರಕಟನೆಯಲ್ಲಿ ಹೇಳಿದೆ.



ಗೋಕಾಕ: ನಗರದ ಕೆಎಲ್‌ಇ ಅಂಗ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ತ್ಯಾಗವೀರ ಶಿರಸಂಗಿ ಲಿಂಗರಾಜರ 164ನೇ ಜಯಂತೋತ್ಸವವನ್ನು ಶುಕ್ರವಾರದಂದು ಆಚರಿಸಲಾಯಿತು. ಈ ಸಂದರ್ಭದಲ್ಲಿ ಕೆಎಲ್‌ಇ ನಿರ್ದೇಶಕ ಜಯಾನಂದ ಮುನವಳ್ಳಿ, ಸ್ಥಳೀಯ ಆಡಳಿತ ಮಂಡಳಿಯ ಎಮ್ ಡಿ ಚುನಮರಿ, ಪ್ರೊ.ಚಂದ್ರಶೇಖರ ಅಕ್ಕಿ ಹಾಗೂ ಅಂಗ ಸಂಸ್ಥೆಗಳ ಮುಖ್ಯಸ್ಥರು ಇದ್ದರು.



ಗೋಕಾಕ: ಇಲ್ಲಿಯ ಕೆಎಲ್‌ಇ ಸಂಸ್ಥೆಯ ಸಿ ಎಸ್ ಅಂಗಡಿ ಪ್ರೌಢ ಶಾಲೆಯ ವಾರ್ಷಿಕ ಸಮ್ಮೇಳನ ಸಮಾರಂಭವನ್ನು ಕೆಎಲ್‌ಇ ನಿರ್ದೇಶಕ ಜಯಾನಂದ ಮುನವಳ್ಳಿ ಉದ್ಘಾಟಿಸಿರು. ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಜಿ ಬಿ ಬಳಗಾರ, ಸ್ಥಳೀಯ ಕೆಎಲ್‌ಇ ಸಂಸ್ಥೆಯ ಎಮ್ ಡಿ ಚುನಮರಿ, ಓಂಪ್ರಕಾಶ ಅಂಗಡಿ, ಜಿ ಎಮ್ ಅಂದಾನಿ, ಕೆ ಬಿ ಮೇವುಂಡಿಮಠ, ಡಾ. ಧರೇಪ್ಪ ಚೌಗಲಾ, ಜಿ ಎಮ್ ಬಿರಾದಾರ, ಎಮ್ ಎಸ್ ಕಾಮಗೌಡ ಇದ್ದರು.



ಬಸವನಬಾಗೇವಾಡಿಯ ಮಿನಿವಿಧಾನಸೌಧದ ಕಟ್ಟಡದಲ್ಲಿ ತಾಲೂಕು ಕಚೇರಿ ಸರ್ವೆ ಮತ್ತು ನೋಂದಣಿ ಇಲಾಖೆಗಳ ಎಲ್ಲ ಭೂ ದಾಖಲೆಗಳ ಡಿಜಿಟಲೀಕರಣಕ್ಕೆ ಸಚಿವ ಶಿವಾನಂದ ಪಾಟೀಲ ಶನಿವಾರ ಚಾಲನೆ ನೀಡಿದ ನಂತರ ಭೂ ಸುರಕ್ಷಾ ಯೋಜನೆಯ ಕರಪತ್ರ ಪ್ರದರ್ಶಿಸಿದರು. ಈ ಸಂದರ್ಭದಲ್ಲಿ ಕಂದಾಯ ಉಪವಿಭಾಗಾಧಿಕಾರಿ ಗುರುನಾಥ ದಡ್ಡೆ, ಬಸವನಬಾಗೇವಾಡಿ ತಹಸೀಲ್ದಾರ ವೈ.ಎಸ್.ಸೋಮನಕಟ್ಟಿ, ಕೊಲ್ಹಾರ ತಹಸೀಲ್ದಾರ ಎಸ್.ಎಸ್.ನಾಯಕಲ್ಲಮಠ, ನಿಡಗುಂದಿ ತಹಸೀಲ್ದಾರ ಎ.ಡಿ.ಅಮರವಾಡಗಿ, ಗ್ರೇಡ್-2 ತಹಸೀಲ್ದಾರರಾದ ಜಿ.ಎಸ್.ನಾಯಕ, ಎಚ್.ಎನ್.ಬಡಿಗೇರ, ಎಡಿಎಲ್‌ಆರ್ ಜಿ.ಬಿ.ವಗ್ಗನವರ,ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಸುರೇಶ ಹಾರಿವಾಳ, ರಾಜ್ಯ ಸಹಕಾರ ಮಹಾಮಂಡಳ ನಿರ್ದೇಶಕ ಈರಣ್ಣ ಪಟ್ಟಣಶೆಟ್ಟಿ, ಎಪಿಎಂಸಿ ಮಾಜಿ ಅಧ್ಯಕ್ಷ ಶೇಖರ ಗೊಳಸಂಗಿ, ಬಸವೇಶ್ವರ ಅರ್ಬನ್ ಬ್ಯಾಂಕಿನ ನಿರ್ದೇಶಕ ಶಂಕರಗೌಡ ಬಿರಾದಾರ ಇತರರು ಇದ್ದರು.

# ದತ್ತಿದಾನಿಗಳಿಂದ ಸಾಹಿತ್ಯಕ ಕಾರ್ಯಕ್ರಮಗಳು ಅರ್ಥಪೂರ್ಣವಾಗುತ್ತಿವೆ : ಸುಮಾ ಕಿತ್ತೂರ



ಬೆಳಗಾವಿ: ದತ್ತಿ ದಾನಿಗಳಿಂದಾಗಿ ಸಾಹಿತ್ಯದ ಕಾರ್ಯಕ್ರಮಗಳು ಸತತವಾಗಿ ಹಾಗೂ ಅರ್ಥಪೂರ್ಣವಾಗಿ ನಡೆಯುವಂತಾಗಿದೆ ಎಂದು ಸುಮಾ ಕಿತ್ತೂರ ಅವರು ಹೇಳಿದರು.

ನಗರದ ಸಾಹಿತ್ಯ ಭವನದಲ್ಲಿ ಆಯೋಜಿಸಲಾದ ಬೆಳಗಾವಿ ಜಿಲ್ಲಾ ಲೇಖಕಿಯರ ಸಂಘದ ದತ್ತಿನಿಧಿ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಹಿಳಾ ಸಂಘಟನೆಗಳು ಬಲವರ್ಧನೆಗೊಂಡಾಗ ಕಾರ್ಯಕ್ರಮಗಳು ಸುಸಜ್ಜಿತವಾಗಿ ನಡೆಸಲು ಸಾಧ್ಯವಾಗಲಿವೆ. ಮಹಿಳೆಯರಿಗೆ ಆತ್ಮಸ್ಥೈರ್ಯ ಹೆಚ್ಚಿಸಲು ಅನುಕೂಲವಾಗಲಿದೆ ಎಂದರು.

ದತ್ತಿದಾನಿಗಳಾದ ರತ್ನಪ್ರಭಾ ಬೆಲ್ಲದ, ರಾಜನಂದಾ ಗಾರ್ಗಿ ಮಾತನಾಡಿ ತಮ್ಮ ಹಿರಿಯರ ಸ್ಮರಣೆಗೆ ಈ ಕಾರ್ಯಕ್ರಮ ಒಂದು ಉತ್ತಮ ವೇದಿಕೆಯಾಗಿದೆ ಎಂದರು.

ಈ ವೇಳೆ ಕಥಾಕಥನ ಸಂಘದ 15 ಕ್ಕೂ ಹೆಚ್ಚು ಸದಸ್ಯೆಯರು ಭಾಗವಹಿಸಿ ಸ್ಥಳದಲ್ಲಿಯೆ ಕಥೆ ರಚನೆ ಮಾಡಿ ವಾಚಿಸಿದರು.

ಸಂಘದ ಉಪಾಧ್ಯಕ್ಷೇ ವಾಸಂತಿ ಮೇಳೆದ ಸ್ವಾಗತಿಸಿದರು. ಲಲಿತಾ ಪರ್ವತರಾವ್ ಹಾಗೂ ಸಂಗಡಿಗರು ನಾಡಗೀತೆ ಹಾಡಿದರು. ಹಿರಿಯ ಸದಸ್ಯರಾದ ಪ್ರೇಮಾ ತಹಶೀಲ್ದಾರ್,ಲಲಿತಾ ಕೋಪರ್ಡೆ, ನೀಲಗಂಗಾ ಚರಂತಿಮಠ,ಹೇಮಾ ಸುನೋಳ್ಳಿ, ಡಾ.ಆಶಾ ನಾಯಕ,ಜ್ಯೋತಿ ಬದಾಮಿ,-ಜಯಶೀಲಾ ಬ್ಯಾಕೋಡ,ಸುನಂದಾ ಹಾಲಬಾವಿ, ಲಲಿತಾ, ಅನ್ನಪೂರ್ಣ,ಸುನೀತಾ,ಮಮತಾ,ಇಂದಿರಾ , ಪ್ರಧಾನ ಕಾರ್ಯದರ್ಶಿ ಆಶಾ ಯಮಕನಮರಡಿ ಕಾರ್ಯಕ್ರಮ ಕುರಿತು ಪ್ರಾಸ್ತಾವಿಕ ಮಾತನಾಡಿ, ನಿರೂಪಿಸಿದರು. ಸುಪ್ರೀಯಾ ದೇಶಪಾಂಡೆ ವಂದಿಸಿದರು. ಸಂಘದ ಸದಸ್ಯರು ಹಾಗೂ ಇತರರು ಇದ್ದರು.



ಸಿಂದಗಿ: ಸಿಂದಗಿ ಪಟ್ಟಣ ಹಾಗೂ ಗ್ರಾಮೀಣ ಪ್ರದೇಶ ಹಲವು ಅನೇಕ ಸ್ಥಳಗಳಲ್ಲಿ ಕಳ್ಳತನ ಕೃತ್ಯವೆಸಗಿದ ವ್ಯಕ್ತಿಯನ್ನು ಬಂಧಿಸಲಾಗಿದೆ. ಬಂಧಿತ ಆರೋಪಿಯು ಯಾದಗಿರಿ ಜಿಲ್ಲೆಯ ಹುಣಸಗಿ ತಾಲೂಕಿನ ರಾಜನಕೊಳೂರು ಗ್ರಾಮದ ನಿಂಗಪ್ಪ ರಾಜಪ್ಪ ಬಡಿಗೇರ ಎಂಬುದು ತಿಳಿದು ಬಂದಿದೆ. ಸಿಂದಗಿಗೆ ಬಂದು ಕಳ್ಳತನ ಮಾಡಿರುವುದಾಗಿ ಬಾಯಿ ಬಿಟ್ಟಿದ್ದಾನೆ.ಸಿಂದಗಿ ಪಟ್ಟಣದಲ್ಲಿ ಸಂಶಯಾಸ್ಪದವಾಗಿ ಮೋಟರ್ ಸೈಕಲ್ ಮೇಲೆ ತಿರುಗಾಡುತ್ತಿದ್ದನು. ಈತನನ್ನು ಠಾಣೆಗೆ ಕರೆದುಕೊಂಡು ವಿಚಾರಣೆಗೆ ಒಳಪಡಿಸಿದಾಗ ಕಲ್ಯಾಣ ನಗರ, ಮಲ್ಲಿಕಾರ್ಜುನ ನಗರ, ಕೊಕಟನೂರ ಹಾಗೂ ಸುಂಗಠಾಣ ಗ್ರಾಮದಲ್ಲಿಯೂ ಸಹ ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ. ಆರೋಪಿಯಿಂದ ಒಂದು ಬೈಕ್, 105ಗ್ರಾಂ ಚಿನ್ನಾಭರಣ ವಶಪಡಿಕೊಂಡಿದ್ದಾರೆ. ಈ ಪ್ರಕರಣ ಸಿಂದಗಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ಈ ವೇಳೆ ಸಿಪಿಐ ನಾನಾಗೌಡ ಪೊಲೀಸಪಾಟೀಲ, ಪಿಎಸ್‌ಐ ಆರೀಫ್ ಮುಷಾಪುರಿ ಸೇರಿದಂತೆ ಸಿಬ್ಬಂದಿಗಳ ಇದ್ದರು.

# ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ 3ನೇ ತ್ರೈಮಾಸಿಕದ ದಿಶಾ ಸಮಿತಿ ಪ್ರಗತಿ ಪರಿಶೀಲನಾ ಸಭೆ



ವಿಜಯಪುರ : ರಸ್ತೆಗಳಲ್ಲಿ ಅವಶ್ಯವಿರುವ ಕಡೆ ಇಲಾಖೆ ಮಾನದಂಡ ಅನುಸಾರವಾಗಿ ಹಂಪ್ಸ್ ನಿರ್ಮಿಸಿ ಕ್ರಮ ವಹಿಸುವಂತೆ ಸಂಸದ ರಮೇಶ ಜಿಗಜಿಣಗಿ ಸೂಚಿಸಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಜ.10 ಇಂದು ಆಯೋಜಿಸಿದ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ 3ನೇ ತ್ರೈಮಾಸಿಕದ ದಿಶಾ ಸಮಿತಿ ಪ್ರಗತಿ ಪರಿಶೀಲನಾ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಗ್ರಾಮೀಣ, ರಾಜ್ಯ ರಸ್ತೆಗಳಲ್ಲಿ ಅಗತ್ಯವಿರುವ ಕಡೆ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯ ಬಹುತೇಕ ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧ ಕುಡಿನೀರಿನ ಘಟಕಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಶುದ್ಧ ನೀರಿನ ಘಟಕಗಳನ್ನು ದುರಸ್ಥಿಗೊಳಿಸಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿಕೊಡುವಂತೆ ಹಾಗೂ ನಾಗಠಾಣ ಮತಕ್ಷೇತ್ರದ ಕೆಲವು ವಾರ್ಡ್‌ಗಳಲ್ಲಿ ಸಮರ್ಪಕ ಕುಡಿಯುವ ನೀರು ಪೂರೈಸುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಜುಮನಾಳ ರೈಲ್ವೆ ಮೇಲ್ಸೆತುವೆ ಕಾಮಗಾರಿಯನ್ನು ಶೀರ್ಘಗತಿಯಲ್ಲಿ ಪೂರ್ಣಗೊಳಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಟಿ. ಭೂಬಾಲನ್ ಮಾತನಾಡಿ ಭ್ರೂಣ ಲಿಂಗ ಪತ್ತೆ, "ಮಗಳನ್ನು ರಕ್ಷಸಿ ಮಗಳನ್ನು ಓದಿಸಿ" ಯೋಜನೆ ಹಾಗೂ ಶಾಲೆಯಿಂದ ಹೊರಗುಳಿದ ಮಕ್ಕಳ ಶಿಕ್ಷಣದ ಕುರಿತು ಜನರಲ್ಲಿ ಅರಿವು ಮೂಡಿಸಲು ಅಂಗನವಾಡಿ ಆಶಾ ಕಾರ್ಯಕರ್ತೆಯರ ಸಹಕಾರ ಪಡೆದುಕೊಂಡು ಜಿಲ್ಲೆಯ ಮಹಿಳೆ ಹಾಗೂ ಮಕ್ಕಳ ಅಭಿವೃದ್ಧಿ ಮಾಡಲು ತಿಳಿಸಿದರು.

ಬೇಸಿಗೆ ನೀರಿನ ಸಮಸ್ಯೆ ಎದುರಾಗದಂತೆ ಈಗಲೇ ಜಿಲ್ಲೆಯಲ್ಲಿ ಶೇ.100ರಷ್ಟು ನೀರು ತುಂಬಿಸಿಕೊಳ್ಳುವಂತೆ ಅವರು ಅಧಿಕಾರಿಗಳಿಗೆ ಹೇಳಿದರು.

ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಿಷಿ ಆನಂದ ಮಾತನಾಡಿ ಜಿಲ್ಲೆಯ ಯಾವುದೇ ಕ್ಷೇತ್ರಗಳಲ್ಲಿ ಬರುವಂತಹ ದೂರುಗಳಿಗೆ ಸಂಬಂಧಿಸಿದ ಅಧಿಕಾರಿಗಳು ಶೀರ್ಘವಾಗಿ ಪ್ರತಿಕ್ರಿಯಿಸಿ ಪರಿಹಾರ ಕಂಡುಕೊಳ್ಳಿ ಎಂದು ಅಧಿಕಾರಿಗಳಿಗೆ ತಿಳಿಸಿದರು. ಸಭೆಯಲ್ಲಿ ಜಿ.ಪಂ ಮುಖ್ಯ ಯೋಜನಾಧಿಕಾರಿ ನಿಂಗಪ್ಪ ಗೋಟೆ, ಉಪಕಾರ್ಯದರ್ಶಿ ವಿಜಯಕುಮಾರ ಆಜೂರ, ಪ್ರೋಜೆಕ್ಟ್ ಡೈರೆಕ್ಟರ್ ಬಿ.ಎಸ್.ರಾಠೋಡ, ಮುಖ್ಯ ಲೆಕ್ಕಾಧಿಕಾರಿ ರಾಮಣ್ಣ ಅಥಣಿ, ಯೋಜನಾ ಅಂದಾಜು ಮತ್ತು ಮೌಲ್ಯಮಾಪನ ಅಧಿಕಾರಿ ಎ.ಬಿ.ಅಲ್ಲಾಪೂರ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

****

# ರಸ್ತೆ ಸಂಚಾರ ನಿಯಮ ಅರಿತು ವಾಹನ ಚಲಾಯಿಸಿ



ಬಸವನಬಾಗೇವಾಡಿ, ಜ.11 : ಒಂದು ವರ್ಷದಲ್ಲಿ ಜಿಲ್ಲೆಯಲ್ಲಿ ರಸ್ತೆ ಅಪಘಾತದಿಂದ 420 ರಿಂದ 450 ಜನರು ಸಾವಿಗಿಡಾಗಿದ್ದಾರೆ. 1350 ರಿಂದ 1400 ಜನರು ಗಾಯಗೊಂಡಿದ್ದಾರೆ. ಪ್ರತಿಯೊಬ್ಬರೂ ರಸ್ತಾ ಸುರಕ್ಷತಾ ನಿಯಮಗಳನ್ನು ವಾಹನ ಚಲಾಯಿಸಿದರೆ ಇಂತಹ ಅನಾಹುತಗಳನ್ನು ತಪ್ಪಿಸಬಹುದು ಎಂದು ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶಂಕರ ಮಾರಿಹಾಳ ಹೇಳಿದರು.

ಪಟ್ಟಣದ ಪೊಲೀಸ್ ಠಾಣೆ ಆವರಣದಲ್ಲಿ ಶನಿವಾರ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹಕ್ಕೆ ಚಾಲನೆ ನೀಡಿದ ನಂತರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬರೂ ರಸ್ತೆ ಸಂಚಾರ ನಿಯಮ ಅರಿತುಕೊಳ್ಳಬೇಕು, ವಾಹನಗಳನ್ನು ವೇಗವಾಗಿ ಚಾಲನೆ ಮಾಡಬಾರದು. ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ನಡೆದುಕೊಂಡು ಹೋಗುವವರು ಪಾದಚಾರಿ ರಸ್ತೆಯಲ್ಲಿ ಹೋಗುವ ಮೂಲಕ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು. ವಿದ್ಯಾರ್ಥಿನಿಯರಿಗೆ ಯಾರಾದರೂ ತೊಂದರೆ ಕೊಟ್ಟರೆ 112 ಸಂಖ್ಯೆಗೆ ಕರೆಮಾಡುವ ಮೂಲಕ ಪೊಲೀಸ್ ಇಲಾಖೆಯ ನೆರವು ಪಡೆದುಕೊಳ್ಳಬೇಕೆಂದರು.

ಡಿ.ವೈ.ಎಸ್.ಪಿ ಬಲ್ಲಪ್ಪ ನಂದಗಾವಿ ಮಾತನಾಡಿ, ಪಾಲಕರು 18 ವರ್ಷದೊಳಗಿನ ಮಕ್ಕಳಿಗೆ ಬೈಕ್ ಇತರೆ ವಾಹನ ಚಾಲನೆ ಮಾಡದಂತೆ ನೋಡಿಕೊಳ್ಳಬೇಕು. ಬೈಕ್ ಆಟೋಗಳಲ್ಲಿ ನಿಗದಿಗಿಂತ ಹೆಚ್ಚಿನ ಸವಾರರು ಪ್ರಯಾಣಿಸಬಾರದು. ವಾಹನ ಚಾಲನೆ ಮಾಡುವವರು ಕಡ್ಡಾಯವಾಗಿ ಚಾಲನಾ ಪರವಾನಿಗೆ ಹೊಂದಿರಬೇಕು. ಪ್ರತಿಯೊಬ್ಬರ ಜೀವನ ಅಮೂಲ್ಯವಾಗಿದೆ. ನಮ್ಮ ಜೀವನಕ್ಕಿರುವ ಮಹತ್ವ ಇತರರ ಜೀವನಕ್ಕೂ ಇದೆ ಎಂಬುದನ್ನು ಅರಿತುಕೊಳ್ಳಬೇಕು. ನಮ್ಮ ಮನೆಯ ಸದಸ್ಯರಿಗೆ ಹಾಗೂ ಸುತ್ತಮುತ್ತಲಿನ ಜನರಿಗೆ ರಸ್ತೆ ಸಂಚಾರ ನಿಯಮಗಳನ್ನು ತಿಳಿಸಿಕೊಡಬೇಕು ಎಂದು ಹೇಳಿದರು.

ವಕೀಲರ ಸಂಘದ ಅಧ್ಯಕ್ಷ ಎಚ್.ಎಸ್.ಗುರಡ್ಡಿ ಮಾತನಾಡಿ, ಪ್ರತಿಯೊಬ್ಬರೂ ಕಾನೂನಿನ ಬಗ್ಗೆ ತಿಳುವಳಿಕೆ ಹೊಂದಬೇಕು. ಬೈಕ್ ಸವಾರರು ಸೇರಿದಂತೆ ಇತರೆ ವಾಹನ ಚಾಲಕರು ಜಾಗ್ರತೆಯಿಂದ ವಾಹನ ಚಲಾಯಿಸುವ ಮೂಲಕ ಅಪಘಾತಗಳನ್ನ ತಡೆಯಬೇಕು ಎಂದು ಹೇಳಿದರು.

ಪಿಐ ಗುರುಶಾಂತ ದಾಶ್ಯಾಳ, ಬಸ್ ಡಿಪೋ ವ್ಯವಸ್ಥಾಪಕ ಬಿ.ವಿ.ಚಿತ್ತವಾಡಗಿ, ಬಸಮ್ಮ ಹಂಜಗಿ ಮಾತನಾಡಿದರು. ವೇದಿಕೆಯಲ್ಲಿ ಉಪನ್ಯಾಸಕ ಪ್ರಕಾಶ ಮಸಬಿನಾಳ ಇದ್ದರು. ಕಾರ್ಯಕ್ರಮಕ್ಕೂ ಮುನ್ನ ಬಸವೇಶ್ವರ ವೃತ್ತದಲ್ಲಿ ಹೆಚ್ಚುವರಿ ಎಸ್.ಪಿ ಶಂಕರ ಮಾರಿಹಾಳ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿದರು. ಜಾಥಾವು ಬಸ್ ನಿಲ್ದಾಣ, ತೆಲಗಿ ರಸ್ತೆ ಮಾರ್ಗವಾಗಿ ಪೊಲೀಸ್ ಠಾಣೆ ಆವರಣಕ್ಕೆ ತಲುಪಿತು. ಜಾಥಾದಲ್ಲಿ ಬಸವನಬಾಗೇವಾಡಿ ತಹಸೀಲ್ದಾರ ವೈ.ಎಸ್.ಸೋಮನಕಟ್ಟಿ, ಕೊಲ್ಹಾರ ತಹಸೀಲ್ದಾರ ಎಸ್.ಎಸ್.ನಾಯಕಲ್ಲಮಠ, ಡಿವೈಎಸ್ಪಿ ಬಲ್ಲಪ್ಪ ನಂದಗಾಂವಿ, ಪಿಐ ಗುರುಶಾಂತ ದಾಶ್ಯಾಳ, ಪಿಎಸ್‌ಐ ಎಂ.ಎ.ಮುಲ್ಲಾ, ಎಎಸ್‌ಐಗಳಾದ ಎಸ್.ಐ.ಕುಪ್ಪಗೌಡರ, ಎ.ಎಚ್.ರಡ್ಡಿ, ಪೊಲೀಸ್ ಸಿಬ್ಬಂದಿಗಳಾದ ಜೆ.ಎಸ್. ತಕ್ಕೋಡ, ಬಸಪ್ಪ ಶೇಬಗೊಂಡ, ಎಂ.ಬಿ.ಮುಳವಾಡ, ಎಂ.ಡಿ.ಭೂಶೆಟ್ಟಿ, ಮಹಾಂತೇಶ ಸಜ್ಜನ, ಬಿ.ಎಸ್. ಪತ್ರಿ, ಬಸ್ ಡಿಪೋ ವ್ಯವಸ್ಥಾಪಕ ಬಿ.ವಿ.ಚಿತ್ತವಾಡಗಿ, ಸೇರಿದಂತೆ ಬಿಎಲ್ಡಿ ಸಂಸ್ಥೆಯ ಔಷಧ ವಿದ್ಯಾಲಯ, ಅಸ್ಕಿ ಔಷಧ ವಿದ್ಯಾಲಯ, ಬಸವೇಶ್ವರ ಸರ್ಕಾರಿ ಪಪೂ ಕಾಲೇಜು, ಅಕ್ಕನಾಗಮ್ಮ ಸರ್ಕಾರಿ ಪಪೂ ಕಾಲೇಜುಗಳ ಉಪನ್ಯಾಸಕರು, ವಿದ್ಯಾರ್ಥಿಗಳು ಜಾಥಾದಲ್ಲಿ ಭಾಗವಹಿಸಿದ್ದರು.

*****

# ವಾ.ಕ.ರ.ಸಾ. ಸಂಸ್ಥೆಯಿಂದ ವಿಶೇಷ ಹೆಚ್ಚುವರಿ ಸಾರಿಗೆ ವ್ಯವಸ್ಥೆ

ಕಾರವಾರ, : ಪ್ರಸಕ್ತ ಸಾಲಿನ ಸಂಕ್ರಾತಿ ಹಬ್ಬದ ಪ್ರಯುಕ್ತ ಸಾರ್ವಜನಿಕರು ತಮ್ಮ ಸ್ವಂತ ಊರುಗಳಿಗೆ ತೆರಳುವುದರಿಂದ, ವಾ.ಕ.ರ.ಸಾ. ಸಂಸ್ಥೆಯ ವ್ಯಾಪ್ತಿಯ ಹುಬ್ಬಳ್ಳಿ, ಧಾರವಾಡ, ಗದಗ, ಬೆಳಗಾವಿ, ಉತ್ತರ ಕನ್ನಡ, ಹಾವೇರಿ, ಚಿಕ್ಕೋಡಿ ಮತ್ತು ಬಾಗಲಕೋಟೆ ವಿಭಾಗಗಳಿಂದ ಸುಮಾರು 114 ಹೆಚ್ಚುವರಿ ವಿಶೇಷ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.

ಜ.12 ಭಾನುವಾರ ಹಾಗೂ ಜ.14 ರಂದು ಸಂಕ್ರಾತಿ ಹಬ್ಬವಿರುವುದರಿಂದ ಬೆಂಗಳೂರು ಮತ್ತು ಇತರೇ ಪ್ರಮುಖ ಸ್ಥಳಗಳಿಂದ ಹೆಚ್ಚಿನ ಪ್ರಯಾಣಿಕರು ತಮ್ಮ ತಮ್ಮ ಊರುಗಳಿಗೆ ತೆರಳಲು ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತದೆ.

ಬೆಂಗಳೂರಿನಿಂದ ರಾಜ್ಯ/ಅಂತರ ರಾಜ್ಯದ ವಿವಿಧ ಸ್ಥಳಗಳಿಗೆ ತೆರಳಲು ಜ.13 ರಂದು ಹೆಚ್ಚುವರಿ ವಿಶೇಷ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ. ಹಬ್ಬ ಮುಗಿದ ಮೇಲೆ ಜ.14 ಜ,15 ಮತ್ತು ನಂತರದ ದಿನಗಳಂದು ಪ್ರಮುಖ ಸ್ಥಳಗಳಿಂದ ಜನದಟ್ಟಣೆಗೆ ಅನುಗುಣವಾಗಿ ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆಗೊಳಿಸಲಾಗುವುದು.

ವಿಶೇಷ ಸಾರಿಗೆಗಳ ಸದುಪಯೋಗ ಪಡಿಸಿಕೊಳ್ಳುವದರೊಂದಿಗೆ, ಸುಖಕರ ಹಾಗೂ ಸುರಕ್ಷಿತ ಪ್ರಯಾಣಕ್ಕಾಗಿ ಸಂಸ್ಥೆಯ ಬಸ್ಸುಗಳಲ್ಲಿ ಪ್ರಯಾಣಿಸುವಂತೆ ಮತ್ತು ವಿಶೇಷ ಹೆಚ್ಚುವರಿ ಸಾರಿಗೆಗಳ ಸದುಪಯೋಗ ಪಡೆದುಕೊಳ್ಳುವಂತೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಪ್ರಕಟಣೆಯಲ್ಲಿ ತಿಳಿಸಿದೆ.

# ನಗರ ಸಭೆಯ ವಿಶೇಷ ಸಾಮಾನ್ಯ ಸಭೆ

ಕಾರವಾರ,: ನಗರ ಸಭೆಯ ವಿಶೇಷ ಸಾಮಾನ್ಯ ಸಭೆಯು ಜ.15 ರಂದು ಮಧ್ಯಾಹ್ನ 12 ಗಂಟೆಗೆ ನಗರಸಭೆಯ ಸಭಾಂಗಣದಲ್ಲಿ ನಡೆಯಲಿದೆ ಎಂದು ನಗರಸಭೆಯ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇಂದು ಕವಿ, ಕಾವ್ಯ, ಕುಂಚ, ಗಾಯನೋತ್ಸವ

ಮೂಡಲಗಿ : ಮೂಡಲಗಿ ಚುಟುಕು ಸಾಹಿತ್ಯ ಪರಿಷತ್ತು ತಾಲೂಕಾ ಘಟಕ ಹಾಗೂ ಶ್ರೀ ಶ್ರೀಪಾದಬೋಧ ಸ್ವಾಮೀಜಿ ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ ಇವರ ಸಹಯೋಗದಲ್ಲಿ ಸ್ವಾಮಿ ವಿವೇಕಾನಂದ ಜಯಂತ್ಯೋತ್ಸವ ಹಾಗೂ ಮಕರ ಸಂಕ್ರಾಂತಿ ನಿಮಿತ್ಯ ಕವಿ, ಕಾವ್ಯ, ಕುಂಚ, ಗಾಯನೋತ್ಸವ ಕಾರ್ಯಕ್ರಮವು

ಶ್ರೀ ಶ್ರೀಪಾದಬೋಧ ಸ್ವಾಮಿಜಿ ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯಲ್ಲಿ ಇಂದು ರವಿವಾರ ಜ 12ರಂದು ಮುಂಜಾನೆ 10 ಗಂಟೆಗೆ ಶಿವಬೋಧರಂಗ ಸಂಸ್ಥಾನ ವ್ಮಠದ ಪೀಠಾಧಿಪತಿ ಶ್ರೀ ದತ್ತಾತ್ರಯಬೋಧ ಮಹಾಸ್ವಾಮಿಗಳು ದಿವ್ಯ ಸಾನಿಧ್ಯ ಜರುಗಲಿದೆ ಎಂದು ಮೂಡಲಗಿ ಘಟಕದ ಅಧ್ಯಕ್ಷ ಚಿದಾನಂದ ಹೂಗಾರ ತಿಳಿಸಿದ್ದಾರೆ,

ಶ್ರೀ ಶ್ರೀಪಾದಬೋಧ ಸ್ವಾಮಿಜಿ ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದ ಪ್ರಾಚಾರ್ಯ ಮಹೇಶ ವಾಯ್. ಕಂಬಾರ ಅಧ್ಯಕ್ಷತೆ ವಹಿಸುವರು, ಉದ್ಘಾಟಕರಾಗಿ ಗೋಕಾಕದ ಹಿರಿಯ ಸಾಹಿತಿ ಚಂದ್ರಶೇಖರ ಅಕ್ಕಿ ಆಗಮಿಸುವರು, ಕ್ಷೇತ್ರ ಶಿಕ್ಷಣಾಧಿಕಾರಿ ಅಜೀತ ಮನ್ನಿಕೇರಿ ಮುಖ್ಯ ಅತಿಥಿಗಳಾಗಿ ಸಾಹಿತಿಗಳಾದ ಜಿ.ಕೆ. ಕಾಡೇಶಕುಮಾರ ಪ್ರೊ. ಸಂಗಮೇಶ ಗುಜಗೊಂಡ, ಬಾಲಶೇಖರ ಬಂದಿ, ಸಿದ್ರಾಮ ದ್ಯಾಗಾನಟ್ಟಿ ಡಾ. ಮಹಾದೇವ ಜಿಡ್ಡಿಮನಿ, ಅಧ್ಯಕ್ಷ ಕ.ಸಾ.ಪ ಡಾ॥ ಸಂಜಯ ಶಿಂಧಿಹಟ್ಟಿ ಶಿವಕುಮಾರ ಕೋಡಿಹಾಳ, ಸಿದ್ರಾಮ ದ್ಯಾಗಾನಟ್ಟಿ ಸೋಮಶೇಖರ ಕಂಟೀಕಾರವ್ಮಠ, ದುರ್ಗಪ್ಪ ದಾಸನ್ನವರ ಬಸಪ್ಪ ಹೆಬ್ಬಾಳ ಡಾ. ಮಹಾದೇವ ಪೋತರಾಜ ಆಗಮಿಸುವರು ಎಂದು ಸಂಘಟಕರು ತಿಳಿಸಿದ್ದಾರೆ,

*******

# ತಾಲೂಕು ಕಚೇರಿ, ಸರ್ವೇ ಮತ್ತು ನೋಂದಣಿ ಇಲಾಖೆಗಳ ಎಲ್ಲ ಭೂ ದಾಖಲೆಗಳ ಡಿಜಿಟಲೀಕರಣಕ್ಕೆ ಸಚಿವ ಶಿವಾನಂದ ಪಾಟೀಲ ಚಾಲನೆ



ಬಸವನಬಾಗೇವಾಡಿ:ಪಟ್ಟಣದ ಮಿನಿವಿಧಾನಸೌಧದ ಮೇಲಂಸ್ತಿನ ಕೋಣೆಯಲ್ಲಿ ತಾಲೂಕು ಕಚೇರಿ, ಸರ್ವೆ ಮತ್ತು ನೋಂದಣಿ ಇಲಾಖೆಗಳ ಎಲ್ಲ ಭೂ ದಾಖಲೆಗಳ ಡಿಜಿಟಲೀಕರಣಕ್ಕೆ ಸಕ್ಕರೆ, ಜವಳಿ ಮತ್ತು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲರು ಶನಿವಾರ ಚಾಲನೆ ನೀಡಿದರು. ಸಚಿವ ಶಿವಾನಂದ ಪಾಟೀಲ ಮಾತನಾಡಿ, ಭೂಸುರಕ್ಷಾ ಯೋಜನೆಯು ರಾಜ್ಯದ ಕಂದಾಯ ಇಲಾಖೆಯು ಕೈಗೊಂಡಿರುವ ಒಂದು ಮಹತ್ವಾಕಾಂಕ್ಷಿ ಯೋಜನೆಯಾಗಿದೆ. ಈ ಯೋಜನೆಯಡಿ ತಾಲೂಕು ಕಚೇರಿಯ ಅಭಿಲೇಖಾಲಯಗಳಲ್ಲಿರುವ ಅತ್ಯಂತ ಪ್ರಮುಖವಾದ ಹಳೆಯ ಮತ್ತು ಸ್ವಾತಂತ್ರ್ಯಪೂರ್ವದ ಅವಧಿಯ ಭೂ ದಾಖಲೆಗಳನ್ನು ಇಂಡೆಕ್ಸಿಂಗ್,ಕ್ಯಾಟಲಾಗಿಂಗ್, ಸ್ಕ್ಯಾನಿಂಗ್ ಮತ್ತ ಅಪ್‌ಲೋಡಿಂಗ್ ಮಾಡಿ ಗಣಕೀಕರಣಗೊಳಿಸಲಾಗುತ್ತಿದೆ. ಹಳೆಯ ಶಿಥಿಲಗೊಂಡ ದಾಖಲೆಗಳನ್ನು ಶಾಶ್ವತವಾಗಿ ಡಿಜಿಟಲ್ ರೂಪದಲ್ಲಿ ಉಳಿಸಿಕೊಳ್ಳಲು ನಕಲಿ ದಾಖಲೆಗಳ ಸೃಷ್ಟಿಯನ್ನು ತಡೆಗಟ್ಟಲು ಮತ್ತು ಅವುಗಳನ್ನು ಅನ್‌ಲೈನ್‌ನಲ್ಲಿ ನಾಗರಿಕರಿಗೆ ಲಭ್ಯವಾಗುವಂತೆ ಮಾಡುವ ನಿಟ್ಟಿನಲ್ಲಿ ಭೂ ಸುರಕ್ಷಾ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದರು.

ಡಿಜಿಟಲೀಕರಣದಿಂದ ಅಭಿಲೇಖಾಲಯದ ಸಿಬ್ಬಂದಿಗಳನ್ನು ಸಂಪರ್ಕಿಸಿ ದಾಖಲೆಗಳನ್ನು ಪಡೆಯುವುದು ತಪ್ಪುತ್ತದೆ. ದಾಖಲೆಗಳ ವ್ಯತ್ಯಾಸ ರೆಕಾರ್ಡ್ ಮಿಸ್ಸಿಂಗ್, ವಿಳಂಬ ಎಲ್ಲ ಸಮಸ್ಯೆಗಳು ಪರಿಹಾರಯಾಗಲಿದೆ. ಜನರು ಕಚೇರಿಗಳಿಗೆ ದಾಖಲೆಗಳಿಗಾಗಿ ಕಚೇರಿಗೆ ಭೇಟಿ ನೀಡುವ ಬದಲು ಸುಲಭವಾಗಿ ಆನ್‌ಲೈನ್ ಮೂಲಕ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದರು.

ರಾಜ್ಯದಲ್ಲಿ ಪ್ರಸ್ತುತ 209 ತಾಲೂಕು ಕಚೇರಿಗಳಲ್ಲಿ ಭೂ ದಾಖಲೆಗಳ ಗಣಕೀಕರಣ ಕಾರ್ಯ 2025 ಜನೇವರಿಯಿಂದ ಆರಂಭಿಸಲಾಗುತ್ತಿದೆ. ಬಸವನಬಾಗೇವಾಡಿ, ಕೊಲ್ಹಾರ, ನಿಡಗುಂದಿ ಮೂರು ತಾಲೂಕು ಸೇರಿ ಅಖಂಡ ಬಸವನಬಾಗೇವಾಡಿ ತಾಲೂಕಿಗೆ ಸಂಬಂಧಿಸಿದ ಅಭಿಲೇಖಾಲಯದ ದಾಖಲೆಗಳ ಗಣಕೀಕರಣ ಕಾರ್ಯ ಇಂದಿನಿಂದ ಆರಂಭವಾಗಲಿದೆ. ಇದಕ್ಕೆ ಸಂಬಂಧಿಸಿದಂತೆ ತರಬೇತಿ ಪಡೆದ ಸಿಬ್ಬಂದಿ ಕಾರ್ಯನಿರ್ವಹಿಸಲಿದ್ದಾರೆ. ಈ ಕಾರ್ಯ ಎಂಟು ತಿಂಗಳಲ್ಲಿ ಪೂರ್ಣಗೊಳಲಿದೆ. ದಾಖಲೆಗಳು ಗಣಕೀಕರಣಗೊಂಡರೆ ದಾಖಲೆಗಳು ನಶಿಸದೇ, ಬೆಂಕಿಗೆ ಬಿದ್ದು ಹಾಳಾಗುವದನ್ನು ತಡೆದು ಸುರಕ್ಷಿತವಾಗಿಡಬಹುದು ಎಂದ ಅವರು, ಅಖಂಡ ಬಸವನಬಾಗೇವಾಡಿ ತಾಲೂಕಿಗೆ ಸಂಬಂಧಿಸಿದಂತೆ ಎ ಮತ್ತ ಬಿ ಕೆಟಗೇರಿಯ ಅಂದಾಜು 68,987 ಕಡತಗಳಿದ್ದು. ಕಡತಗಳ ಒಟ್ಟು ಪುಟಗಳು ಅಂದಾಜು 18,22,308 ಗಳಿದ್ದು. ವಹಿಗಳು 5,389 ಗಳಿದ್ದು. ಅವುಗಳ ಅಂದಾಜು ಪುಟಗಳು 9,48,587 ಆಗುತ್ತವೆ ಎಂದರು.

ಈ ಸಂದರ್ಭದಲ್ಲಿ ಕಂದಾಯ ಉಪವಿಭಾಗಾಧಿಕಾರಿ ಗುರುನಾಥ ದಡ್ಡೆ, ಬಸವನಬಾಗೇವಾಡಿ ತಹಸೀಲ್ದಾರ ವೈ.ಎಸ್.ಸೋಮನಕಟ್ಟಿ, ಕೊಲ್ಹಾರ ತಹಸೀಲ್ದಾರ ಎಸ್.ಎಸ್.ನಾಯಕಲ್ಲಮಠ, ನಿಡಗುಂದಿ ತಹಸೀಲ್ದಾರ ಎ.ಡಿ.ಅಮರವಾಡಗಿ, ಗ್ರೇಡ್-2 ತಹಸೀಲ್ದಾರರಾದ ಜಿ.ಎಸ್.ನಾಯಕ, ಎಚ್.ಎನ್.ಬಡಿಗೇರ, ಎಡಿಎಲ್‌ಆರ್ ಜಿ.ಬಿ.ವಗ್ಗನವರ, ಭೂ ದಾಖಲೆಗಳ ಇಲಾಖೆಯ ವ್ಯವಸ್ಥಾಪಕ ಎ.ಬಿ.ಕಲಾದಗಿ, ಶಿರಸ್ತೇದಾರರಾದ ಬಿ.ಆರ್.ಪೋಲೇಶಿ, ಎಂ.ಡಿ.ಬಳಗಾನೂರ, ಎ.ಎಚ್.ಬಳೂರಗಿ, ಪುರಸಭೆ ಮುಖ್ಯಾಕಾರಿ ಎಚ್.ಎಸ್.ಚಿತ್ತರಗಿ, ಸಹಾಯಕ ಕೃಷಿ ನಿರ್ದೇಶಕ ಎಂ.ಎಚ್.ಯರಝುರಿ, ಸಿಬ್ಬಂದಿಗಳಾದ ರಾಜು ಇವಣಗಿ, ಶಂಕರ ತಳವಾರ, ಬಿ.ಜಿ.ದಾನಿ, ಅನಿಲ ಅವಟಿ,-ಎಸ್.ಎಸ್.ದೇಸಾಯಿ,ಸಂತೋಷ ಕುಂಟೋಜಿ,ಜಗದೀಶ ಹಾರಿವಾಳ, ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಸುರೇಶ ಹಾರಿವಾಳ, ರಾಜ್ಯ ಸಹಕಾರ ಮಹಾಮಂಡಳ ನಿರ್ದೇಶಕ ಈರಣ್ಣ ಪಟ್ಟಣಶೆಟ್ಟಿ, ಎಪಿಎಂಸಿ ಮಾಜಿ ಅಧ್ಯಕ್ಷ ಶೇಖರ ಗೊಳಸಂಗಿ, ಬಸವೇಶ್ವರ ಅರ್ಬನ್ ಬ್ಯಾಂಕಿನ ನಿರ್ದೇಶಕ ಶಂಕರಗೌಡ ಬಿರಾದಾರ, ಪುರಸಭೆ ಸದಸ್ಯರಾದ ಜಗದೇವಿ ಗುಂಡಳ್ಳಿ, ನಜೀರ ಗಣಿ, ಪ್ರವೀಣ ಪೂಜಾರಿ, ಮುಖಂಡರಾದ ಸಂಗಮೇಶ ಓಲೇಕಾರ, ಜಟ್ಟಿಂಗರಾಯ ಮಾಲಗಾರ, ಪರಶುರಾಮ ಜಮಖಂಡಿ, ಮಹಾಂತೇಶ ಸಾಸಾಬಾಳ, ರವಿ ಬಾವಿಕಟ್ಟಿ, ಗುರುಲಿಂಗ ಬಸರಕೋಡ, ಸಂಗಯ್ಯ ಕಾಳಹಸ್ತೇಶ್ವರಮಠ, ಈಶ್ವರ ಜಾಧವ ಸೇರಿದಂತೆ ಇತರರು ಇದ್ದರು.

# ಭೂದಾಖಲೆಗಳ ಅಭಿಲೇಖಾಲಯದ ಗಣಕೀಕರಣ ವ್ಯವಸ್ಥೆಗೆ ಚಾಲನೆ



ರಾಮದುರ್ಗ: ಸರಕಾರಿ ದಾಖಲೆಗಳು ಗಣಕೀಕರಣಗೊಂಡಲ್ಲಿ ಜನತೆಗೆ ವಿವಿಧ ಇಲಾಖೆಗಳೊಂದಿಗೆ ತಮ್ಮ ಪತ್ರ ವ್ಯವಹಾರ ಮಾಡಲು ಮತ್ತಷ್ಟು ಪಾರದರ್ಶಕತೆ ದೊರೆತು, ತ್ವರಿತಗತಿಯಲ್ಲಿ ದಾಖಲೆಗಳು ಲಭ್ಯವಾಗಲು ಸಹಕಾರಿಯಾಗುತ್ತದೆ ಎಂದು ವಿಧಾನಸಭೆ ಮುಖ್ಯ ಸಚೇತಕ ಹಾಗೂ ಶಾಸಕ ಅಶೋಕ ಪಟ್ಟಣ ಹೇಳಿದರು.

ಪಟ್ಟಣದ ಮಿನಿ ವಿಧಾನಸೌಧದ ಭೂಮಾಪನ ಇಲಾಖೆಯ ಅಭಿಲೇಖಾಲಯದಲ್ಲಿ ಗಣಕೀಕರಣ ವ್ಯವಸ್ಥೆಯ ಪ್ರಾರಂಭೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದಅವರು, ಇಲಾಖೆಯ ಅಧಿಕಾರಿಗಳು ಸರಕಾರದ ಸೌಲಭ್ಯಗಳನ್ನು ಜನತೆಗೆ ವಿಳಂಭ ಮಾಡದೇತಲುಪಿಸುವ ಕಾರ್ಯ ಮಾಡಬೇಕು. ವಿನಾಕಾರಣ ಜನತೆಯನ್ನು ಅಲೆದಾಡಿಸಿದ ಕುರಿತುದೂರು ಕೇಳಿ ಬರದಂತೆ ನೋಡಿಕೊಳ್ಳಬೇಕು ಎಂದುಇದೇ ಸಂದರ್ಭದಲ್ಲಿ ಸೂಚನೆ ನೀಡಿದರು.

ತಹಶೀಲ್ದಾರ ಪ್ರಕಾಶ ಹೊಳೆಪ್ಪಗೋಳ ಮಾತನಾಡಿ, ಸರ್ವೆಇಲಾಖೆಯಲ್ಲಿ ಕೆಲವು ಅಗತ್ಯ ದಾಖಲೆಗಳನ್ನು ಬರವಣಿಗೆ ರೂಪದಲ್ಲಿ ಜನತೆಗೆ ಒದಗಿಸಲಾಗುತ್ತಿತ್ತು. ಬಹುತೇಕ ದಾಖಲೆಗಳನ್ನು ಗಣಕೀಕರಣ ಮಾಡುವ ವ್ಯವಸ್ಥೆಯನ್ನು ಸರಕಾರ ಜಾರಿಗೊಳಿಸಿದೆ.ಸರಕಾರದ ನಿರ್ದೇಶನದಂತೆ ತಾಲೂಕಿನ ಜನತೆಗೆ ಯಾವುದೇ ತೊಂದರೆಯಾಗದಂತೆ ಅವರ ದಾಖಲೆಗಳನ್ನು ಒದಗಿಸುವ ಕೆಲಸ ಮಾಡುತ್ತೇವೆ ಎಂದು ಭರವಸೆ ನೀಡಿದರು.

ಭೂದಾಖಲೆಗಳ ಅಭಿಲೇಖಾಲಯದ ಸಹಾಯಕ ನಿರ್ದೇಶಕ ಪ್ರಕಾಶ ಸತ್ತಿಗೇರಿ ಮಾತನಾಡಿ, ಸರ್ವೇ

ಇಲಾಖೆಯಲ್ಲಿನ ದಾಖಲೆಗಳನ್ನು ರೈತರಿಗೆಒದಗಿಸಲು ಅವುಗಳ ಹುಡುಕಾಟದಲ್ಲಿ ಸಮಯ ವ್ಯರ್ಥವಾಗುತ್ತಿತ್ತು.ಅವುಗಳ ಗಣಕೀಕರಣದಿಂದರೈತರಿಗೆ ಶೀಘ್ರ ದಾಖಲೆಗಳನ್ನು ಒದಗಿಸಲು ಸಾಧ್ಯವಾಗುತ್ತದೆಎಂದರು.

ಗ್ರೇಡ್-2 ತಹಶೀಲ್ದಾರ ಸಿದ್ಧಾರೂಢ ಬನ್ನಿಕೊಪ್ಪ, ಸಿಡಿಪಿಓ ಶಂಕರಕುಂಬಾರ, ಸರ್ವೇ ಇಲಾಖೆಯ

ಸಂಜೀವಕುಮಾರ ಕಡ್ಲಸ್ಕರ, ಶಿರಸ್ತೆದಾರ ಚೊಳಚಗುಡ್ಡ, ಆಹಾರ ಇಲಾಖೆಯಈಶ್ವರ, ಸಂಜೀವ ಹಮ್ಮನ್ನವರ, ಸಂಜಯ ಖಾತೆದಾರ ಸೇರಿದಂತೆ ಇತರರಿದ್ದರು.

# ರಾಯಣ್ಣನ ವೀರಜ್ಯೋತಿಗೆ ಅದ್ದೂರಿ ಸ್ವಾಗತ




ಯರಗಟ್ಟಿ : ಪಟ್ಟಣಕ್ಕೆ ಆಗಮಿಸಿದ ಸಂಗೊಳ್ಳಿ ರಾಯಣ್ಣ ವೀರಜ್ಯೋತಿಗೆ ತಾಲೂಕಾ ಆಡಳಿತ, ಪಟ್ಟಣ ಪಂಚಾಯತಿ, ಜನಪ್ರತಿನಿಧಿಗಳು, ನಾಗರೀಕರು ಎಲ್ಲ ಇಲಾಖೆ ಸಿಬ್ಬಂದಿ ಡೋಳ್ಳು ಮೇಳ ಮತ್ತು ಆರತಿಯೋಂದಿಗೆ ಅದ್ದೂರಿಯಾಗಿ ರಾಯಣ್ಣ ವೃತ್ತದಲ್ಲಿ ಸ್ವಾಗತಿಸಿದ ತಹಶೀಲ್ದಾರ ಮಾಧವಾನಂದ ಗುಂಡಪ್ಪಗೊಳ ಪೂಜೆ ಸಲ್ಲಿಸಿದರು.

ಈ ವೇಳೆ ಪ. ಪಂ. ಮುಖ್ಯಾಧಿಕಾರಿ ಡಿ. ಎನ್. ತಹಶೀಲ್ದಾರ, ಸಿ.ಪಿ.ಐ. ಈರಯ್ಯ ಮಠಪತಿ, ವೈದ್ಯಾಧಿಕಾರಿ ಡಾ. ಬಿ. ಎಸ್. ಬಳ್ಳೂರ, ಪಶುವೈದ್ಯಾಧಿಕಾರಿ ಡಾ. ಎಂ. ವಿ. ಪಾಟೀಲ, ಪಿ.ಎಸ್.ಐ. ಲಕ್ಷ್ಮಣ ಮಾಳಿ, ಎ.ಎಸ್.ಐ, ಕಡಕೋಳ, ಪ. ಪಂ. ಸದಸ್ಯರಾದ ಹನುಮಂತ ಹಾರುಗೊಪ್ಪ, ನಿಖಿಲ ಪಾಟೀಲ, ಕೆ.ಎಂ.ಎಫ್. ನಿರ್ದೇಶಕ ಶಂಕರ ಇಟ್ನಾಳ, ಶಿವಾನಂದ ಕರಿಗೋಣ್ಣವರ, ಮಂಜುನಾಥ ತಡಸಲೂರ, ಮುದಕಪ್ಪ ತಡಸಲೂರ, ಕಂದಾಯ ನಿರೀಕ್ಷಕ ವಾಯ್. ಎಫ್. ಮುರ್ತೆನ್ನವರ, ಗ್ರಾಮ ಆಡಳಿತಾಧಿಕಾರಿ ಎಲ್. ಬಿ. ದಳವಾಯಿ, ಮಾರುತಿ ಅರಭಾವಿ, ಲಕ್ಷ್ಮಣ ದಳವಾಯಿ, ಹಣಮಂತ ಪೂಜೇರ, ಯರಗಟ್ಟಿ ಕುರುಬರ ಸಂಘದ ಯುವ ಘಟಕದ ಅಧ್ಯಕ್ಷ ಮಹಾದೇವ ಮುರಗೋಡ, ವಿಠಲ ಹಾರುಗೊಪ್ಪ, ವೀರನಗೌಡ ಪಾಟೀಲ, ವಿಠ್ಠಲಗೌಡ ದೇವರಡ್ಡಿ ಫಕ್ಕೀರಪ್ಪ ಕಿಲಾರಿ, ಸುಭಾಸ್ ಐದುಡ್ಡಿ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ಮುಖಂಡರು, ಮುಂತಾದವರು ಉಪಸ್ಥಿತರಿದ್ದರು.

# ಮುಗಳಿಹಾಳ ಸ.ಮಾ. ಹಿ.ಪ್ರಾ. ಶಾಲೆಯ ಪ್ರತಿಭೆ ರಾಜ್ಯ ಮಟ್ಟಕ್ಕೆ ಆಯ್ಕೆ




ಯರಗಟ್ಟಿ: ಬೆಳಗಾವಿಯಲ್ಲಿ ನಡೆದ ಜಿಲ್ಲಾಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಸಮೀಪದ ಮುಗಳಿಹಾಳ ಗ್ರಾಮದ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಯಾದ ಕುಮಾರಿ ಶೈಲಾ ಪತ್ತಾರ ಇವಳು ಆಶುಭಾ?ಣ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾಳೆ.

ಇವಳಿಗೆ ಗ್ರಾ. ಪಂ. ಅಧ್ಯಕ್ಷರು, ಉಪಾಧ್ಯಕ್ಷರು ಸರ್ವ ಸದಸ್ಯರು ಹಾಗೂ ಎಸ್ ಡಿ ಎಂ ಸಿ ಅದ್ಯಕ್ಷರು,ಉಪಾಧ್ಯಕ್ಷರು, ಸರ್ವ ಸದಸ್ಯರು, ಶಾಲೆಯ ಪ್ರಧಾನ ಗುರುಮಾತೆ, ಸಹ ಶಿಕ್ಷಕರು ಮತ್ತು ಊರಿನ ಹಿರಿಯರು, ಹಳೆಯ ವಿದ್ಯಾರ್ಥಿಗಳು ಅಭಿನಂದನೆ ಸಲ್ಲಿಸಿದರು.

********

# ಗಾಯನ ಪ್ರತಿಭಾ ಪ್ರಶಸ್ತಿ ೮ನೇ ಸಿಜನ್ ಆಡಿಶನ್ ಕಾರ್ಯಕ್ರಮಕ್ಕೆ ಚಾಲನೆ

ರಾಯಬಾಗ: ಆಡಿಶನ್ ದಲ್ಲಿ ಭಾಗವಹಿಸಿದ ಯುವ ಪ್ರತಿಭಾವಂತ ಗಾಯಕರು ಉತ್ತಮವಾಗಿ ಹಾಡುಗಳನ್ನು ಹಾಡುವ ಮೂಲಕ ಈ ವೇದಿಕೆಯ ಸದುಪಯೋಗ ಪಡೆದುಕೊಂಡು ಅಂತಿಮ ಸ್ಪರ್ಧೆಯಲ್ಲಿ ಪಾಲ್ಗೊಳ್ಳಬೇಕು ಎಂದು ಶಾಸಕ ದುರ್ಯೋಧನ ಐಹೊಳೆ ಹೇಳಿದರು.

ಶನಿವಾರ ಪಟ್ಟಣದ ಮಹಾಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಶಾಲಾ ಆವರಣದಲ್ಲಿ ಹಮ್ಮಿಕೊಂಡಿದ್ದ ಐಹೊಳೆ ಗಾಯನ ಪ್ರತಿಭಾ ಪ್ರಶಸ್ತಿ 8ನೇ ಸಿಜನ್ ಆಡಿಶನ್ ಕಾರ್ಯಕ್ರಮಕ್ಕೆ ಜ್ಯೋತಿ ಬೆಳಗಿಸುವುದರ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಈಗಾಗಲೇ ಐಹೊಳೆ ಗಾಯನ ಪ್ರತಿಭಾ ಪ್ರಶಸ್ತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಯುವ ಗಾಯಕರು ರಾಜ್ಯಮಟ್ಟದ ಟಿ.ವಿ ಚಾನಲ್‌ನ ಸಂಗೀತ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಹೆಮ್ಮೆಯ ವಿಷಯವಾಗಿದೆ. ನಿರ್ಣಾಯಕರು ಯಾವದೇ ತಾರತಮ್ಯ ಮಾಡದೇ ಸರಿಯಾದ ನಿರ್ಣಯ ನೀಡಬೇಕೆಂದರು.

ಕಾರ್ಯಕ್ರಮದಲ್ಲಿ ಮುಖಂಡರಾದ ರಾಜಶೇಖರ ಖನದಾಳೆ,ಸುಶೀಲಾ ಐಹೊಳೆ ಮಾಯವ್ವ ಐಹೊಳೆ ಅಣ್ಣಾಸಾಹೇಬ ಖೆಮಲಾಪೂರೆ,ಅರುಣ ಐಹೊಳೆ ,ಶಿವಾನಂದ ಐಹೊಳೆ ನಟರಾಜ ಮಾವರಕರ, ಸದಾನಂದ ಹಳಿಂಗಳಿ, ಎಸ್. ಎಸ್.ಕಾಂಬಳೆ, ಜಾನಪದ ಗಾಯಕ ಶಬ್ಬಿರ ಡಾಂಗೆ, ಶ್ರೀಶೈಲ ಕಾಗಲ,ಎಮ್ ಡಿ ಆನಂದ, ಬಾಷಾ ಖಾನ, ಶ್ರೀಕಾಂತ ಕೆಂದೂಳಿ, ರಾಜಶ್ರೀ ಪಾಟೀಲ, ಮಹಾನಂದಾ ಗೋಸಾವಿ, ಬಿ.ಬಿ.ಪೂಜಾರ ಇದ್ದರು.



# ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆ ಸಾನ್ವಿ ಗೆ ಪ್ರಥಮ ಸ್ಥಾನ




ನೇಸರಗಿ.ಬೆಳಗಾವಿ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಸಮೀಪದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಹನಮನಹಟ್ಟಿ ವಿದ್ಯಾರ್ಥಿನಿಯರಾದ ಸಾನ್ವಿ ಯಲ್ಲಪ್ಪ ಬನ್ನೆಪ್ಪಗೋಳ ಧಾರ್ಮಿಕ ಪಠಣ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಹಾಗೂ ರೋಹಿಣಿ ಬಸಯ್ಯ ಪೂಜೇರಿ ಅಭಿನಯ ಗೀತೆಯಲ್ಲಿ ದ್ವಿತೀಯ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿರುತ್ತಾರೆ. ಪ್ರಶಸ್ತಿ ಗಳಿಸಿದ ವಿದ್ಯಾರ್ಥಿನಿಯರಿಗೆ ಬಿ. ಇ. ಓ ಎ ಎನ್. ಪ್ಯಾಟಿ, ಸಿ ಆರ್ ಪಿ ರಾಜು ಹಕ್ಕಿ, ಗುರುಮಾತೆಯರಾದ ಶ್ರೀಮತಿ ಎಮ್ ಎಸ್ ಪಾಟೀಲ, ಶಾಲೆಯ ಎಸ್ಡಿಎಂಸಿ ಹಾಗೂ ಶಿಕ್ಷಕ ವರ್ಗ ಅಭಿನಂದನೆಗಳನ್ನು ತಿಳಿಸಿದ್ದಾರೆ.

# ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನ ಕಾರ್ಯಕ್ರಮ




ಗೋಕಾಕ: ವಿದ್ಯಾರ್ಥಿಗಳನ್ನು ಪ್ರತಿಭಾವಂತರನ್ನಾಗಿ ಮಾಡುವಲ್ಲಿ ಗುರುಗಳ ಪಾತ್ರ ಮಹತ್ವದಾಗಿದ್ದು, ವಿದ್ಯಾರ್ಥಿಗಳಿಗೆ ತಾಯಿ ಮತ್ತು ತಂದೆಯೆ ಮೊದಲ ಪಾಠಶಾಲೆ ಎಂದು ಚಿಕ್ಕೋಡಿ ಕೆ.ಎಲ್.ಇ ಮಹಾವಿದ್ಯಾಲಯದ ಪ್ರಾಚಾರ್ಯ ಚೇತನ ಅಲವಾಡೆ ಹೇಳಿದರು.

ಗೋಕಾಕ ಶಿಕ್ಷಣ ಸಂಸ್ಥೆಯ ಮಾಡರ್ನ್ ಆಂಗ್ಲ ಮಾಧ್ಯಮ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಪಾಲ್ಗೊಂಡು ಅವರು ಮಾತನಾಡಿ, ಇಂದಿನ ಪ್ರಸ್ತುತ ಯುಗದಲ್ಲಿ ಮೊಬೈಲ್ ವಿದ್ಯಾರ್ಥಿಗಳನ್ನು ಮೊದಲು ಮಾಡಿಕೊಂಡು ಸಮಾಜದ ಎಲ್ಲಾ ಸಮೂಹಗಳ ಮೇಲೆ ವ್ಯತಿರಿಕ್ತ ಪರಿಣಾಮ ಬಿರುತ್ತಿದೆ. ಮೊಬೈಲ್ ಇಲ್ಲದ ಬದುಕಲು ಸಾಧ್ಯವಿಲ್ಲ ಎಂಬಾರ್ಥದಲ್ಲಿ ನಾವು ಬದುಕುತ್ತಿದ್ದೇವೆ. ವಿದ್ಯಾರ್ಥಿ ಜೀವನದಲ್ಲಿ ಗುರಿಗಳನ್ನು ಹೊಂದಿ ವಿದ್ಯಾರ್ಥಿಗಳು ಅಭ್ಯಾಸ ಮಾಡಬೇಕು. ವಿದ್ಯಾರ್ಥಿಗಳು ಶಾಲೆಯಲ್ಲಿ ಮೊದಲ ಸ್ಥಾನ ಬರಬೇಕು ಎಂದು ಭಾವಿಸದೆ. ವ್ಯಕ್ತಿತ್ವವನ್ನು ರೂಪಿಸಿಕೊಂಡು ಬದುಕನ್ನು ಕಟ್ಟಿಕೊಳ್ಳಬೇಕು. ಭಾಷೆ, ವ್ಯಕ್ತಿತ್ವ ರೂಪಿಸಿಕೊಳ್ಳಲು ಕಲಿಕೆ ಒಂದು ಅಂಗವಾಗಿದೆ. ವಿದ್ಯಾರ್ಥಿಗಳಿಗೆ ಪಾಲಕರು ಮತ್ತು ಶಿಕ್ಷಕರು ಚಿಕ್ಕ, ಚಿಕ್ಕ ಗುರಿಗಳನ್ನು ನೀಡಿ ಅವರಿಗೆ ಬಲಿಷ್ಠ ಮಾಡಬೇಕು. ಮಕ್ಕಳಲ್ಲಿ ವಿದ್ಯಾಭ್ಯಾಸದ ಬಗ್ಗೆ ಆಸಕ್ತಿ ಮೂಡಿಸುವದರ ಜೊತೆಗೆ ಜಗತ್ತಿನಲ್ಲಿ ಏನು ನಡೆಯುತ್ತಿದೆ ಎಂಬುದರ ಬಗ್ಗೆ ಅವರಿಗೆ ಮಾಹಿತಿ ನೀಡಬೇಕು ಅಂದಾಗ ಮಾತ್ರ ಅವರು ಜೀವನದಲ್ಲಿ ಯಶಸ್ವಿ ಬದುಕು ಕಟ್ಟುಕೊಳ್ಳಲು ಸಾಧ್ಯ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಕ್ರೀಡೆಯಲ್ಲಿ ಭಾಗವಹಿಸಿ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದ ಹಾಗೂ ಸಾಧಕ ವಿದ್ಯಾರ್ಥಿಗಳಿಗೆ ಸತ್ಕರಿಸಿ, ಗೌರವಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ನಿರ್ದೇಶಕ ಎನ್.ಸಿ ಪಟ್ಟಣಶೆಟ್ಟಿ ವಹಿಸಿದ್ದರು.ಈ ಸಂದರ್ಭದಲ್ಲಿ ಕಾರ್ಯದರ್ಶಿ ಆರ್ ಎಂ ವಾಲಿ, ಮುಖ್ಯೋಪಾಧ್ಯಾಯ ಎಸ್ ಕೆ ಮಠದ, ಪ್ರಧಾನ ಗುರುಮಾತೆ ಕೆ ಎಚ್ ಮೇಟಿ, ವಿದ್ಯಾರ್ಥಿ ಪ್ರತಿನಿದಿಗಳಾದ ಕುಮಾರ ಮಣಿಕಂಠ ಕುರಬೇಟ್, ಕುಮಾರಿ ಸಹಾನ ಪತ್ತಾರ ಉಪಸ್ಥಿತರಿದ್ದರು.

# ರಸ್ತೆ ಕಾಮಗಾರಿಗೆ ಚಾಲನೆ

ಬೆಳಗಾವಿ : ಬೆಳಗಾವಿ ಗ್ರಾಮೀಣ ಕ್ಷೇತ್ರದ ನಾಗೇರಹಾಳ ಗ್ರಾಮದಿಂದ ಯರಮಾಳ ಗ್ರಾಮದವರೆಗಿನ ರಸ್ತೆ ನಿರ್ಮಾಣದ ಕಾಮಗಾರಿಗೆ ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಶುಕ್ರವಾರ ಭೂಮಿ ಪೂಜೆ ನೆರವೇರಿಸಿ, ಚಾಲನೆ ನೀಡಿದರು.

ಸುಮಾರು 5 ಕೋಟಿ ರೂ, ಅಂದಾಜು ವೆಚ್ಚದಲ್ಲಿ ಕಾಮಗಾರಿ ನಡೆಯಲಿದೆ. ಗ್ರಾಮೀಣ ಕ್ಷೇತ್ರದಲ್ಲಿ ಅಭಿವೃದ್ಧಿ ನಿರಂತರ ಪ್ರಕ್ರಿಯೆಯಾಗಿದೆ. ಮಳೆಯ ಕಾರಣದಿಂದ ಕೆಲವು ಕಾಮಗಾರಿಗಳು ವಿಳಂಬವಾಗಿವೆ. ಆದರೆ, 365 ದಿನವೂ ಒಂದಿಲ್ಲೊಂದು ಪ್ರದೇಶದಲ್ಲಿ ಯೋಜನೆಗಳು ಅನುಷ್ಠಾನಗೊಳ್ಳುತ್ತಲೇ ಇರುತ್ತವೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ರಾಜ್ಯದ ಯಾವುದೇ ಕ್ಷೇತ್ರದಲ್ಲಿ ಅಭಿವೃದ್ಧಿ ಕಾಮಗಾರಿ ನಡೆಯಲಿಕ್ಕಿಲ್ಲ, ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರ ವಿಶೇಷ ಪ್ರಯತ್ನದಿಂದಾಗಿ ಇದು ಸಾಧ್ಯವಾಗಿದೆ. ಇಂತಹ ಶಾಸಕರನ್ನು ಪಡೆದಿರುವುದು ನಮ್ಮ ಸುಧೈವವಾಗಿದೆ ಎಂದು ಚನ್ನರಾಜ ಹೇಳಿದರು.

ಈ ವೇಳೆ ಸೋಮಪ್ಪ ಧರೆಪ್ಪಗೋಳ, ರವಿ ಅಂಗಡಿ, ರುದ್ರಪ್ಪ ಚಿನ್ನಣ್ಣವರ, ಸಂತೋಷ ಕಂಬಿ, ನಿಂಗಪ್ಪ ದೊಡವಾಡಿ, ಸೋಮು ಅಕ್ಕನವರ, ಯಲ್ಲಪ್ಪ ದೊಡವಾಡಿ, ಬಸು ವಾಲಿಕಾರ, ಗಂಗಪ್ಪ ಗುಂಡುಗೋಳ, ಈರಪ್ಪ ಹುಲಮನಿ, ಕುಮಾರ ಹವಾಲ್ದಾರ, ಅಯ್ಯಪ್ಪ ಮಾವಿನಕಟ್ಟಿ, ಸಿದ್ರಾಯಿ ವಾಲಿ ಉಪಸ್ಥಿತರಿದ್ದರು.



# ಶ್ರೀ ಮಾರುತಿ ದೇವಸ್ಥಾನ ಕಟ್ಟಡ ಹಾಗೂ ಮೂರ್ತಿ ಪ್ರತಿಷ್ಠಾನೆ



ಘಟಪ್ರಭಾ.:ಸಮೀಪದ ಬಡಿಗವಾಡ,ಮಲ್ಲಾಪುರ (ಪಿಜಿ) ಬಡಿಗವಾಡ ಜಿ ಎಲ್ ಬಿ ಸಿ ಕೆನಾಲ್ ಹತ್ತಿರ ನೂತನವಾಗಿ ನಿರ್ಮಿಸಿದ ಶ್ರೀ ಮಾರುತಿ ದೇವರ ದೇವಸ್ಥಾನ ಕಟ್ಟಡ ಹಾಗೂ ಮೂರ್ತಿ ಪ್ರತಿಷ್ಠಾನ ಪೂಜಾ ಕಾರ್ಯಕ್ರಮಕ್ಕೆ ಘಟಪ್ರಭಾದ ಹೊಸಮಠದ ಮ ನಿ ಪ್ರ ಸ್ವ ವೀರೂಪಾಕ್ಷ ಸ್ವಾಮಿಗಳವರ ದಿವ್ಯ ಅಮೃತ ಹಸ್ತದಿಂದ ನೆರವೇರಿತು ಹಾಗೂ ಹೋಮ ಹವನದ ಪೂಜೆಯನ್ನು ಬಸಯ ಹಿರೇಮಠ ಹಾಗೂ ಸಂಗಡಿಗರಿಂದ ಪೂಜ್ಯ ವಿಧಿ ವಿಧಾನಗಳ ಕಾರ್ಯಕ್ರಮ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ದೇವಸ್ಥಾನ ಕಮಿಟಿಯ ಸರ್ವ ಸದಸ್ಯರು ಹಾಗೂ ಮುಖಂಡರೂಗಳಾದ ಸಿದ್ರಾಮ ಚೌಕಶಿ ,ಕರವೇ ರಾಜ್ಯಾಧ್ಯಕ್ಷರಾದ ಡಾ.ಕೆಂಪಣ್ಣ ಚೌಕಶಿ, ಮುಖಂಡರಾದ ಕಲ್ಲಪ್ಪ ಎಂ ಚೌಕಶಿ, ಮಲ್ಲಪ್ಪ ಶಿವಪುರೆ, ಯಲ್ಲಪ್ಪ ಚಿಗದೊಳ್ಳಿ, ಮಾರುತಿ ತುಬಾಕಿ, ದುಂಡಪ್ಪ ಚೌಕಾಶಿ, ಶಂಕರ್ ಕಮತೆ, ಮಲ್ಲಪ್ಪ ಬಾಗೇವಾಡಿ, ಮುತ್ಯಪ್ಪ ಕಾಮತಿ, ಅಜ್ಜಪ್ಪ ಕುಡುಗೋಳ, ಲಕ್ಷ್ಮಣ ಕಮತಿ, ಶಿವಪ್ಪ ಬನ್ನನವರ್, ಚಂದ್ರಪ್ಪ ಕಾಡದವರು, ರಮೇಶ್ ಹಿಡ್ಕಲ್, ಬಸು ಬಾಗೇವಾಡಿ, ಉಪಸ್ಥಿತರಿದ್ದರು

# ಅಭಿವೃದ್ಧಿ ಕಾಮಗಾರಿಗಳಿಗೆ ವಿಧಾನಸಭೆ ಮುಖ್ಯ ಸಚೇತಕ ಅಶೋಕ ಪಟ್ಟಣ ಭೂಮಿಪೂಜೆ



ರಾಮದುರ್ಗ: ಮತಕ್ಷೇತ್ರದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆತೊಂದರೆಆಗದಂತೆಅಗತ್ಯ ಮೂಲಸೌಲಭ್ಯಗಳನ್ನು ಒದಗಿಸಲುರಾಜ್ಯ ಸರಕಾರದಿಂದ ಅಗತ್ಯ ಅನುದಾನ ಮಂಜೂರು ಮಾಡಲು ನಾನು ಬದ್ಧನಿದ್ದೇನೆ. ವಿದ್ಯಾರ್ಥಿಗಳು ಶ್ರದ್ದೆಯಿಂದ ನಿರಂತರ ಪರಿಶ್ರಮವಹಿಸಿ ಅಧ್ಯಯನ ಮಾಡಿ,ಉನ್ನತ ಸಾಧನೆಯೊಂದಿಗೆ ತಾಲೂಕಿನ ಕೀರ್ತಿ ಹೆಚ್ಚಿಸಬೇಕು ಎಂದು ಶಾಸಕ ಹಾಗೂ ವಿಧಾನಸಭೆ ಮುಖ್ಯ ಸಚೇತಕ ಅಶೋಕ ಪಟ್ಟಣ ಹೇಳಿದರು.

ತಾಲೂಕಿನ ಖಾನಪೇಠ ಹಾಗೂ ಕಿತ್ತೂರ ಗ್ರಾಮದಲ್ಲಿ ಉನ್ನತೀಕರಿಸಿದ ಪ್ರೌಢಶಾಲೆಗಳಿಗೆ ಕೇಂದ್ರ ಯೋಜನಾ ಅನುಮೋದನಾ ಮಂಡಳಿ ರಾಜ್ಯ ಸರಕಾರದ ಸಂಯುಕ್ತ ಆಶ್ರಯದಲ್ಲಿ ತಲಾ ಸುಮಾರು 1 ಕೋಟಿ 35 ಲಕ್ಷ ವೆಚ್ಚದಲ್ಲಿ ಕೊಠಡಿಗಳ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿ, ನಂತರ ಉಡಚಮ್ಮನಗರದಲ್ಲಿ 15 ಲಕ್ಷ ವೆಚ್ಚದಲ್ಲಿ ಅಂಗನವಾಡಿ ಕಟ್ಟಡಕ್ಕೆ, ಕಲಹಾಳ ಗ್ರಾಮದಲ್ಲಿ 15 ಲಕ್ಷ ವೆಚ್ಚದಲ್ಲಿ ಸಿ.ಸಿ. ರಸ್ತೆ ನಿರ್ಮಾಣಕ್ಕೆ ಶನಿವಾರ ಭೂಮಿಪೂಜೆನೆರವೇರಿಸಿ ಅವರು ಮಾತನಾಡಿದರು.ಕಿತ್ತೂರ ಪ್ರೌಢಶಾಲೆಗೆ ಭೂಮಿಕೊಡುಗೆ ನೀಡಿದ ದಾನಿಗಳ ಕಾರ್ಯ ಶ್ಲಾಘನೀಯ.ತಾಲೂಕಿನಎಲ್ಲಾ ಕಡೆಗಳಲ್ಲಿ ರಾಜಕೀಯ ಮುಖಂಡರು, ಉದ್ಯಮಿಗಳು, ಗ್ರಾಮಸ್ಥರು ತಮ್ಮ ಗ್ರಾಮದ ಮಕ್ಕಳ ಶೈಕ್ಷಣಿಕ ವ್ಯವಸ್ಥೆಗೆ ಕೈಲಾದಷ್ಟು ಸಹಾಯ ಸಹಕಾರ ಮಾಡಬೇಕು. ಗುರುನಾಥಗೌಡ ಶಿವನಗೌಡ ಮಾದಾಪೂರ ಅವರು ಪ್ರೌಢಶಾಲೆ ಕಟ್ಟಡ ನಿರ್ಮಾಣಕ್ಕೆ ತಮ್ಮ ಒಂದುವರೆ ಎಕರೆ ಭೂಮಿಯನ್ನು ನೀಡಿದ್ದು ಹರ್ಷತಂದಿದೆಎಂದರು. ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಟಿ.ಬಳಿಗಾರ ಮಾತನಾಡಿ, ಕುನ್ನಾಳ, ಸಾಲಾಪೂರ, ರಾಮದುರ್ಗ ವಿದ್ಯಾಚೇತನ ಶಾಲೆಗಳು ಪಿಎಂಶ್ರೀ ಯೋಜನೆಯಡಿಯಲ್ಲಿ ಆಯ್ಕೆಯಾಗಿವೆ. ಶಾಸಕರಆಶಕ್ತಿಯಿಂದ, ಸ್ಮಾರ್ಟಕ್ಲಾಸ್, ಸ್ಮಾರ್ಟಬೋರ್ಡ, ಲೈಬ್ರರಿ ವ್ಯವಸ್ಥೆ ಸೇರಿದಂತೆ ಶಾಲೆಗಳ ಸುಧಾರಣೆಗೆ ಅನುದಾನ ಒದಗಿಸಿಕೊಡಬೇಕು.ಶಾಸಕರು ತಾಲೂಕಿನ ಮಕ್ಕಳಿಗೆ ಉಚಿತ, ನೋಟ್ ಬುಕ್, ಸ್ಕೂಲ್‌ಬ್ಯಾಗ್ ಒದಗಿಸಿ, ಅಪಾರ ಸೇವೆ ಗೈದಿದ್ದಾರೆ.ತಾಲೂಕಿನ ಶೈಕ್ಷಣಿಕ ಪ್ರಗತಿಗೆ ಅವರ ಕೊಡುಗೆ ಅಪಾರವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಖಾನಪೇಠ ಕಾರ್ಯಕ್ರಮದಲ್ಲಿ ಹರ್ಲಾಪೂರ ಥವಳೇಶ್ವರ ಮಠದರೇಣುಕ ಶಿವಯೋಗಿ ಶಿವಾಚಾರ್ಯ ಸ್ವಾಮೀಜಿ, ಕಿತ್ತೂರ ಕಾರ್ಯಕ್ರಮದ ಸಾನಿಧ್ಯ ವಹಿಸಿ, ರೋಣ ಬೂದೀಶ್ವರ ಮಠದಡಾ.ವಿಶ್ವನಾಥ ಬೂದಿ ಸ್ವಾಮೀಜಿ ಆಶೀರ್ವಚನ ನೀಡಿದರು.

ಕಿತ್ತೂರ ಪ್ರೌಢಶಾಲೆ ನಿರ್ಮಾಣಕ್ಕೆ ಭೂದಾನ ಮಾಡಿದ ಗುರುನಾಥಗೌಡ ಶಿವನಗೌಡ ಮಾದಾಪೂರ ಸೇರಿದಂತೆ ಹಲವರನ್ನು ಸತ್ಕರಿಸಲಾಯಿತು.

ಈ ಸಂದರ್ಭದಲ್ಲಿಖಾನಪೇಠಗ್ರಾ.ಪಂ. ಅಧ್ಯಕ್ಷೆ ಸಿದ್ದವ್ವ ಒಂಟಿ, ಸದಸ್ಯೆರುಕ್ಮವ್ವ ನಾವಿ, ಜಿ.ಪಂ. ಮಾಜಿ ಸದಸ್ಯಜಹೂರ ಹಾಜಿ, ಪಂಚು ಹಲ್ಯಾಳ, ಹೊನ್ನಪ್ಪಕಟ್ಟಿಮನಿ, ಮಾರುತಿ ಬಸಿಡೋಣಿ, ಕಿತ್ತೂರ ಕಾರ್ಯಕ್ರಮದಲ್ಲಿ ಗ್ರಾ.ಪಂ.ಅಧ್ಯಕ್ಷೆ ಪದ್ಮವ್ವ ಬಡಕಲಿ, ಪ್ರಾಥಮಿಕ ಶಾಲಾ ಎಸ್‌ಡಿಎಂಸಿ ಅಧ್ಯಕ್ಷೆ ಶಿವಲೀಲಾ ಯರಗಟ್ಟಿ, ರೈತ ಮುಖಂಡ ಹೇಮಣ್ಣ ಚವರಡ್ಡಿ, ಮಾಜಿಜಿ.ಪಂ. ಉಪಾಧ್ಯಕ್ಷ ಪರಪ್ಪಜಂಗವಾಡ, ಪಿಕೆಪಿಎಸ್ ಉಪಾಧ್ಯಕ್ಷ ಗಿರಿಯಪ್ಪ ಹಣಸಿ, ಮಲ್ಲಪ್ಪ ಸೋಮಗೊಂಡ, ಗೋವಿಂದರಡ್ಡಿ ಪೆಟ್ಲೂರ, ಬಸಲಿಂಗಪ್ಪ ಹರಗುಟಗಿ, ಲೋಕೋಪಯೋಗಿ ಇಲಾಖೆಯ ಎಇಇ ರವಿಕುಮಾರ, ಸಿಡಿಪಿಓ ಶಂಕರಕುಂಬಾರ ಸೇರಿದಂತೆ ಗ್ರಾಮದ ಮುಖಂಡರು ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತಿತರರಿದ್ದರು.

# ರಾಯಣ್ಣ ಉತ್ಸವ ಯಶಸ್ವಿಗೊಳಿಸಿ:ಶಾಸಕ ಮಹಾಂತೇಶ ಕೌಜಲಗಿ



ಬೈಲಹೊಂಗಲ- ಜಿಲ್ಲಾಡಳಿತ ಬೆಳಗಾವಿ ಹಾಗೂ ಕನ್ನಡ ಸಂಸ್ಕೃತಿ ಇಲಾಖೆ ವತಿಯಿಂದ ಜ. 12 ಹಾಗೂ 13 ರಂದು ತಾಲೂಕಿನ ಸಂಗೊಳ್ಳಿ ಗ್ರಾಮದಲ್ಲಿ ಅದ್ದೂರಿಯಾಗಿ ಜರುಗಲಿರುವ ಎಲ್ಲ ಕಾರ್ಯಕ್ರಮಗಳಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗಿ ಯಶಸ್ವಿಗೊಳಿಸಬೇಕೆಂದು ಶಾಸಕ ಮಹಾಂತೇಶ ಕೌಜಲಗಿ ತಿಳಿಸಿದರು.

ಪಟ್ಟಣದ ರಾಣಿ ಚನ್ನಮ್ಮಾಜಿ ಐಕ್ಯ ಸ್ಥಳದ ಮುಂಭಾಗದಲ್ಲಿ ಸಂಗೊಳ್ಳಿ ರಾಯಣ್ಣ ಉತ್ಸವದ ಜ್ಯೋತಿಯಾತ್ರೆಗೆ ಪೂಜೆ ಸಲ್ಲಿಸಿ, ಬೀಳ್ಕೊಟ್ಟು ಸುದ್ದಿಗಾರರೊಂದಿಗೆ ಮಾತನಾಡಿದ ಅವರು 1ಕೋಟಿ ರೂ ಅನುದಾನದಲ್ಲಿ ಜ. 12 ರಿಂದ 13 ರವರೆಗೆ ಎರಡು ದಿನಗಳ ಕಾಲ ನಡೆಯಲಿರುವ ಉತ್ಸವದಲ್ಲಿ ಕಿತ್ತೂರು ಸಂಸ್ಥಾನದ ದ್ವಜಾರೋಹಣ,ರಾಯಣ್ಣ ಮುತ್ತಳಿಗೆ ಮಾಲಾರ್ಪಣೆ, ಕಲಾವಾಹಿನಿ, ವಸ್ತು ಪ್ರದರ್ಶನ,ವಿಚಾರ ಸಂಕೀರಣ,ಕುಸ್ತಿ ಪಂದ್ಯಾವಳಿ, ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

ಸಂಗೊಳ್ಳಿ ಹಿರೇಮಠದ ಗುರುಲಿಂಗ ಶಿವಾಚಾರ್ಯ ಸ್ವಾಮೀಜಿ, ಕಿತ್ತೂರು ಕಲ್ಮಠದ ಮಡಿವಾಳ ರಾಜಯೋಗಿಂದ್ರ ಸ್ವಾಮೀಜಿ ಸಾನಿಧ್ಯ ವಹಿಸುವರು.

ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ,ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ,ಸಂಸದ ಜಗದೀಶ ಶೆಟ್ಟರ,ಶಾಸಕ ಬಾಬಾಸಾಹೇಬ ಪಾಟೀಲ, ಗ್ರಾ. ಪಂ. ಅಧ್ಯಕ್ಷೆ ರೂಪಾ ಚಚಡಿ ಸೇರಿದಂತೆ ಗಣ್ಯಮಾನ್ಯರು ಭಾಗಿಯಾಗಲಿದ್ದಾರೆ ಎಂದರು.

ಕರ್ನಾಟಕ ಪ್ರದೇಶ ಕುರುಬರ ಸಂಘ ತಾಲೂಕು ಘಟಕದ ಅಧ್ಯಕ್ಷ ವಿಜಯಕುಮಾರ ದಳವಾಯಿ ಮಾತನಾಡಿ ಸಂಗೊಳ್ಳಿ ಉತ್ಸವಕ್ಕೆ ಸರಕಾರದಿಂದ 1 ಕೋಟಿ ಬಿಡುಗಡೆಗೊಳಿಸಿ ವಿಜೃಂಭಣೆಯಿಂದ ಉತ್ಸವ ಜರುಗುವಲ್ಲಿ ಪ್ರಮುಖ ಪಾತ್ರವಹಿಸಿದ ಶಾಸಕ ಮಹಾಂತೇಶ ಕೌಜಲಗಿ ಅವರ ಕಾರ್ಯ ಶ್ಲಾಘನೀಯವೆಂದು ಮೆಚ್ಚುಗೆ ವ್ಯಕ್ತ ಪಡಿಸಿದರು.

ಚನ್ನಮ್ಮಾಜಿ,ರಾಯಣ್ಣನವರ ಪುತ್ತಳಿಗೆ ಮಾಲಾರ್ಪಣೆ ಮಾಡುವುದರ ಮೂಲಕ ಜ್ಯೋತಿಯಾತ್ರೆಗೆ ಬೀಳ್ಕೊಡಲಾಯಿತು.

ತಹಸೀಲ್ದಾರ್ ಹಣಮಂತ ಶಿರಹಟ್ಟಿ, ಪುರಸಭೆ ಮುಖ್ಯಧಿಕಾರಿ ವಿರೇಶ ಹಸಬಿ, ಕ್ಷೇತ್ರ ಶಿಕ್ಷಣಾಧಿಕಾರಿ ಎ.ಎನ್. ಪ್ಯಾಟಿ,ಪಿಎಸ್ಐ ಎಸ್. ಬಿ. ಮಲ್ಲೂರ,

ಮುಖಂಡರಾದ ಡಾ. ಬಸವರಾಜ ಕಳ್ಳಿಬಡ್ಡಿ,ಲಕ್ಷ್ಮಣ ಸೋಮನಟ್ಟಿ,ಮಹಾಂತೇಶ ಹೊಸಮನಿ,ಸುನೀಲ ಪಟಾತ,ರಾಯಪ್ಪ ಚಂದರಗಿ,

ಫಕ್ಕಿರಪ್ಪ ಕರಿಗಾರ, ಮಲ್ಲಿಕಾರ್ಜುನ ದುಬ್ಬನಮರಡಿ,ಸಂತೋಷ ದೇವಲಾಪುರ, ಸೇರಿದಂತೆ ವಿವಿಧ ಇಲಾಖೆಗಳ ಸಿಬ್ಬಂಧಿಗಳು, ವಿದ್ಯಾರ್ಥಿಗಳು ಜ್ಯೋತಿಯಾತ್ರೆಗೆ ಸಾಕ್ಷಿಯಾದರು.

# ಒಂದು ಬಿಳಿ ಕೂದಲು ಕಿತ್ತರೆ ಸುತ್ತಲಿನ ಉಳಿದೆಲ್ಲಾ ಕೂದಲು ಬಿಳಿಯಾಗುತ್ತೆ ನಿಜನಾ?



ಕೆಲವರಿಗೆ ತಲೆಯಲ್ಲಿ ಕಾಣಿಸಿಕೊಳ್ಳುವ ಒಂದು ಬಿಳಿ ಕೂದಲನ್ನು ಕೀಳುವ ಅಭ್ಯಾಸವಿದೆ. ಇದ–ರಿಂದ ಇನ್ನಷ್ಟು ಬಿಳಿ ಕೂದಲು ಬೆಳೆಯುತ್ತಾ? ಈ ಅಭ್ಯಾಸ ಒಳ್ಳೆಯದಲ್ಲ ಯಾಕೆ ಎನ್ನುವುದನ್ನು ನಾವಿಲ್ಲಿ ತಿಳಿಯೋಣ.

ಸಾಮಾನ್ಯವಾಗಿ ತಲೆಯಲ್ಲಿ ಒಂದು ಬಿಳಿ ಕೂದಲು ಕಂಡರೆ ಸಾಕು ಬಹುತೇಕರು ಅದನ್ನು ಕೀಳುತ್ತಾರೆ. ಇತ್ತೀಚೆಗೆ ಯುವಕರಲ್ಲೂ ಬಿಳಿ ಕೂದಲು ಬಹಳ ಬೇಗನೇ ಕಾಣಿಸಿಕೊಳ್ಳಲಾರಂಭಿಸಿದೆ. ಕೆಲವರು ಅದನ್ನು ಕಪ್ಪಗಾಗಿಸಲು ಹೇರ್ ಡೈ ಬಳಸುತ್ತಾರೆ. ಇನ್ನೂ ಕೆಲವರು ಆ ಒಂದೆರಡು ಕೂದಲನ್ನು ಕೀಳುತ್ತಾರೆ. ನೀವೂ ಕೂಡಾ ನಿಮ್ಮ ತಲೆಯಲ್ಲಿ ಕಾಣಿಸಿಕೊಳ್ಳುವ ಒಂದೆರಡು ಬಿಳಿ ಕೂದಲನ್ನು ಕೀಳುತ್ತೀರಾದರೆ ಅಂತಹ ತಪ್ಪನ್ನು ಇಂದೇ ನಿಲ್ಲಿಸಿ.

**ನಿಜಕ್ಕೂ ಕೂದಲು ಬಿಳಿಯಾಗುತ್ತಾ?**

ಬಿಳಿ ಕೂದಲನ್ನು ಕೀಳುವುದರಿಂದ ಅಡ್ಡ ಪರಿಣಾಮಗಳಾಗುತ್ತವೆ. ಬಿಳಿ ಕೂದಲಿನಿಂದಾಗಿ ನಿಮ್ಮ ನೋಟದಲ್ಲಿನ ಬದಲಾವಣೆಯು ಸಂಪೂರ್ಣವಾಗಿ ನೈಸರ್ಗಿಕವಾಗಿದ್ದರೂ, ಕೆಲವ–ರಿಗೆ ಇದು ಇಷ್ಟವಾಗೋದಿಲ್ಲ. ಅದನ್ನು ಕೀಳುವಂತೆ ಪ್ರಚೋದಿಸುತ್ತದೆ. ನೀವು ಅದನ್ನು ಕಿತ್ತುಕೊಂಡರೆ, ಹೆಚ್ಚಿನ ಬಿಳಿ ಕೂದಲು ಬೆಳೆಯುತ್ತದೆ.

ಬಹಳಷ್ಟು ಜನರು ಇದನ್ನು ನಂಬುತ್ತಾರೆ ಕೂಡಾ. ಆದರೆ ಇದು ನಿಜವಲ್ಲ ಇದು ವಾಸ್ತವವಾಗಿ ಒಂದು ಮಿಥ್ಯ. ನೀವು ಕೂದಲಿನ ಒಂದೇ ಎಳೆಯನ್ನು ಕಿತ್ತರೆ ಅದು ಸಾಂಕ್ರಾಮಿಕವಾಗಿ ಹರಡುವುದಿಲ್ಲ. ತಮ್ಮ ಕೋಶಕಗಳ ವರ್ಣದ್ರವ್ಯ ಕೋಶಗಳು ಸಾಯುವವರೆಗೂ ಸುತ್ತಮುತ್ತಲಿನ ಕೂದಲುಗಳು ಬಿಳಿಯಾಗುವುದಿಲ್ಲ.

**ಬಿಳಿ ಕೂದಲು ಕೀಳುವುದರ ಪರಿಣಾಮಗಳು**

ಎಲ್ಲಾ ಕಪ್ಪು ಕೂದಲಿನ ನಡುವೆ ಒಂದು ಬಿಳಿ ಕೂದಲು ಇದ್ದರೂ ಅವು ನೆತ್ತಿಯ ಮೇಲೆ ಹೆಚ್ಚು ಗಮನ ಸೆಳೆಯುತ್ತದೆ ಮತ್ತು ಭಾಸವಾಗುತ್ತದೆ. ಕೋಶಕವು ಕಡಿಮೆ ಮೆಲನಿನ್ ಅನ್ನು ಉತ್ಪಾದಿಸಿದಾಗ, ಅದು ಕಡಿಮೆ ಮೇದೋಗ್ರಂಥಿಗಳ ಸ್ರಾವವನ್ನು ಉತ್ಪಾದಿಸುತ್ತದೆ, ಆದ್ದರಿಂದ ಬಿಳಿ ಕೂದಲು ನಿಮ್ಮ ಉಳಿದ ವರ್ಣದ್ರವ್ಯದ ಎಳೆಗಳಿಂದ ವಿಭಿನ್ನ ವಿನ್ಯಾಸವನ್ನು ಹೊಂದಿರುತ್ತದೆ. ನೀವು ಕೂದಲನ್ನು ಕೀಳಿದ ಜಾಗದಲ್ಲಿ ಮತ್ತೆ ಬಿಳಿ ಕೂದಲು ಬೆಳೆಯಲಾರಂಭಿಸುತ್ತದೆ. ಅಲ್ಲದೆ ಆ ಕೂದಲು ಮೊದಲಿನ ಕೂದಲಿಗಿಂತಲೂ ಒರಟಾಗಿ ದಪ್ಪವಾಗಿರುತ್ತದೆ.

**ಕೋಶಕದ ವರ್ಣದ್ರವ್ಯ ಕೋಶಗಳು ಸತ್ತ ನಂತರ ಕೂದಲು ಬಿಳಿಯಾಗುವುದು**

ಕೂದಲಿನ ಪ್ರತಿಯೊಂದು ಎಳೆಯೂ ಒಂದೇ ಕೋಶಕದಿಂದ ಬೆಳೆಯುತ್ತದೆ ಎಂಬುದು ಸತ್ಯ. ಆದ್ದರಿಂದ, ಕೋಶಕದ ವರ್ಣದ್ರವ್ಯ ಕೋಶಗಳು ಸಾಯುವ ನಂತರ, ಎಳೆಯು ಬಿಳಿ ಅಥ–'ವಾ ಬೂದು ಬಣ್ಣಕ್ಕೆ ತಿರುಗುತ್ತದೆ. ಕೊನೆಯಲ್ಲಿ, ಬಿಳಿ ಕೂದಲನ್ನು ಕೀಳುವುದರಿಂದ ಕಥೆ ಮುಗಿಯುವುದಿಲ್ಲ ಆದರೆ ಅದೇ ಕೋಶಕದಿಂದ ಮತ್ತೊಂದು ಬಿಳಿ ಕೂದಲು ಬೆಳೆಯುತ್ತದೆ.

**ನೆತ್ತಿಗೆ ಹಾನಿಯನ್ನುಂಟು ಮಾಡುತ್ತದೆ**

ಕೂದಲನ್ನು ಕೀಳುವುದು ಕೋಶಕದಿಂದ ಬಲವಂತವಾಗಿ ಕೂದಲನ್ನು ಎಳೆಯುವ ನೋವಿನ ಪ್ರಕ್ರಿಯೆಯಾಗಿದೆ. ಇದು ಕಿರಿಕಿರಿ, ಪೀಡಿತ ಪ್ರದೇಶದಲ್ಲಿ ಕೆಂಪು, ಕೋಶಕಕ್ಕೆ ಹಾನಿ ಮತ್ತು ಮತ್ತಷ್ಟು ಕೂದಲು ಬೆಳವಣಿಗೆಯನ್ನು ತಡೆಗಟ್ಟಲು ಕಾರಣವಾಗಬಹುದು.ನಿಯಮಿತ ಕಿತ್ತುಹಾಕುವಿಕೆಯೊಂದಿಗೆ, ಕಿರುಚೀಲಗಳು ಗ–ರಿಷ್ಠ ಹೊಡೆತವನ್ನು ತೆಗೆದುಕೊಳ್ಳುತ್ತವೆ ಕಿತ್ತುಹಾಕುವಿಕೆಯು ಕೂದಲಿನ ವಿನ್ಯಾಸದಲ್ಲಿ ಬದಲಾವಣೆಗೆ ಕಾರಣವಾಗಬಹುದು.

**ಕೋಶಕ ಹಾನಿ ಹಾಗೂ ಇನ್‌ಗ್ರೋನ್ ಕೂದಲಿಗೆ ಕಾರಣವಾಗುತ್ತೆ**

ಕಿತ್ತುಹಾಕುವಿಕೆಯು ಕಿರುಚೀಲಗಳನ್ನು ಹಾನಿಗೊಳಿಸುತ್ತದೆ, ಇದು ಹೊಸ ಕೂದಲಿನ ಗುಣಮಟ್ಟವನ್ನು ಹದಗೆಡಿಸುತ್ತದೆ ಅಥವಾ ಸಂಪೂರ್ಣವಾಗಿ ಸಾಯುತ್ತದೆ. ಕೂದಲನ್ನು ಕೀಳುವುದು ಕಿರುಚೀಲಗಳ ತೆರೆಯುವಿಕೆಯನ್ನು ಪ್ರಚೋದಿಸುತ್ತದೆ ಮತ್ತು ದೀರ್ಘಾವಧಿಯಲ್ಲಿ ಚರ್ಮದ ಉರಿಯೂತಕ್ಕೆ ಕಾರಣವಾಗುವ ಒಳಗಿನ ಕೂದಲಿನ ಬೆಳವಣಿಗೆಗೆ ಕಾರಣವಾಗಬಹುದು.

# ಕ್ಯಾಬೇಜ್ ಎಲೆಗಳಿಂದ ಗಂಟು ನೋವು ದೂರ ಮಾಡಬಹುದೇ? ಹೌದು ಎನ್ನುತ್ತಾರೆ ವೈದ್ಯರು






ಗಂಟುನೋವು ಮತ್ತು ಊತವು ತುಂಬಾ ಕಿರಿಕಿರಿ ಉಂಟು ಮಾಡುವುದು ಎನ್ನುವುದು ಅದನ್ನು ಅನುಭವಿಸಿದವರಿಗೆ ಗೊತ್ತು. ಇನ್‌ಸ್ಟಾಗ್ರಾಮ್ ನಲ್ಲಿ ಹಾಕಿರುವಂತಹ ಒಂದು ಪೋಸ್ಟ್ ನಲ್ಲಿ ಕ್ಯಾಬೇಜ್ ಎಲೆಗಳನ್ನು ಪಾದಗಳಿಗೆ ಸುತ್ತಿಕೊಂಡರೆ ಆಗ ಗಂಟುನೋವು ಮತ್ತು ಊತದಿಂದ ಪರಿಹಾರ ಸಿಗುವುದು ಎಂದು ಹೇಳಲಾಗಿದೆ. ಇದರ ಬಗ್ಗೆ ಫ್ಯಾಕ್ಟ್ ಚೆಕ್ ಮಾಡಿದ ಸಜಗ್ ಫ್ಯಾಕ್ಟ್ ಚೆಕ್ ತಂಡಕ್ಕೆ ಇದು ಸತ್ಯ ಎಂದು ತಿಳಿದುಬಂದಿದೆ.

ಎಲೆಕೋಸು ಯಾನೆ ಕ್ಯಾಬೇಜ್ ತುಂಬಾ ಪೋಷಕಾಂಶಗಳನ್ನು ಹೊಂದಿರುವಂತಹ ತರಕಾರಿಯಾಗಿದ್ದು, ಇದು ಹಲವಾರು ಆರೋಗ್ಯ ಲಾಭ ಗಳನ್ನು ನೀಡುವುದು. ಇದನ್ನು ನಿಯಮಿತವಾಗಿ ಸೇವನೆ ಮಾಡಿದರೆ, ಆಗ ತೂಕ ಇಳಿಸಲು ಇದು ಸಹಕಾರಿ ಎಂದು ಹೇಳಲಾಗಿದೆ. ಅದೇ ರೀತಿಯಾಗಿ ಅನಾರೋಗ್ಯಗಳನ್ನು ದೂರವಿಡಲು ಸಹಕಾರಿ ಆಗಿದೆ ಎಂದು ಕೂಡ ಹೇಳಲಾಗಿದೆ. ಇನ್ ಸ್ಟಾಗ್ರಾಂನಲ್ಲಿ ಹಾಕಿರುವ ಪೋಸ್ಟ್ ನಲ್ಲಿ ಪಾದಗಳಿಗೆ ಕ್ಯಾಬೇಜ್ ಎಲೆಗಳನ್ನು ಕಟ್ಟಿಕೊಂಡರೆ ಆಗ ಇದರಿದ ಸಂಧಿವಾತದ ನೋವು ಮತ್ತು ಊತದಿಂದ ಪರಿಹಾರ ಪಡೆಯಬಹುದು ಎಂದು ಹೇಳಲಾಗಿದೆ. ಇದನ್ನು ತನಿಖೆ ಮಾಡಿದ ವೈದ್ಯರನ್ನು ಒಳಗೊಂಡ ತಂಡವೊಂದಕ್ಕೆ ಇದು ನಿಜವೆಂದು ತಿಳಿದುಬಂದಿದೆ.

**ಪೋಸ್ಟ್ ನಲ್ಲಿ ಹೀಗೆ ಬರೆಯಲಾಗಿತ್ತು**

ಪಾದಗಳಿಗೆ ಕ್ಯಾಬೇಜ್ ಎಲೆಗಳನ್ನು ಸುತ್ತಿಕೊಂಡರೆ, ಆಗ ಇದರಿಂದ ಗಂಟುನೋವು ಮತ್ತು ಊತಕ್ಕೆ ಪರಿಹಾರ ಸಿಗುವುದು ಎಂದು ಬರೆಯ ಲಾಗಿತ್ತು. ಕ್ಯಾಬೇಜ್ ಎಲೆಗಳನ್ನು ಬಳಸಿಕೊಂಡು ಸಂಧಿವಾತ ನಿವಾರಿಸಬಹುದು.

**ವೈದ್ಯರ ಅಭಿಪ್ರಾಯವೇನು**

ಸಿಯಾರಾಮ್ ಆಯುರ್ವೇದಿಕ್ ವೈದ್ಯಕೀಯ ಕಾಲೇಜಿನ ವೈದ್ಯರಾಗಿರುವ ಡಾ. ಅಮಿತ್ ಜಗತಾಪ್ ಅವರೊಂದಿಗೆ ಈ ಬಗ್ಗೆ ಮಾತನಾಡಿದ ವೇಳೆ, ಇದು ನಿಜವೆಂದು ಅವರು ಹೇಳಿದ್ದಾರೆ. ಗಂಟು ನೋವಿಗೆ ಇದು ಅದ್ಭುತವಾಗಿ ಕೆಲಸ ಮಾಡುವುದು ಎಂದು ಹೇಳಿದ್ದಾರೆ.

**ವೈದ್ಯರು ಹೇಳುವುದೇನು?**

ಗಂಟುನೋವನ್ನು ಕಡಿಮೆ ಮಾಡುವ ಕ್ಯಾಬೇಜ್ ಎಲೆಗಳು ಉರಿಯೂತ ತಗ್ಗಿಸುವುದು. ಕ್ಯಾಬೇಜ್ ನಲ್ಲಿ ಉರಿಯೂತ ಶಮನಕಾರಿ ಮತ್ತು ಆ?ಯಂಟಿಬಯೋಟಿಕ್ ಗುಣಗಳಿವೆ. ಸಲ್ಫೊರಾಫೇನ್ ಮತ್ತು ಲುಪಿಯೋಲ್ ಎನ್ನುವ ನೈಸರ್ಗಿಕ ಅಂಶಗಳು ಇದರಲ್ಲಿದ್ದು, ಇದು ಗಂಟುಗಳಲ್ಲಿನ ಉರಿಯೂತ ಕಡಿಮೆ ಮಾಡುವುದು.

**ಕ್ಯಾಬೇಜ್ ಬಳಕೆ ಹೇಗೆ?**

ಗಂಟು ನೋವಿಗೆ ಕ್ಯಾಬೇಜ್ ನ್ನು ಬಳಕೆ ಮಾಡುವ ಸರಿಯಾದ ವಿಧಾನದ ಬಗ್ಗೆ ವೈದ್ಯರು ಹೇಳಿದ್ದಾರೆ. ಕಾಬೇಜ್ ನ ಹೊರಗಿನ ಎಲೆಗಳನ್ನು ತೆಗೆದ ಬಳಿಕ, ಅದರ ಒಳಗಿನ ಎಲೆಗಳನ್ನು ಒಳ್ಳೆಯ ನೀರಿನಿಂದ ತೊಳೆಯಿರಿ.

ಇದರ ಬಳಿಕ ಲಟ್ಟಣಿಗೆ ಹಿಡಿದುಕೊಂಡು ಈ ಎಲೆಗಳ ಪೇಸ್ಟ್ ಮಾಡಿಕೊಳ್ಳಿ. ಇದರ ಬಳಿಕ ಗಂಟುಗಳು, ಪಾದಗಳಿಗೆ ಇದನ್ನು ಹತ್ತಿ ಬಟ್ಟೆಯಿಂದ ಕಟ್ಟಿಕೊಳ್ಳಿ. ಎರಡು ಗಂಟೆಗಳ ಕಾಲ ಇದನ್ನು ಹಾಗೆ ಬಿಡಿ. ಇದರ ಬಳಿಕ ಬಿಸಿ ನೀರಿನಿಂದ ತೊಳೆಯಿರಿ.

**ವೈದ್ಯರ ಸಲಹೆ**

ಗಂಟು ನೋವು ಮತ್ತು ಊತ ಕಡಿಮೆ ಮಾಡಲು ಕ್ಯಾಬೇಜ್ ಒಳ್ಳೆಯ ಮನೆಮದ್ದು. ಆದರೆ ಇದನ್ನು ಬಳಸುವ ಮೊದಲು ವೈದ್ಯರ ಸಲಹೆ ಪಡೆಯುವುದು ಅಗತ್ಯ. ಅಲರ್ಜಿಯ ಲಕ್ಷಣಗಳಾಗಿರುವ ತುರಿಕೆ ಕಂಡುಬಂದರೆ ಆಗ ಆಗಲೇ ನಿಲ್ಲಿಸಿಬಿಡಿ.

**ನಿಜವೆನ್ನುವುದು ಸಾಬೀತು**

ಸಜಗ್ ತಂಡವು ಮಾಡಿರುವ ಫ್ಯಾಕ್ಟ್ ಚೆಕ್ ನಿಂದಾಗಿ ಕ್ಯಾಬೇಜ್ ಎಲೆಗಳಿಂದ ಗಂಟು ನೋವು ದೂರವಾಗುವುದು ಎನ್ನುವುದು ನಿಜವಾಗಿದೆ.

# ಚಳಿಗಾಲದಲ್ಲೂ ಗಿಡ ತುಂಬಾ ಚೆಂಡು ಹೂವು ಬಿಡಬೇಕಾದ್ರೆ ಗಿಡದ ಬುಡಕ್ಕೆ ಇದೊಂದು ಹಾಕಿದ್ರೆ ಸಾಕು

ಚಳಿಗಾಲದಲ್ಲಿ ಬಹಳಷ್ಟು ಹೂವಿನ ಸಸ್ಯಗಳು ಒಣಗಿಹೋಗುತ್ತವೆ. ಅಂತಹ ಹೂವಿನ ಗಿಡಗಳಲ್ಲಿ ಚೆಂಡು ಹೂವಿನ ಗಿಡ ಕೂಡಾ ಒಂದು. ನೀವು ಚಳಿಗಾಲದಲ್ಲೂ ಚೆಂಡು ಹೂವಿನ ಗಿಡ ಹಸಿರಾಗಿರಬೇಕು, ಗಿಡತುಂಬಾ ಹೂವು ನೀಡಬೇಕೆಂದು ಬಸಯಸಿದ್ದರೆ ಇಲ್ಲಿದೆ ಕೆಲವು ಸಲಹೆಗಳು.

ಜನವರಿ ತಿಂಗಳಲ್ಲಿ ತುಂಬಾ ಚಳಿ ಇರುವುದರಿಂದ ಚೆಂಡು ಹೂ ಗಿಡ ಒಣಗಲು ಪ್ರಾರಂಭವಾಗುತ್ತದೆ, ಆದರೆ ಗಿಡವನ್ನು ಸರಿಯಾಗಿ ನೋಡಿಕೊಂಡರೆ ಅದನ್ನು ಹಸಿರಾಗಿಸಿ ಹೂವುಗಳಿಂದ ತುಂಬಿರುವಂತೆ ಮಾಡಬಹುದು. ಚಳಿಗಾಲದಲ್ಲಿ ಚೆಂಡು ಹೂ ಗಿಡಕ್ಕೆ ಹೆಚ್ಚು ನೀರು ಹಾಕುವ ಅಗತ್ಯವಿಲ್ಲ. ನಿಮ್ಮ ಚೆಂಡು ಹೂವಿನ ಗಿಡ ಹಸಿರಾಗಿದ್ದು ಚೆನ್ನಾಗಿ ಹೂ ಬಿಡಬೇಕಾದರೆ ಇಲ್ಲಿದೆ ಸಿಂಪಲ್ ಟಿಪ್ಸ್.

**ಚೆಂಡು ಹೂ ಗಿಡದ ಆರೈಕೆ**

ಚೆಂಡುಹೂವಿನ ಗಿಡಕ್ಕೆ ಈ ಒಂದು ವಸ್ತು ಹಾಕೋದ್ರಿಂದ ಚೆಂಡು ಹೂ ಸಸ್ಯಕ್ಕೆ ತುಂಬಾ ಪ್ರಯೋಜನಕಾರಿ ಮತ್ತು ಉಪಯುಕ್ತವಾಗಿದೆ ಎಂದು ಸಾಬೀತುಪಡಿಸುತ್ತದೆ. ಈ ವಸ್ತುವು ಅನೇಕ ಅಂಶಗಳ ಗುಣಲಕ್ಷಣಗಳನ್ನು ಹೊಂದಿದ್ದು, ಚಳಿಗಾಲದಲ್ಲೂ ಸಸ್ಯವನ್ನು ಹೂವುಗಳಿಂದ ತುಂಬಿರುವಂತೆ ಮಾಡುತ್ತದೆ. ನಿಮ್ಮ ಮನೆಯಲ್ಲಿ ಈ ವಸ್ತುವನ್ನು ನೀವು ಸುಲಭವಾಗಿ ಕಾಣಬಹುದು. ಹಾಗಾದರೆ ಈ ವಿಶೇಷ ವಿಷಯ ಏನು ಮತ್ತು ಚೆಂಡು ಹೂ ಗಿಡದ ಆರೈಕೆಗೆ ಇಲ್ಲಿದೆ ಸಲಹೆಗಳು.

**ಚೆಂಡು ಹೂ ಗಿಡಕ್ಕೆ ಈ ಒಂದು ವಸ್ತು ಹಾಕಿ**



ಜನವರಿ ತಿಂಗಳಲ್ಲಿ ಚಳಿಯು ಗಿಡಕ್ಕೆ ಹಾನಿಯನ್ನುಂಟುಮಾಡುತ್ತದೆ. ಇಂದು ನಾವು ಈ ಋತುವಿನಲ್ಲಿ ಚೆಂಡು ಹೂ ಗಿಡಕ್ಕೆ ಸೇರಿಸಬೇಕಾದ ಎಪ್ಸಮ್ ಉಪ್ಪಿನ ಬಗ್ಗೆ ಹೇಳುತ್ತಿದ್ದೇವೆ.

ಎಪ್ಸಮ್ ಉಪ್ಪು ಚೆಂಡು ಹೂ ಗಿಡಕ್ಕೆ ತುಂಬಾ ಪ್ರಯೋಜನಕಾರಿ.

ಇದು ಮೆಗ್ನೀಸಿಯಮ್ ಮತ್ತು ಸಲ್ಫರ್‌ನಂತಹ ಪೋಷಕಾಂಶಗಳನ್ನು ಹೊಂದಿದ್ದು, ಇದು ಸಸ್ಯದಲ್ಲಿ ಹೂವಿನ ಉತ್ಪಾದನೆಯನ್ನು ಹಲವು ಪಟ್ಟು ಹೆಚ್ಚಿಸಲು ಸಹಾಯ ಮಾಡುತ್ತದೆ.

ಎಪ್ಸಮ್ ಉಪ್ಪು ಹೂವುಗಳ ಉತ್ಪಾದನೆಯನ್ನು ಹೆಚ್ಚಿಸುವುದರ ಜೊತೆಗೆ ಸಸ್ಯದ ಬೆಳವಣಿಗೆಯನ್ನು ವೇಗವಾಗಿ ಹೆಚ್ಚಿಸುವಲ್ಲಿ ಪರಿಣಾಮಕಾರಿಯಾಗಿದೆ. ಇದು ಸಸ್ಯವನ್ನು ಹಸಿರಾಗಿರಿಸುತ್ತದೆ.



**ಸಸ್ಯಗಳ ಮೇಲೆ ಎಪ್ಸಮ್ ಉಪ್ಪನ್ನು ಹೇಗೆ ಬಳಸುವುದು?**

ಚೆಂಡು ಹೂ ಗಿಡದಲ್ಲಿ ಎಪ್ಸಮ್ ಉಪ್ಪಿನ ಬಳಕೆಯು ತುಂಬಾ ಪ್ರಯೋಜನಕಾರಿ ಮತ್ತು ಪರಿಣಾಮಕಾ–ರಿಯಾಗಿದೆ.



ಇದನ್ನು ಸಸ್ಯದಲ್ಲಿ ಬಳಸಲು, ಮೊದಲು ನೀವು ಒಂದು ಲೀಟರ್ ನೀರಿಗೆ ಒಂದು ಚಮಚ ಎಪ್ಸಮ್ ಉಪ್ಪನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಬೇಕು. ನಂತರ ಈ ದ್ರಾವಣವನ್ನು ಎಲೆಗಳ ಮೇಲೆ ಸಿಂಪಡಿಸಬೇಕು.

ಇದನ್ನು ಪ್ರತಿದಿನ ಬಳಸಬಾರದು. ನೀವು ಇದನ್ನು ತಿಂಗಳಿಗೆ ಎರಡರಿಂದ ಮೂರು ಬಾರಿ ಮಾತ್ರ ಬಳಸಬಹುದು. ಹೀಗೆ ಮಾಡುವುದರಿಂದ, ಚೆಂಡು ಹೂ ಗಿಡದ ಬೆಳವಣಿಗೆ ಸುಧಾರಿಸುತ್ತದೆ ಮತ್ತು ಹೆಚ್ಚು ಹೂವುಗಳು ಅರಳುತ್ತವೆ.

**ಚೆಂಡು ಹೂವನ್ನು ಹೇಗೆ ಬೆಳೆಸುವುದು**

ಚೆಂಡು ಹೂವು ಗಿಡಗಳು ಬೆಳೆದ ನಂತರ ಸಸ್ಯಗಳ ಮೇಲ್ಭಾಗವನ್ನು ಚಿವುಟಿ ಪೊದೆಯಾಗಿ ಬೆಳೆಯಲು ಪ್ರೋತ್ಸಾಹಿಸಿ. ಇದು ಸಸ್ಯಗಳು ಉದ್ದವಾಗಿ ಬೆಳೆಯುವುದನ್ನು ತಡೆಯುತ್ತದೆ ಮತ್ತು ಹೆಚ್ಚು ಹೂಬಿಡುವುದನ್ನು ಉತ್ತೇಜಿಸುತ್ತದೆ.

ಚೆಂಡು ಹೂವು ಗಿಡದಲ್ಲಿರುವ ಒಣ–ಗಿರುವ ಹೂವುಗಳನ್ನು ನಿಯಮಿತವಾಗಿ ತೆಗೆದುಹಾಕಿದರೆ, ಅದು ಸಸ್ಯವು ಹೇರಳವಾಗಿ ಹೂ ಬಿಡುವುದನ್ನು ಉತ್ತೇಜಿಸುತ್ತದೆ.

ನೀವು ಚೆಂಡು ಹೂವು ಗಿಡಗಳಿಗೆ ನೀರುಣಿಸುವಾಗ, ನೀರಿನ ನಡುವೆ ಮಣ್ಣು ಸ್ವಲ್ಪ ಒಣಗಲು ಬಿಡಿ, ನಂತರ ಚೆನ್ನಾಗಿ ನೀರು ಹಾಕಿ ಮತ್ತು ಪ್ರಕ್ರಿಯೆಯನ್ನು ಪುನರಾವರ್ತಿಸಿ. ಹೆಚ್ಚಿನ ಶಾಖದಲ್ಲಿ ಹೆಚ್ಚು ನೀರು ಹಾಕಿ.

ಗಿಡಗಳಿಗೆ ಮೇಲಿನಿಂದ ನೀರು ಹಾಕಬೇಡಿ, ಸಸ್ಯದ ಬುಡದ ಭಾಗದಲ್ಲಿ ನೀರು ಹಾಕಿ. ಬೆಳವಣಿಗೆಯ ಸಮಯದಲ್ಲಿ ಮಾರಿಗೋಲ್ಡ್‌ಗಳನ್ನು ಫಲವತ್ತಾಗಿಸಬೇಡಿ.

ತುಂಬಾ ಸಾರಜನಕ–ಸಮೃದ್ಧವಾಗಿರುವ ಆಹಾರವು ಹೂವುಗಳ ವೆಚ್ಚದಲ್ಲಿ ಸೊಂಪಾದ ಎಲೆಗಳನ್ನು ಉತ್ತೇಜಿಸುತ್ತದೆ.

ಕಳೆಗಳನ್ನು ನಿಗ್ರಹಿಸಲು ಮತ್ತು ಮಣ್ಣನ್ನು ತೇವವಾಗಿಡುವುದು ಮುಖ್ಯ. ವಿಶೇಷವಾಗಿ ಸಸ್ಯಗಳು ಚಿಕ್ಕದಾಗಿದ್ದಾಗ.

# ಇದ್ದಕ್ಕಿದಂತೆ ಹಿಂಗೆಲ್ಲಾ ಗಂಟುಗಳಲ್ಲಿ ಸಮಸ್ಯೆಗಳು ಕಾಣಿಸಿಕೊಂಡರೆ, ಮೂಳೆಗಳಲ್ಲಿ ಸಮಸ್ಯೆ ಇದೆಯೆಂದರ್ಥ

ವಯಸ್ಸಾದ ಮೇಲೆ ಕೈ ಕಾಲು ಹಿಡಿದುಕೊಳ್ಳುವುದು, ಮಂಡಿ ನೋವು ಅಥವಾ ಕೈಕಾಲುಗಳ ಗಂಟು ನೋವು ಸಮಸ್ಯೆ ಕಾಣಿಸಿಕೊಳ್ಳುವುದು ನಮಗೆಲ್ಲಾ ಗೊತ್ತಿರುವ ವಿಚಾರ.ಗಂಟು ನೋವು ಬಂದರೆ ಆಗ ದೈನಂದಿನ ಚಟುವಟಿ–ಕೆಗಳ ಮೇಲೆ ಇದು ಪರಿಣಾಮ ಬೀರುವುದು. ಹೀಗಾಗಿ ಇದನ್ನು ಆರಂಭದಲ್ಲೇ ಪತ್ತೆ ಮಾಡಿಕೊಂಡು ಅದಕ್ಕೆ ಸೂಕ್ತ ಚಿಕಿತ್ಸೆ ನೀಡಲು ಅದರ ಲಕ್ಷಣಗಳನ್ನು ತಿಳಿಯುವುದು ಅಗತ್ಯ.

ದೇಹದಲ್ಲಿ ತೂಕ ಹೆಚ್ಚಾಗಿ ಬೊಜ್ಜು ಆವರಿಸಿಕೊಂಡ ವೇಳೆ



ಅದರ ಸಂಪೂರ್ಣ ಭಾರವು ಗಂಟುಗಳ ಮೇಲೆ ಬಿದ್ದು, ಅದ–ರಿಂದ ಸಮಸ್ಯೆಯಾಗುವುದು ಇದೆ. ಹೀಗಾಗಿ ದೇಹದ ತೂಕ ಸಮತೆ ೋಲನದಲ್ಲಿಟ್ಟುಕೊಳ್ಳುವುದು ಅತೀ ಅಗತ್ಯ. ಇಂದಿನ ದಿನಗಳಲ್ಲಿ ಗಂಟು ನೋವಿನ ಸಮಸ್ಯೆಯು ಹೆಚ್ಚಾಗುತ್ತಿದ್ದು, ಇದಕ್ಕೆ ಜೀವನಶೈಲಿ ಕೂಡ ಪ್ರಮುಖ ಕಾರಣವಾಗಿದೆ.

ಗಂಟುನೋವಿನ ಸಮಸ್ಯೆಯಿದ್ದರೆ, ಆಗ ಇದರಿಂದ ನಿತ್ಯದ ಚಟುವಟಿ–ಕೆಗಳನ್ನು ಮಾಡಲು ಕಷ್ಟವಾಗಬಹುದು. ನಿರಂತರ ನೋವು, ಊತ ಮತ್ತು ಚಲನೆಗೆ ಪರಿಣಾಮವಾದರೆ ಆಗ ಇದು ಸಂಧಿವಾತ, ಕಾರ್ಟಿಲೆಜ್ ಹಾನಿ, ಮೆನಿಸ್ಕಸ್ ಅಥವಾ ಅಸ್ಥಿರಜ್ಜು ಗಾಯಗಳ ಕಾರಣದಿಂದ ಇರಬಹುದು. ಈ ಎಲ್ಲಾ ಪರಿಸ್ಥಿತಿಗಳನ್ನು ಅರ್ಥ ಮಾಡಿಕೊಳ್ಳಬೇಕು. ಗಂಟು ನೋವಿನ ಸಮಸ್ಯೆಯ ಲಕ್ಷಣಗಳನ್ನು ತಿಳಿದರೆ, ಆಗ ಅದಕ್ಕೆ ಸೂಕ್ತ ರೀತಿಯಲ್ಲಿ ಚಿಕಿತ್ಸೆ ಕೂಡ ನೀಡಬಹುದು. ಹೀಗಾಗಿ ಗಳನ್ನು ತಿಳಿದುಕೊಂಡರೆ, ಆಗ ಅದು ತೀವ್ರ ಸ್ವರೂಪಕ್ಕೆ ತಿರುಗುವುದನ್ನು ಕಡಿಮೆ ಮಾಡಬಹುದು.


**ಅಸಹನೀಯ ನೋವು**

ಚಲನೆ ವೇಳೆ ಅಥವಾ ಬಳಿಕ ನೋವು ಕಾಣಿಸಿಕೊಂಡರೆ ಆಗ ಇದು ದೊಡ್ಡ ಸಮಸ್ಯೆಯ ಲಕ್ಷಣವಾಗಿದೆ. ಯಾವುದೇ ಚಟುವಟಿಕೆ ವೇಳೆ ಅಥ–'ವಾ ಗಂಟುಗಳನ್ನು ದೀರ್ಘಕಾಲ ಬಳಕೆ ಮಾಡಿದರೆ ಆಗ ಇದ–ರಿಂದ ತೀವ್ರ ಅಥವಾ ಸ್ವಲ್ಪ ನೋವು ಕಂಡುಬರಬಹುದು. ಇದು ಗಂಟು ನೋವು ಎಂದು ತಿಳಿಯಿರಿ. ವಿಶ್ರಾಂತಿ ವೇಳೆ ಕೂಡ ಇದ್ದರೆ, ಆಗ ಇದು ಸಂಧಿವಾತದ ಲಕ್ಷಣವಾಗಿದೆ.

**ಗಂಟುಗಳಲ್ಲಿ ಬಿಗಿತ್ವ**

ಬೆಳಗ್ಗೆ ಅಥವಾ ಯಾವುದೇ ಚಟುವಟಿಕೆ ವೇಳೆ ಗಂಟುಗಳು ಬಿಗಿಯಾಗಿದ್ದರೆ ಆಗ ಇದು ಗಂಟು ನೋವಿನ ಸಮಸ್ಯೆಯ ಲಕ್ಷಣವಾಗಿದೆ. ಗಂಟುಗಳು ಬೆಳಗ್ಗಿನ ವೇಳೆ ಅಂ–





ದರೆ ಎದ್ದ ಒಂದು ಗಂಟೆ ಬಳಿಕ ಬಿಗಿತ್ವವಿದ್ದರೆ, ಆಗ ಇದು ರುಮಟಾಯ್ಡ್ ಸಂಧಿವಾತದ ಲಕ್ಷಣವಾಗಿದೆ.

**ಕಾಲಿನಲ್ಲಿ ಊತ ಕಾಣಿಸಿಕೊಳ್ಳುವುದು**

ಗಂಟುಗಳ ಸುತ್ತಲು ಯಾವಾಗಲೂ ಊತ ಕಾಣಿಸಿಕೊಳ್ಳುತ್ತಿದ್ದರೆ, ಇದು ಮೃಧು ಅಸ್ಥಿಯ ಉರಿಯೂತದ ಲಕ್ಷಣವಾಗಿದೆ. ಈ ಭಾದಿತ ಜಾಗವು ಹೆಚ್ಚಾಗಿ ಊತದಿಂದ ಕೂಡಿರುವುದು. ಕೆಲವೊಮ್ಮೆ ಇದು ಬಿಸಿ, ಮೆತ್ತಗೆ ಅಥವಾ ಮುಟ್ಟಿದ ವೇಳೆ ನೋವು ಕಾಣಿಸಬಹುದು. ಊತವು ಯಾವುದೇ ರೀತಿಯ ಗಾಯ ಅಥವಾ ಸೋಂಖಿನ ಲಕ್ಷಣವಾಗಿರಬಹುದು. ಇದು ದೀರ್ಘಕಾಲದ ಗಂಟಿನ ಸಮಸ್ಯೆಯ



ಲಕ್ಷಣವಾಗಿರಬಹುದು.

**ಚಲನೆಯ ಮೇಲೆ ಪರಿಣಾಮ**


ಗಂಟುಗಳ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಸಂಪೂರ್ಣವಾಗಿ ಚಲನೆಯಲ್ಲಿ ಇಲ್ಲದೆ ಇದ್ದರೆ ಆಗ ಇದು ಕೂಡ ಗಂಟುನೋವಿನ ಲಕ್ಷಣವಾಗಿದೆ. ಬಗ್ಗಿಸಲು ಅಥವಾ ತಿರುಗಿಸಲು ಕಷ್ಟವಾಗಬಹುದು. ಮೆಟ್ಟಿಲುಗಳನ್ನು ಹತ್ತಲು ಇತ್ಯಾದಿ ಕೆಲಸಗಳ ಮೇಲೆ ಇದರಿಂದ ಪರಿಣಾಮ ಬೀರಬಹುದು. ಇದಕ್ಕೆ ಚಿಕಿತ್ಸೆ ನೀಡದೆ ಇದ್ದರೆ ಆಗ ಇದರಿಂದ ಇನ್ನಷ್ಟು ಪರಿಣಾಮಗಳು ಆಗುವುದು.

**ಜಜ್ಜಿದ ಗಾಯ ಇದ್ದರೆ**

ಗಂಟಿನ ಸುತ್ತಲು ಜಜ್ಜಿದ ಗಾಯ ಇದ್ದರೆ ಆಗ ಇದು ಯಾವುದೇ ಗಾಯ ಅಥವಾ ಅಪಘಾತದ ಸೂಚನೆಯಾಗಿದೆ. ಗಂಟುಗಳು ಸ್ಥಾನಪಲ್ಲಟವಾಗಿ ರುವುದು ಅಥವಾ ಊದಿಕೊಳ್ಳುವುದು ಕೂಡ ಗಂಟು ನೋವಿನ ಲಕ್ಷಣವಾಗಿದೆ. ಸ್ಥಾನಪಲ್ಲಟ ಅಥವಾ ತೀವ್ರ ಸಂಧಿವಾತದ ಲಕ್ಷಣಗಳು ಇದಾಗಿದೆ. ಇದಕ್ಕೆ ಸರಿಯಾದ ಚಿಕಿತ್ಸೆ ಪಡೆದುಕೊಳ್ಳುವುದು ಅತೀ ಅಗತ್ಯವಾಗಿದೆ.

**ಗಂಟು ನೋವಿನಿಂದ ಪರಿಹಾರ ಹೇಗೆ?**

ಗಂಟು ನೋವಿನ ಸಮಸ್ಯೆಯನ್ನು ಕಡೆಗಣಿಸಿದರೆ, ಆಗ ದೊಡ್ಡ ಮಟ್ಟದಲ್ಲಿ ತೊಂದರೆ ಆಗಬಹುದು. ಶಾಶ್ವತವಾಗಿ ಹಾನಿಯಾಗುವುದು ಮತ್ತು ಉನ್ನತ ಮಟ್ಟದ ಜೀವನಶೈಲಿಯಲ್ಲಿ ಪಾಲಿಸಲು ಆರಂಭದಲ್ಲೇ ಚಿಕಿತ್ಸೆ ಮಾಡಬೇಕು. ನಿಖರವಾಗಿ ಇದನ್ನು ಪತ್ತೆ ಮಾಡಿಕೊಂಡು, ಅದಕ್ಕೆ ಸೂಕ್ತ ಚಿಕಿತ್ಸೆ ನೀಡಬೇಕು. ಯಾವುದೇ ಲಕ್ಷಣಗಳು ಕಾಣಿಸಿಕೊಂಡರೆ, ಆಗ ವೈದ್ಯರನ್ನು ಭೇಟಿ ಮಾಡಿ ಅವರಿಂದ ಸಲಹೆ ಪಡೆಯಿರಿ. ಆರಂಭದಲ್ಲೇ ಇದನ್ನು ಪತ್ತೆ ಮಾಡಿ ಚಿಕಿತ್ಸೆ ನೀಡಿದರೆ ಆಗ ಮುಂದೆ ಆಗುವ ದೊಡ್ಡ ಅಪಾಯವನ್ನು ತಪ್ಪಿಸಬಹುದು.



# ಸರ್ವೇ ದಾಖಲೆಗಳ ಡಿಜಿಟಲೀಕರಣದ ಭೂ ಸುರಕ್ಷಾ ಯೋಜನೆಗೆ ಚಾಲನೆ



ಇಂಡಿ : ನಗರದ ತಾಲೂಕು ಕಚೇರಿಯಲ್ಲಿ ಅಭಿಲೇಖಾಲಯದಲ್ಲಿನ ದಾಖಲೆಗಳು ಮತ್ತು ಸರ್ವೇ ದಾಖಲೆಗಳ ಡಿಜಿಟಲೀಕರಣದ ಭೂ ಸುರಕ್ಷಾ ಯೋಜನೆಗೆ ಶುಕ್ರವಾರ ಚಾಲನೆ ದೊರೆತಿದೆ.

ಕಂದಾಯ ಉಪವಿಭಾಗಾಧಿಕಾರಿಗಳು ಅಬೀದ್ ಗದ್ಯಾಳ ಯೋಜನೆಗೆ ಚಾಲನೆ ನೀಡಿ ಮಾತನಾಡಿ ರೈತರು ತಮ್ಮ ಭೂ ದಾಖಲೆಗಳನ್ನು ಕಳೆದುಕೊಂಡು ಮತ್ತೆ ಪಡೆಯಲು ತಹಸೀಲ್ದಾರ ಕಚೇರಿಗೆ ಅಲೆದಾಡಿದರೂ ದಾಖಲೆಗಳು ದೊರೆಯುತ್ತಿರಲಿಲ್ಲ. 40–50 ವರ್ಷದ ಹಳೆಯ ಭೂ ದಾಖಲೆಗಳ ಪತ್ರದ ಕಾಗದ ಹಳೆಯದಾಗಿ ಹರಿದು ಹೋಗಿ ತನ್ನ ಅಸ್ತಿತ್ವ ಕಳೆದುಕೊಳ್ಳುತ್ತಿತ್ತು. ಇದನ್ನು ಚಿಂತಿಸಿ ಸರಕಾರ ಮುಂದಾಗಿದೆ ಎಂದು ತಿಳಿಸಿದರು.

ಭೂ ಸುರಕ್ಷಾ ಎಂಬ ಅಪ್ಲಿಕೇಶನ್ ನಲ್ಲಿ ನಿಮ್ಮ ಭೂ ದಾಖಲೆಯ ಸಂಖ್ಯೆಯನ್ನು ನೀಡಿದರೆ ಸಾಕು ಒಂದು ನಿಮಿಷದಲ್ಲಿ ನಿಮ್ಮ ಭೂ ದಾಖಲೆ ಪತ್ರಗಳನ್ನು ನೀಡುವ ಕ್ರಾಂತಿಕಾರಿ ಯೋಜನೆಯನ್ನು ಸರಕಾರ ಮಾಡಿದೆ. ಇಂದು ಡಿಜಟಲೀಕರಣ ಯೋಜನೆಗೆ ಅಧಿಕೃತವಾಗಿ ಚಾಲನೆ ನೀಡಿರುವದು ಸಂತಸದ ವಿಷಯ. ಈ ಯೋಜನೆಯಿಂದ ರೈತರು ಹಾಗೂ ಸಾರ್ವಜನಿಕರಿಗೆ ಅವರಿಗೆ ಬೇಕಾದ ಸಮಯದಲ್ಲಿ ದಾಖಲೆಗಳ ಪ್ರಿಂಟ್ ಗಳನ್ನು ಕೊಡಬಹುದು ಎಂದರು.

ರೈತರಿಗೆ ಸಮಸ್ಯೆಗಳನ್ನು ಪರಿಹರಿಸಲು ಕಂದಾಯ ಇಲಾಖೆಯಲ್ಲಿ ಡಿಜಿಟಲೀಕರಣ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಇಲ್ಲಿಯ ತನಕ ಕಂದಾಯ ಇಲಾಖೆಯಲ್ಲಿ ನೊಂದಣಿಯಾಗಿರುವ ಎಲ್ಲ ಭೂಮಿ ದಾಖಲಾತಿಗಳನ್ನು ಸ್ಕ್ಯಾನ್ ಮಾಡಿ ಕ್ಲೌಡ್ ನಲ್ಲಿ ಸಂಸ್ಕರಿಸಲಾಗುವ ಯೋಜನೆ ಇದಾಗಿದೆ ಎಂದರು.

ತಹಸೀಲ್ದಾರ ಬಿ.ಎಸ್.ಕಡಕಭಾವಿ, ಗ್ರೇಡ್ 2 ತಹಸೀಲ್ದಾರ ಧನಪಾಲಶೆಟ್ಟಿ ದೇವೂರ, ಶಿರಸ್ತೆದಾರ ಎಸ್.ಆರ್.ಮುಜಗೊಂಡ, ರಾಜು ಮೂಗಿ, ಸಂಕೇತ ಪಾಟೀಲ,ಎಸ್.ಎಚ್.ಗುನ್ನಾಪುರ ಹಾಗೂ ಮತ್ತಿತ–ರಿದ್ದರು.

********

# ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿ ಆಯ್ಕೆ



ಇಂಡಿ : ಪುರಸಭೆಗೆ ಸಂಗೀತಾ ಕರಕಟ್ಟಿ ಇವರನ್ನು ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಭೀಮನಗೌಡ ಪಾಟೀಲ, ರೇಖಾ ಮೂರಮನ, ಶಬ್ಬಿರ ಖಾಜಿ, ಅಯೂಬ ಬಾಗವಾನ, ದೇವೆಂದ್ರ ಕುಂಬಾರ,ಸಂಗೀತಾ ಕರಕಟ್ಟಿ, ಭಾಗಿರಥಿ ಕುಂಬಾರ, ಮುಸ್ತಾಕ ಅಹಮ್ಮದ ಇಂಡಿಕರ, ಅಸ್ಲಂ ಕಡಣಿ, ಉಮೇಶ ದೇಗಿನಾಳ, ಕವಿತಾ ರಾಠೋಡ ಸದಸ್ಯರಾಗಿ ಆಯ್ಕೆ ಯಾಗಿದ್ದಾರೆ.

ಪುರಸಭೆ ಮುಖ್ಯಾಧಿಕಾರಿ ಶಿವಾನಂದ ಪೂಜಾರಿ, ಅಧ್ಯಕ್ಷ ಲಿಂಬಾಜಿ ರಾಠೋಡ, ಉಪಾಧ್ಯಕ್ಷ ಜಹಾಂಗೀರ ಸೌದಾಗರ ಮತ್ತು ಸ್ಥಾಯಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

# ಸ್ಮರಣ ಸಂಚಿಕೆ ಬಿಡುಗಡೆ



ಗೋಕಾಕ: ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇದ್ದು, ಪಾಲಕರು ತಮ್ಮ ಮಕ್ಕಳ ತಮ್ಮ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡುವಂತೆ ವಿಧಾನ ಪರಿಷತ ಸದಸ್ಯ ಹಾಗೂ ಮಯೂರ ಆಂಗ್ಲ ಮಾಧ್ಯಮ ಶಾಲೆಯ ಅಧ್ಯಕ್ಷ ಲಖನ ಜಾರಕಿಹೊಳಿ ಹೇಳಿದರು.

ಅವರು, ಶುಕ್ರವಾರದಂದು ನಗರದ ಮಯೂರ ಆಂಗ್ಲ ಮಾಧ್ಯಮ ಶಾಲೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಸ್ಮರಣ ಸಂಚಿಕೆ ಬಿಡುಗಡೆಗೊಳಿಸಿ ಮಾತನಾಡಿ, ಸೇವಾ ಮನೋಭಾವದಿಂದ ಸಾಮಾಜಿಕ ಕಳಕಳಿಯೊಂದಿಗೆ ಈ ಭಾಗದ ಮಕ್ಕಳಿಗೆ ಗುಣ ಮಟ್ಟದ ಶಿಕ್ಷಣದೊಂದಿಗೆ ಅವರ ಜ್ಞಾನ ಮಟ್ಟ ವಿಕಾಸಕ್ಕೆ ಎಲ್ಲ ರೀತಿಯ ಸೌಲಭ್ಯಗಳೊಂದಿಗೆ ಸಂಸ್ಥೆ ಕಾರ್ಯನಿರ್ವಹಿಸುತ್ತಿದ್ದು ಪಾಲಕರು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳುವಂತೆ ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಇಲ್ಲಿಯ ಕ್ಷೇತ್ರ ಶಿಕ್ಷಣಾಧಿಕಾರಿ ಜಿ ಬಿ ಬಳಗಾರ ಮಾತನಾಡಿ, ಪಾಲಕರು ತಮ್ಮ ಮಕ್ಕಳಿಗೆ ಶಿಕ್ಷಣದೊಂದಿಗೆ ಉತ್ತಮ ಸಂಸ್ಕಾರ ನೀಡಿ ಅವರನ್ನು ಮೌಲ್ಯಯುತ ಆಸ್ತಿಯನ್ನಾಗಿ ಮಾಡುವಂತೆ ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಗೌರವಿಸಿ ಸತ್ಕರಿಸಲಾಯಿತು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ವೇದಿಕೆಯ ಮೇಲೆ ಅತಿಥಿ ಮೂಡಲಗಿ ಕ್ಷೇತ್ರ ಶಿಕ್ಷಣಾಧಿಕಾರಿ ಅಜೀತ ಮನ್ನಿಕೇರಿ, ಸಂಸ್ಥೆಯ ಉಪಾಧ್ಯಕ್ಷೆ ಶ್ರೀಮತಿ ಸಂಧ್ಯಾ ಲಖನ ಜಾರಕಿಹೊಳಿ, ಕಾರ್ಯದರ್ಶಿ ಸದಾನಂದ ಕಲಾಲ, ನಿರ್ದೇಶಕ ವಿನಾಯಕ ಚಿಪ್ಪಲಕಟ್ಟಿ, ಆಡಳಿತಾಧಿಕಾರಿ ಎಸ್ ಡಿ ಮುರಗೋಡ, ಮುಖ್ಯೋಪಾಧ್ಯಾಯನಿ ಸುಚಿತ್ರಾ ಹತಪಾಕಿ ಇದ್ದರು.

# ನೂತನ ಆಡಳಿತ ಮಂಡಳಿಯು ಹೊಸ ಹೊಸ ಕಾರ್ಯಕ್ರಮ



ಗೋಕಾಕ: ರೈತ ಸಮೂಹಕ್ಕೆ ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಒದಗಿಸಲು ಪಕ್ಷಾತೀತವಾಗಿ ಶ್ರಮಿಸುವಂತೆ ಶಾಸಕ ಮತ್ತು ಬೇಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಅವರು ಹೇಳಿದರು.

ತಾಲ್ಲೂಕಿನ ಕೌಜಲಗಿ ಪಿಕೆಪಿಎಸ್ ನೂತನ ಆಡಳಿತ ಮಂಡಳಿಯಿಂದ ಸತ್ಕಾರ ಸ್ವೀಕರಿಸಿ ಮಾತನಾಡಿದ ಅವರು, ರೈತರ ಹಿತದೃಷ್ಟಿಯಿಂದ ಉತ್ತಮವಾದ ಸೇವೆ ಸಲ್ಲಿಸುವ ಮೂಲಕ ರೈತ ವರ್ಗದ ಪ್ರೀತಿ ಸಂಪಾದಿಸಿಕೊಳ್ಳುವಂತೆ ಅವರು ಕಿವಿಮಾತು ಹೇಳಿದರು.

ರೈತರ ಆರ್ಥಿಕ ಅಭಿವೃದ್ಧಿಗೆ ನೂತನ ಆಡಳಿತ ಮಂಡಳಿಯು ಹೊಸ ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಜೊತೆಗೆ ಸಾಲ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಬಿಡಿಸಿಸಿ ಬ್ಯಾಂಕ್ನಿಂದ ಸಿಗುವ ಸೌಲಭ್ಯಗಳನ್ನು ಪಡೆದುಕೊಂಡು ಸಂಘವನ್ನು ಅಭಿವೃದ್ಧಿ ಮಾಡುವಂತೆಯೂ ಅವರು ಸಲಹೆ ನೀಡಿದರು.ಶಾಸಕ ಬಾಲಚಂದ್ರ ಜಾರಕಿಹೊಳಿ ಅವರನ್ನು ಪಿಕೆಪಿಎಸ್‌ದಿಂದ ಸತ್ಕರಿಸಲಾಯಿತು.

ಜಿಪಂ ಮಾಜಿ ಸದಸ್ಯ ರಾಜೇಂದ್ರ ಸಣ್ಣಕ್ಕಿ ಅವರ ನೇತೃತ್ವದಲ್ಲಿ ಸಂಘದ ಎಲ್ಲ ಸ್ಥಾನಗಳನ್ನು ಗೆಲ್ಲುವ ಮೂಲಕ ಕ್ಲೀನ್ ಸ್ವಿಪ್ ಗೆಲುವು ಕಂಡಿದೆ.

ಈ ಸಂದರ್ಭದಲ್ಲಿ ಪಿಕೆಪಿಎಸ್ ಗೆಲುವಿನ ರೂವಾರಿ ರಾಜೇಂದ್ರ ಸಣ್ಣಕ್ಕಿ, ಎಸ್.ಬಿ. ಲೋಕನ್ನವರ್, ನೂತನ ಅಧ್ಯಕ್ಷ ವೆಂಕಟೇಶ ದಳವಾಯಿ, ಅರ್ಬನ್ ಬ್ಯಾಂಕ್ ಅಧ್ಯಕ್ಷ ನಿಲೇಶ್ ಕೇವಟಿ, ಮಾಜಿ

ಪಿಕೆಪಿಎಸ್ ಅಧ್ಯಕ್ಷ ಮಹೇಶ್ ಪಟ್ಟಣಶೆಟ್ಟಿ, ಮಹಾಂತೇಶ್ ಶಿವನಮಾರಿ, ರಾಯಪ್ಪ ಬಳೊಳದಾರ್, ಶಂಕರ ಜೋತಿನ್ನವರ್, ಬಸವರಾಜ್ ಲೋಕನ್ನವರ್, ಬಸು ಜೋಗಿ, ಫಕ್ಕೀರಪ್ಪ ಪೂಜೆನ್ನವರ್, ಶ್ರೀಶೈಲ ಗಾಣಿಗೇರ, ಶಂಕರ ಚಚಡಿ, ಶಿವರಾಯಿ ಹಳ್ಳೂರ, ಮರೆನ್ನವರ್, ಗ್ರಾಮ ಪಂಚಾಯತಿ ಸದಸ್ಯರು,ಪಿಕೆಪಿ–ಎಸ್ ಸದಸ್ಯರು ಸೇರಿದಂತೆ ಅನೇಕರು ಉಪ್ಥಿತರಿದ್ದರು.

ಶಾಸಕ ಬಾಲಚಂದ್ರ ಜಾರಕಿಹೊಳಿ ಅವರು ನೂತನ ಆಡಳಿತ ಮಂಡಳಿಯ ಸದಸ್ಯರಿಗೆ ಶುಭ ಕೋರಿದರು.

ಈ ಸಂದರ್ಭದಲ್ಲಿ ರಾಜೇಂದ್ರ ಸಣ್ಣಕ್ಕಿ, ಶಿವಾನಂದ ಲೋಕಣ್ಣವರ್, ಪಿಕೆಪಿಎಸ್ ನೂತನ ಅಧ್ಯಕ್ಷ ವೆಂಕಟೇಶ ದಳವಾಯಿ ಸೇರಿದಂತೆ ಅನೇಕರು ಉಪ್ಥಿತರಿದ್ದರು.

## ಹಿಂಗಾರು ಹಂಗಾಮಿನ ಬೆಳೆ ಸಮೀಕ್ಷೆ ಕುರಿತು ರೈತರಲ್ಲಿ ಮನವಿ

ಧಾರವಾಡ:2024–25 ನೇ ಸಾಲಿನ ಹಿಂಗಾರು ಹಂಗಾಮಿನಲ್ಲಿ ಬೆಳೆ ಸಮೀಕ್ಷೆ ಆ್ಯಪ್ ಬಿಡುಗಡೆ ಮಾಡಿದ್ದು ರೈತರು ತಾವು ಬೆಳೆದ ಬೆಳೆಗಳ ಮಾಹಿತಿಯನ್ನು ಬೆಳೆ ಸಮೀಕ್ಷೆ ಆ್ಯಪ್‌ನಲ್ಲಿ ನೋಂದಾಯಿಸಬೇಕು. ಸರಕಾರದ ವಿವಿಧ ಯೋಜನೆಗಳಾದ ಫಸಲ ಭೀಮಾ ಯೋಜನೆ, ಬೆಳೆ ಪರಿಹಾರ, ಬೆಂಬಲ ಬೆಲೆ ಯೋಜನೆಗಳ ಸೌಲಭ್ಯವನ್ನು ಪಡೆಯಲು ಬೆಳೆ ಸಮೀಕ್ಷೆ ಮಾಡುವುದು ಅವಶ್ಯಕವಾಗಿರುತ್ತದೆ.

ಬೆಳೆ ವಿಮೆ ಮಾಡಿಸಿದ ರೈತರು ಕಡ್ಡಾಯವಾಗಿ ತಾವು ಬೆಳೆದ ಬೆಳೆಯನ್ನು ಬೆಳೆ ಸಮೀಕ್ಷೆಯಡಿ ನೋಂದಾಯಿಸಬೇಕು. ಬೆಳೆ ಸಮೀಕ್ಷೆ ಆ್ಯಪ್‌ನ್ನು ಗೂಗಲ್ ಪ್ಲೇಸ್ಟೋರ್‌ನಲ್ಲಿ ಲಭ್ಯವಿದ್ದು, ಹಿಂಗಾರು ರೈತರ ಬೆಳೆ ಸಮೀಕ್ಷೆ 2024 ಎಂದು ಟೈಪ್ ಮಾಡಿ ಆ್ಯಪ್ ಡೌನ್‌ಲೋಡ್ ಮಾಡುವ ಮೂಲಕ ಪಡೆದು ಬೆಳೆ ಸಮೀಕ್ಷೆ ಮಾಡಬಹುದು ಹಾಗೂ ಖಾಸಗಿ ನಿವಾಸಿಗಳನ್ನು ಸಂಪರ್ಕಿಸಿ ಖಾಸಗಿ ನಿವಾಸಿ ಬೆಳೆ ಆ್ಯಪ್ ಮೂಲಕವು ಬೆಳೆ ಸಮೀಕ್ಷೆಯನ್ನು ಮಾಡಿಸಬಹುದು ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಮಂಜುನಾಥ ಅಂತರವಳ್ಳಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಫೆ.3 ಮತ್ತು ಫೆ. 4 ರಂದು ಕ್ರೀಡಾಶಾಲೆ, ಕ್ರೀಡಾ ನಿಲಯಗಳ ವಿದ್ಯಾರ್ಥಿಗಳಿಗೆ ವಿಭಾಗ ಮಟ್ಟದ ಆಯ್ಕೆ ಪ್ರಕ್ರಿಯೆ

ಧಾರವಾಡ :2025–26 ನೇ ಸಾಲಿಗೆ ಕ್ರೀಡಾಶಾಲೆ, ಕ್ರೀಡಾ ನಿಲಯಗಳ ಅಭ್ಯರ್ಥಿಗಳಿಗೆ ವಿಭಾಗ ಮಟ್ಟದಲ್ಲಿ ಕಿರಿಯರ ವಿಭಾಗ ಆಯ್ಕೆ ಪ್ರಕ್ರಿಯೆಯನ್ನು ಫೆಬ್ರುವರಿ 03, 2025 ರಂದು ಹಾಗೂ ಹಿರಿಯರ ವಿಭಾಗದಲ್ಲಿ ಫೆಬ್ರುವರಿ 04, 2025 ರಂದು ನಡೆಸಲು ನಿರ್ಧರಿಸಲಾಗಿದೆ.

ಅಭ್ಯರ್ಥಿಗಳನ್ನು ವಿಭಾಗ ಮಟ್ಟದ ಆಯ್ಕೆ ಪ್ರಕ್ರಿಯೆಗಾಗಿ ತಾಲ್ಲೂಕು, ಜಿಲ್ಲಾ ಮಟ್ಟದ ಆಯ್ಕೆ ಪ್ರಕ್ರಿಯೆಗೆ ಇಲಾಖೆಯ ತರಬೇತುದಾರರಿಗೆ ಕಾರ್ಯ ಹಂಚಿಕೆಯನ್ನು ಮಾಡಲಾಗಿದ್ದು, ತರಬೇತುದಾರರು ಕಾರ್ಯ ಹಂಚಿಕೆಯಂತೆ ಕಾರ್ಯನಿರ್ವಹಿಸಿ, ಆಯ್ಕೆ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಸಂಘಟಿಸಲಿದ್ದಾರೆ.

ತಾಲ್ಲೂಕು ಮಟ್ಟದ ಆಯ್ಕೆ ಪ್ರಕ್ರಿಯೆ: ಜನವರಿ 16 ರಂದು ಬೆಳಿಗ್ಗ 9 ಗಂಟೆಗೆ ಧಾರವಾಡ ಆರ್.ಎನ್.ಶೆಟ್ಟಿ ಜಿಲ್ಲಾ ಕ್ರೀಡಾಂಗಣದಲ್ಲಿ ಅಥ್ಲೇಟಿಕ್ಸ್ ತರಬೇತುದಾರ ಶ್ಯಾಮಲಾ ಪಾಟೀಲ (9845868491), ಜನವರಿ 18 ರಂದು ಬೆಳಿಗ್ಗ 9 ಗಂಟೆಗೆ ನವಲಗುಂದ ತಾಲೂಕಿನ ಮೊರಬ ಗ್ರಾಮದ ಎಮ್.ಸಿ.ಎಸ್ ಪ್ರಾಥಮಿಕ ಶಾಲೆಯಲ್ಲಿ ಬಾಸ್ಕೆಟ್ ಬಾಲ್ ತರಬೇತುದಾರ ಪಿ ಕೆ ಹಾಸನ್ (8147818658), ಜನವರಿ 18 ರಂದು ಬೆಳಿಗ್ಗ 9 ಗಂಟೆಗೆ ಕಲಘಟಗಿ ತಾಲೂಕಿನ ಶಿವರಾಜ ದೇವಿ, ಗಳಗಿಹುಲಕೊಪ್ಪದ ಸಂಯುಕ್ತ ಪದವಿ ಪೂರ್ವ, ಕಾಲೇಜದಲ್ಲಿ ಅಥ್ಲೇಟಿಕ್ಸ್ ತರಬೇತುದಾರ ಶ್ಯಾಮಲಾ ಪಾಟೀಲ (9845868491), ಜನವರಿ 18 ರಂದು ಬೆಳಿಗ್ಗ 9 ಗಂಟೆಗೆ ಕುಂದಗೋಳ ತಾಲೂಕಿನ ಹುಬ್ಬಳ್ಳಿ ರೋಡ, ಜೆ.ಎಸ್.ಎಸ್ ವಿದ್ಯಾಪೀಠ, ಕುಸ್ತಿ ತರಬೇತುದಾರ ಶಿವಪ್ಪ ಪಾಟೀಲ್, (9535314382), ಜನವರಿ 18 ರಂದು ಬೆಳಿಗ್ಗ 9 ಗಂಟೆಗೆ ಹುಬ್ಬಳ್ಳಿ ತಾಲೂಕಿನ ಸೆಟ್ಲಮೆಂಟ ಹಾಕಿ ಮೈದಾನದಲ್ಲಿ ಹಾಕಿ ತರಬೇತುದಾರ ಚಂದ್ರಶೇಖರ ನಾಯ್ಕರ (9538462597), ಜನವರಿ 20 ರಂದು ಬೆಳಿಗ್ಗ 9 ಗಂಟೆಗೆ ಅಳ್ನಾವರ ತಾಲೂಕಿನ ಸೆಂಟ ತೆರೆಜಾ, ಪ್ರಾಥಮಿಕ ಶಾಲೆ, ಹಾಕಿ ತರಬೇತುದಾರ ಚಂದ್ರಶೇಖರ ನಾಯ್ಕರ (9538462597), ಜನವರಿ 20 ರಂದು ಬೆಳಿಗ್ಗ 9 ಗಂಟೆಗೆ ಅಣ್ಣಿಗೇರಿ ತಾಲೂಕಿನ ಸರ್ಕಾರಿ ಗಂಡು ಮಕ್ಕಳ ಮಾದರಿ ಶಾಲೆಯಲ್ಲಿ ಹಾಕಿ ತರಬೇತುದಾರ ಚಂದ್ರಶೇಖರ ನಾಯ್ಕರ (9538462597).

ಜಿಲ್ಲಾಮಟ್ಟದ ಆಯ್ಕೆ: ಧಾರವಾಡ ಜಿಲ್ಲಾ ಮಟ್ಟ ಆಯ್ಕೆ ಪ್ರಕ್ರಿಯನ್ನು ಜನವರಿ 21 ರಂದು ಬೆಳಿಗ್ಗ 9 ಗಂಟೆಗೆ ಧಾರವಾಡ ಆರ್.ಎನ್.ಶೆಟ್ಟಿ ಜಿಲ್ಲಾ ಕ್ರೀಡಾಂಗಣದಲ್ಲಿ ಸಂಚಾಲಕ ಮುತ್ತಪ್ಪ ಎನ್. ತಮದಡ್ಡಿ (9535330378) ನಡೆಸುವರು.

ಈ ನಿಗದಿತ ದಿನಾಂಕಗಳಂದು ಎಲ್ಲಾ ತರಬೇತುದಾರರು ಬೆಳಿಗ್ಗ 9 ಗಂಟೆಗೆ ಆಯ್ಕೆ ಪ್ರಕ್ರಿಯೆ ನಡೆಯುವ ಸ್ಥಳಗಳಲ್ಲಿ ಹಾಜರಿರಲು ಸೂಚಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 0836–2447424 ಗೆ ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅರ್ಜಿ ಆಹ್ವಾನ

ಧಾರವಾಡ : 2024–25 ನೇ ಸಾಲಿನಲ್ಲಿ ತರಕಾರಿ ಬೆಳೆಗಳ ಉತ್ಕೃಷ್ಟ ಕೇಂದ್ರ, ಕುಂಭಾಪೂರ ಫಾರ್ಮ ಆವರಣದಲ್ಲಿ ಮೈಸೂರು ಕಿಸಾನ್ ಮಾಲ್ ಸ್ಥಾಪಿಸಲು ಅರ್ಹ ರೈತ ಉತ್ಪಾದಕರ ಸಂಸ್ಥೆಯಿಂದ ಆಸಕ್ತಿ ವ್ಯಕ್ತಪಡಿಸುವಿಕೆಗೆ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ರೈತ ಉತ್ಪಾದಕರ ಸಂಸ್ಥೆಗಳು, ಜನವರಿ 27, 2025 ರೊಳಗಾಗಿ ಕರ್ನಾಟಕ ಪಬ್ಲಿಕ್ ಪ್ರೊಕ್ಯುರ್‌ಮೆಂಟ ಪ್ರೋರ್ಟಲ್‌ನಲ್ಲಿ ಆಸಕ್ತಿ ವ್ಯಕ್ತಪಡಿಸುವಿಕೆಯ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂಖ್ಯೆ: 9448999237 ಗೆ ಸಂಪರ್ಕಿಸಬಹುದು ಎಂದು ತರಕಾರಿ ಬೆಳೆಗಳ ಉತ್ಕೃಷ್ಟ ಕೇಂದ್ರದ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜ.18 ರಂದು 6 ನೇ ತರಗತಿ ಪ್ರವೇಶ ಪರೀಕ್ಷೆ

ಕಾರವಾರ: ಜವಾಹರ ನವೋದಯ ವಿದ್ಯಾಲಯ ಸಮಿತಿ ಸಡೆಸುವ 2025–26 ನೇ ಸಾಲಿನ 6ನೇ ತರಗತಿ ಪ್ರವೇಶಕ್ಕಾಗಿ ಜ.18 ಬೆಳಗ್ಗೆ 11.30 ರಿಂದ 1.30ವರೆಗೆ ಪರೀಕ್ಷೆ ನಡೆಯಲಿದೆ.

ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಪ್ರವೇಶ ಪತ್ರಗಳನ್ನು ವೆಬ್‌ಸೈಟ್: navodaya.gov.in ಮೂಲಕ ಪಡೆಯಬಹುದು. ಎಲ್ಲಾ ವಿದ್ಯಾರ್ಥಿಗಳು ಮತ್ತು ಪೋಷಕರು ಪ್ರವೇಶ ಪತ್ರದಲ್ಲಿ ನಮೂದಿಸಿರುವ ಸೂಚನೆಗಳನ್ನು ಅನುಸರಿಸುವಂತೆ ಜಹಾಹರ ನವೋದಯ ವಿದ್ಯಾಲಯದ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಳಿಸಿದ್ದಾರೆ.

# ಶರಣರ ವಚನಗಳು ಯುವಜನಾಂಗಕ್ಕೆ ಮಾರ್ಗದರ್ಶಿಯಾಗಿವೆ



ಬಸವನಬಾಗೇವಾಡಿ, :ಮಕ್ಕಳ, ಯುವಜನಾಂಗದ ಮನಸ್ಸನ್ನು ವಿಕಸನಗೊಳಿಸುವ ಮೂಲಕ ಮಾನವೀಯ ಮೌಲ್ಯಗಳನ್ನು ಬೆಳೆಸುವಲ್ಲಿ 12 ನೇ ಶತಮಾನದ ಬಸವಾದಿ ಶರಣರು ರಚಿಸಿದ ವಚನಗಳು ಮಾರ್ಗದರ್ಶಿಯಾಗಿವೆ ಎಂದು ನರಸಲಗಿಯ ಎಸ್.ಡಿ.ಎಸ್.ಬಿ.ಸಂಂ–ಯುಕ್ತ ಪಪೂ ಕಾಲೇಜಿನ ಪ್ರಾಚಾರ್ಯ ಎ.ಎಂ.ನರಸರಡ್ಡಿ ಹೇಳಿದರು.

ತಾಲೂಕಿನ ನರಲಸಗಿ ಗ್ರಾಮದ ಎಂ.ಡಿ.ಎಸ್.ಬಿ. ಸಂಯುಕ್ತ ಪಪೂ ಕಾಲೇಜಿನಲ್ಲಿ ತಾಲೂಕು ಶರಣ ಸಾಹಿತ್ಯ ಪರಿಷತ್ತು ಲಿಂ.ಸಿದ್ರಾಮಪ್ಪ ನಾಗಪ್ಪ ಕನ್ನೂರ, ಲಿಂ. ಸೋಮಪ್ಪ ಶಿವಪ್ಪ ಹೆಬ್ಬಾಳ, ಲಿಂ.ಮನೋಹರ ತವನಪ್ಪ ದಂಡಾವತಿ ಸ್ಮರಣಾರ್ಥ ಶನಿವಾರ ಹಮ್ಮಿಕೊಂಡಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶರಣರು ರಚಿಸಿರುವ ವಚನಗಳ ಅರ್ಥಅರಿತುಕೊಂಡು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ನಮ್ಮ ಜೀವನವನ್ನು ಪಾವನಗೊಳಿಸಬೇಕಿದೆ.ನಾಡಿನಲ್ಲಿ ಶರಣ ಸಾಹಿತ್ಯ ಪರಿಷತ್ತು ಶರಣರ ಸಾಹಿತ್ಯವನ್ನು ಪ್ರಸರಣ ಮಾಡುವಲ್ಲಿ ತನ್ನ ಕಾರ್ಯ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಡಾ.ಫ.ಗು.ಹಳಕಟ್ಟಿ ಕುರಿತು ಅರುಂಧತಿ ಹತ್ತಿಕಾಳ ಮಾತನಾಡಿ, ಫ.ಗು.ಹಳಕಟ್ಟಿ ಅವರು ವಚನಗಳ ಸಂಗ್ರಹಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಡುವ ಮೂಲಕ ವಚನಗಳ ಸಂಗ್ರಹ ಮಾಡಿ ಅವುಗಳ ಸಂರಕ್ಷಣೆ ಮಾಡುವಲ್ಲಿ ಬಹುಮುಖ್ಯ ಪಾತ್ರ ವಹಿಸಿದ್ದಾರೆ. ಅದಕ್ಕಾಗಿ ಇವರನ್ನು ವಚನ ಗುಮ್ಮಟ ಎಂದು ಕರೆಯಲಾಗಿದೆ. ಅವರು ಸ್ವಂತಕ್ಕಾಗಿ ಬದುಕು ಸಾಗಿಸದೇ ಸಮಾಜಕ್ಕಾಗಿ ಬಾಳಿ ಬದುಕಿದರು. ಅದಕ್ಕಾಗಿ ಇಂದಿಗೂ ಅವರು ಚಿರಸ್ಮರಣೀಯರಾಗಿದ್ದಾರೆ ಎಂದರು.

12 ನೇ ಶತಮಾನದ ವಚನಕಾರ್ತಿಯರ ಕುರಿತು ಡಾ.ವೀಣಾ ಗುಳೇದಗುಡ್ಡ ಮಾತನಾಡಿ, ಜಾತಿ,ಮತ ಎಣಿಸದೇ ಎಲ್ಲ ಜನಾಂಗದ ಶರಣೆಯರು 12 ನೇ ಶತಮಾನದಲ್ಲಿ ವಚನಗಳನ್ನು ರಚಿಸಿದ್ದಾರೆ. 36 ವಚನಕಾರ್ತಿಯರು ಇದ್ದರು. ಆಯ್ದಕ್ಕಿ ಲಕ್ಕಮ್ಮ, ದುಗ್ಗವ್ವೆ, ಸೂಳೆಸಂಕವ್ವೆ, ಕಸಗೂಡಿಸುವ ಸತ್ಯಕ್ಕ ಸೇರಿದಂತೆ ಅನೇಕ ಶರಣೆಯರು ಸಮಾಜಕ್ಕಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು ಎಂದರು.

ಅಧ್ಯಕ್ಷತೆ ವಹಿಸಿದ್ದ ತಾಲೂಕು ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವೀರಣ್ಣ ಮರ್ತೂರ, ಮುಖಂಡ ಶ್ರೀಶೈಲಗೌಡ ಹೊಸಳ್ಳಿ ಮಾತನಾಡಿದರು.

ವೇದಿಕೆಯಲ್ಲಿ ಎಸ್.ಎಸ್.ಝುಳಕಿ, ಎಚ್.ಎಸ್.ಬಿರಾದಾರ, ಪ್ರೊ.ಪಿ.ಎಲ್.ಹಿರೇಮಠ, ವಿವೇಕಾನಂದ ಕಲ್ಯಾಣಶೆಟ್ಟಿ, ಶರಣು ಬಸ್ತಾಳ, ಎಸ್.ಐ.ಮನಗೂಳಿ, ಸಾವಿತ್ರಿ ಕಲ್ಯಾಣಶೆಟ್ಟಿ, ಅಪ್ಪು ದಂಡಾವತಿ, ದೇವೇಂದ್ರ ಗೋನಾಳ ಇತರರು ಇದ್ದರು. ಡಾ.ಅರ್ಜುನ ಉಳ್ಳಾಗಡ್ಡಿ ಸ್ವಾಗತಿಸಿದರು. ಆರ್.ಜಿ.ಅಳ್ಳಗಿ ಪ್ರಾಸ್ತವಿಕವಾಗಿ ಮಾತನಾಡಿದರು. ಸುಶ್ಮಿತಾ ಓದಿ ನಿರೂಪಿಸಿದರು. ಎಂ.ಸಿ.ಜಡಿಮಠ ವಂದಿಸಿದರು.

# ಅಂತರಾಷ್ಟ್ರೀಯ ಮಾನವ ಹಕ್ಕುಗಳ ದಿನಾಚರಣೆ ಆಚರಣೆ




ಗೋಕಾಕ್: ನಗರದಲ್ಲಿ ಇಂದು ಬ್ರಷ್ಟಾಚಾರ ನಿರ್ಮೂಲನೆ ಮತ್ತು ಮಾನವ ಹಕ್ಕುಗಳ ರಕ್ಷಣಾ ಫ್ರಂಟ್ ಹಾಗೂ ಕರುನಾಡ ಕೇಸರಿ ಪತ್ರಿಕೆ ಸಹಭಾಗಿತ್ವದಲ್ಲಿ ಅಂತರಾಷ್ಟ್ರೀಯ ಮಾನವ ಹಕ್ಕುಗಳ ದಿನಾಚರಣೆಯನ್ನು ಆಚರಿಸಲಾಯಿತು ನಗರದ ಬಸವೇಶ್ವರ ಸರ್ಕಲ್ ದಲ್ಲಿ ಬಸವೇಶ್ವರ ಮೂರ್ತಿಗೆ ಮಾಲಾರ್ಪಣೆ ಮಾಡಿ ಅಲ್ಲಿಂದ ಮುಂದೆ ರ್‍ಯಾಲಿ ಮಾಡಿ ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಸಮುದಾಯ ಭವನದಲ್ಲಿ ಕಾರ್ಯಗಾರವನ್ನ ಹಮ್ಮಿಕೊಳ್ಳಲಾಯಿತು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಶ್ರೀ ಪ್ರಕಾಶ್ ಮುರಾರಿ ಅಧ್ಯಕ್ಷರು ನಗರಸಭೆ ಗೋಕಾಕ್ ಮುಖ್ಯ ಅತಿಥಿಗಳಾಗಿ ಶ್ರೀ ರಮೇಶ್ ಜಾರಕಿಹೊಳಿ ಶಾಸಕರು ಗೋಕಾಕ್ ಶ್ರೀ ಬಾಲಚಂದ್ರ ಜಾರಕಿಹೊಳಿ ಅರಭಾವಿ ಕ್ಷೇತ್ರ ಶ್ರೀ ಡಾ. ಮಹಾಂತೇಶ್ ಕಡಾಡಿ ಯುವಧುರೀಣ–ರು ಗೋಕಾಕ್ ಶ್ರೀ ಎಸ್ ಬಿ ಕುಮಾರ್ ರಾಜ್ಯಾಧ್ಯಕ್ಷರು ಎಸಿಎಚ್‌ಆರ್ ಎಫ್ ಮುಖ್ಯ ವಕ್ತಾರರು ಶ್ರೀ ಗುರುರಾಜ್ ನಿಡೋನಿ ಪ್ರಾಚಾರ್ಯರು ಎಲ್ ಈ ಟಿ ಕಾನೂನು ಮಹಾವಿದ್ಯಾಲಯ ಗೋಕಾಕ್ ಅತಿಥಿಗಳಾಗಿ ಆಗಮಿಸಿದ ಶ್ರೀ ಸುಭಾಷ್ ಪಾಟೀಲ್ ಅಧ್ಯಕ್ಷರು ವಕೀಲರ ಸಂಘ ಗೋಕಾಕ್ ಅಣ್ಣಪ್ಪ ಕಂಟ್ರಟ್ಟಿ ವಕೀಲ ಸಂಘದ ಖಜಾಂಚಿ ಶ್ರೀಮತಿ ರಜನಿ ಜೀರಗ್ಯಾಳ ಸಿರಿಗನ್ನಡಂ ಮಹಿಳಾ ವೇದಿಕೆ ರಾಜ್ಯಾದ್ಯಕ್ಷರು ಶ್ರೀಮತಿ ಲಕ್ಷ್ಮಿ ಪಾಟೀಲ್ ಅಧ್ಯಕ್ಷರು ಕನ್ನಡ ಒಕ್ಕೂಟ ಗೋಕಾಕ್ ಹಾಗೂ ಜಗದೀಶ್ ಮಂಡಿ ಉತ್ತರ ಕರ್ನಾಟಕ ಅಧ್ಯಕ್ಷರು ಎಸಿ ಎಚ್ ಆರ್ ಎಫ್ ಕನ್ನಡ ಪರ ಸಂಘಟನಕಾರರು ಅಧ್ಯಕ್ಷರು ಸೇರಿ ಬಂದಿದ್ದರು ಕಾರ್ಯಕ್ರಮದಲ್ಲಿ ಶ್ರೀ ಗುರುರಾಜ್ ನಿಡೋಣಿಯವರು ಕಾನೂನಿನ ಬಗ್ಗೆ ಸಂಪೂರ್ಣ ಸಂವಿಧಾನದ ವಿವರಣೆ 73ನೇ ಕಲಂ ಯಾವ ರೀತಿ ಹೇಳುತ್ತದೆ ಜನ ಸಾಮಾನ್ಯರಿಗೆ ಮಾನವ ಹಕ್ಕುಗಳ ಏನು ಹೇಗೆ ಎನ್ನುವ ಬಗ್ಗೆ ಸಂಪೂರ್ಣವಾದ ವಿವರಣೆಯೊಂದಿಗೆ ಮಾತನಾಡಿದರು ಹಾಗೂ ಜೊತೆಗೆ ವಕೀಲರ ಸಂಘದ ಅಧ್ಯಕ್ಷರಾಗಿರುವ ಶ್ರೀ ಸುಭಾಷ್ ಪಾಟೀಲ್ ಅವರು ಕೂಡ ಸವಿಸ್ತಾರವಾಗಿ ಜನಸಾಮಾನ್ಯರಿಗೆ ಮಾನವ ಹಕ್ಕುಗಳು ಎಲ್ಲಿ ಉಲ್ಲಂಘನೆ ಆಗ್ತಾ ಇವೆ ಅವುಗಳನ್ನು ಯಾವ ರೀತಿ ಬೇಕು ಒಂದು ಸಂಘಟನೆಗಳು ಇವತ್ತಿನ ದಿನಗಳಲ್ಲಿ ಬಹು ಮುಖ್ಯವಾಗಿ ಕಾರ್ಯ ಮಾಡ್ತಾ ಇರುವಂತ ಬಗ್ಗೆ ದಾಗನಿಯವಾಗಿದೆ ಎಂಬುದಾಗಿ ಕೂಡ ಅವರು ಮಾತನಾಡಿದರು ಸವಿಸ್ತಾರವಾಗಿ ಕಾನೂನಿನ ನಲ್ಲಿ ಯಾವ ರೀತಿ ಮಾನವ ಹಕ್ಕುಗಳ ಯೋಜನೆಯನ್ನು ಡಾಕ್ಟರ್ ಅಂಬೇಡ್ಕರ್ ಅವರು 1948 ರಲ್ಲಿ ಕೊಡುಗೆ ಕೊಟ್ಟರು ಹಕ್ಕುಗಳು ಏನೆಂಬುದನ್ನ ಸಂಪೂರ್ಣ ಮಾಹಿತಿಯೊಂದಿಗೆ ಸಂವಿಧಾನದಲ್ಲಿ ಉಲ್ಲೇಖವಾಗಿದೆ ಎಂಬುದನ್ನು ಕೂಡ ಮಾರ್ಮಿಕವಾಗಿ ಮಾತನಾಡಿದರು ಕಾರ್ಯಕ್ರಮವನ್ನು ಶ್ರೀ ರಾಮಚಂದ್ರ ಕಾಕಡೆ ಗೋಕಾಕ್ ತಾಲೂಕ ಅಧ್ಯಕ್ಷರು ಎ ಸಿ ಹೆಚ್ ಆರ್ ಎಫ್ ಕಾರ್ಯಕ್ರಮವನ್ನು ನಿರೂಪಿಸಿದರು–ಅಂಬೇಡ್ಕರ್ ವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡುವುದರ ಮೂಲಕವಾಗಿ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು

ಶ್ರೀ ಜಗದೀಶ್ ಮಂಡಿಂ–ಯವರು ಹಾಗೂ ಇನ್ನೋರ್ವ ಎಸಿ–ಎಚ್‌ಆರ್ ಆಫ್ ಪದಾಧಿಕಾ–ರಿಯಾಗಿರುವ ಶ್ರೀ ಸಂಜೀವ್ ಚಿಂಚಲಿ ಅವರು ಅತಿಥಿಗಳನ್ನು ಶಾಲ್ ಹಾಗೂ ಮಾಲೆ ಹಾಕುವುದರ ಮೂಲಕ ಸತ್ಕ–ರಿಸಲಾಯಿತು ಕನ್ನಡ ಪರ ಸಂಘಟನೆಯ ಅಧ್ಯಕ್ಷರಾಗಿರುವ ಶ್ರೀ ಪವನ್ ಎಂ ಅವರು ವಂದನಾರ್ಪಣೆಯೊಂದಿಗೆ ಕಾರ್ಯಕ್ರಮವನ್ನು ಅಂತ್ಯಗೊಳಿಸಲಾಯಿತು

*********

## ಜುಗೂಳದಲ್ಲಿ ಸಿದ್ದೇಶ್ವರ ಶ್ರೀಗಳಿಗೆ ಗುರುನಮನ

## ಗ್ರಾಮಸ್ಥರ ಕಣಕಣದಲ್ಲಿಯೂ ಶ್ರೀಗಳು ನೆಲಿಸಿದ್ದಾರೆ: ಬಸವಲಿಂಗ ಶ್ರೀಗಳ ಅಭಿಮತ..!



ಮೋಳೆ ;–ಕಾಗವಾಡ ತಾಲೀಕಿನ ಜುಗೂಳ ಗ್ರಾಮಸ್ಥರ ಭಕ್ತಿಯಿಂದಾಗಿ ವೇದಾಂತ ಕೇಸರಿ ಮಲ್ಲಿಕಾರ್ಜುನ ಮಹಾಸ್ವಾಮಿಗಳು, ಜುಗೂಳ ಗ್ರಾಮ ನನ್ನ ತವರೂರು ಎಂದು ಬಣ್ಣಿಸಿದ್ದರು. ಅದರಂತೆ ಅವರ ಶಿಷ್ಯರಾದ ಪಪೂ ಸಿದ್ದೇಶ್ವರ ಶ್ರೀಗಳು ಸಹ ಈ ಗ್ರಾಮದೊಂದಿಗೆ ಅವಿನಾವಭಾವ ಸಂಬಂಧ ಹೊಂದಿದ್ದರು. ಇಲ್ಲಿಯ ಗ್ರಾಮಸ್ಥರ ಕಣಕಣದಲ್ಲಿಯೂ ಸಿದ್ದೇಶ್ವರ ಶ್ರೀಗಳು ನೆಲೆಸಿದ್ದಾರೆಂದು ವಿಜಯಪೂರ ಜ್ಞಾನಯೋಗಾಶ್ರಮದ ಪಪೂ ಬಸವಲಿಂಗ ಶ್ರೀಗಳು ಹೇಳಿದ್ದಾರೆ.

ಅವರು, ವೈಕುಂಠ ಏಕಾದಶಿಯ ಶುಕ್ರವಾರ ದಿ. 10 ರಂದು ಕಾಗವಾಡ ತಾಲೂಕಿನ ಜುಗೂಳ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಸಿದ್ದೇಶ್ವರ ಶ್ರೀಗಳ 2ನೇ ವರ್ಷದ ಗುರುನಮನ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ, ಮಾತನಾಡುತ್ತಿದ್ದರು. ಕಾರ್ಯಕ್ರಮದಲ್ಲಿ ಪರಮಾನಂದವಾಡಿಯ ಪಪೂ ಶ್ರೀ ಡಾ. ಅಭಿನವ ಬ್ರಹ್ಮಾನಂದ ಶ್ರೀಗಳು, ಭೋಜದ ಪಪೂ ಶ್ರೀ ಮಲ್ಲಯ್ಯ ಶ್ರೀಗಳು ಮತ್ತು ಉಗಾರ ಗುರುದೇವಾಶ್ರಮದ ಪಪೂ ಶ್ರೀ ಜ್ಞಾನಾನಂದ ಶ್ರೀಗಳು ಸಾನಿಧ್ಯ ವಹಿಸಿ, ಆಶೀರ್ವಚನ ನೀಡಿದರು.

ಬೆಳಿಗ್ಗೆ 9 ಗಂಟೆಗೆ ಅಲಂಕಾ–ರಿಕ ರಥದಲ್ಲಿ ಸಿದ್ದೇಶ್ವರ ಶ್ರೀಗಳ ಭಾವಚಿತ್ರದ ಮೆರವಣಿಗೆಯು ವಿವಿಧ ವಾಧ್ಯ ವೃಂದಗಳೊಂದಿಗೆ, ಕುಂಭ ಹೊತ್ತ ಮಹಿಳೆಯರು, ಗ್ರಾಮಸ್ಥರ ಉಪಸ್ಥಿತಿಯಲ್ಲಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ನಂತರ ಸರ್ಕಾರಿ ಕನ್ನಡ ಗಂಡು ಮಕ್ಕಳ ಶಾಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿದ್ದೇಶ್ವರ ಶ್ರೀಗಳ ಭಾವಚಿತ್ರದ ಪೂಜೆ ನೆರವೇರಿಸಲಾಯಿತು. ಚಿಕ್ಕೋಡಿ ಸಿಬಿಕೆ–ಎಸ್‌ಎಸ್ ಕಾರ್ಖಾನೆಯ ನಿರ್ದೇಶಕರು ಹಾಗೂ ಗ್ರಾಮದ ಮುಖಂಡರಾದ ಅಣ್ಣಾಸಾಹೇಬ ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿದರು. ಇದೇ ಸಮಯದಲ್ಲಿ ಮಹಾಪ್ರಸಾದ ಸೇವೆ ಮಾಡಿದ ವೆಂಕಟರಮನ ಗಾಂವಕರ ಮತ್ತು ಪದ್ಮಾ ಗಾಂವಕರ ದಂಪತಿಗಳನ್ನು ಸನ್ಮಾನಿಸಲಾಯಿತು.

ಈ ಸಮಯದಲ್ಲಿ ತಾತ್ಯಾಸಾಬ ಪಾಟೀಲ, ಅನೀಲ ಕಡೋಲೆ, ರಾಜು ಕಡೋಲಿ, ಸುರೇಶ ಪಾಟೀಲ,ಬಸವರಾಜ ನಂದ್ಯಾಳೆ, ಕಾಕಾಸಾಬ ಪಾಟೀಲ, ಅನೀಲ ಸುಂಕೆ, ಚಿದಾನಂದ ಮಿಣಚೆ, ರವೀಂದ್ರ ವ್ಹಾಂಟೆ, ಭಾಸ್ಕರ ಪಾಟೀಲ, ಉಮೇಶ ಪಾಟೀಲ, ಸೇರಿದಂತೆ ಜುಗೂಳ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರು ಉಪಸ್ಥಿತ–ರಿದ್ದರು. ನಂತರ ಮಹಾಪ್ರಸಾದ ನೆರವೇರಿತು.

# ಶಾಸಕ ವಿಶ್ವಾಸ ವೈದ್ಯ ನೇತೃತ್ವದಲ್ಲಿ ಅದ್ಯಕ್ಷ, ಉಪಾಧ್ಯಕ್ಷ ಆಯ್ಕೆ



ಯರಗಟ್ಟಿ: ಸಮೀಪದ ಮುಗಳಿಹಾಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷರಾಗಿ ಬಸಪ್ಪ ದಳವಾಯಿ, ಉಪಾಧ್ಯಕ್ಷರಾಗಿ ಗೋವಿಂದಪ್ಪ ಮುರಗಟ್ಟಿ ಆಯ್ಕೆಯಾದರು.

ಕಾಂಗ್ರೆಸ್ ಬೆಂಬಲಿತ ಕಾರ್ಯಕರ್ತರು ಅತಿ ವಿಜೃಂಭಣೆಯಿಂದ ಪಟಾಕಿ, ಗುಲಾಲ್ ಹಚ್ಚಿ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಬೆಳಗಾವಿ ಕೆಎಂ–ಎಫ್ ನಿರ್ದೇಶಕರಾದ ಶಂಕರ್ ಇಟ್ನಾಳ್, ಮುಗಳಿಹಾಳ ಕೆಎಂಎಫ್ ಅಧ್ಯಕ್ಷ ಯಮನಪ್ಪ ಹುಲಕುಂದ, ಎಪಿಎಂಸಿ ಸದಸ್ಯರಾದ ಲಕ್ಷ್ಮಣ ದಳವಾಯಿ, ರಾಮಣ್ಣ ದಳವಾಯಿ, ಮುತ್ತು ಅಣ್ಣಿಗೇರಿ, ಗ್ರಾ ಪ. ಮಾಜಿ ಅಧ್ಯಕ್ಷರಾದ ವಿಠ್ಠಲ ದಳವಾಯಿ, ಪಂಚಾಕ್ಷರಿ ಪಟ್ಟಣಶೆಟ್ಟಿ, ಬಸಪ್ಪ ಹಾದಿಮನಿ, ಬಸಪ್ಪ ಅರಭಾವಿ, ಮಾರುತಿ ಅರಭಾವಿ , ಬಸಪ್ಪ ಮಾಯನ್ನಿ, ಗೋಪಾಲ ದಳವಾಯಿ, ನಾಗರಾಜ ದೇಸಾಯಿ, ಬಸವರಾಜ ಪಾರಿವಾಳ, ನಿಂಗಪ್ಪ ದಳವಾಯಿ, ಯಲ್ಲಪ್ಪ ಪೂಜೆರ, ಉದ್ದವ್ವ ಪಾರಿವಾಳ, ಬಸವರಾಜ ಹಸಬಿ, ಯಲ್ಲಪ್ಪ ಬಾವಿಕಟ್ಟಿ, ವಿಠ್ಠಲ ಮಾಲದಿನ್ನಿ, ಭೀಮಪ್ಪ ಕೌಜಲಗಿ , ಮತ್ತಿತರರು ಹಿರಿಯರು, ಯುವಕರು, ಕಾಂಗ್ರೆಸ್ ಕಾರ್ಯಕರ್ತರು ಉಪಸ್ಥಿತರಿದ್ದರು.

****

# ಬಾಲ್ಯದ ಆರೈಕೆ ಮತ್ತು ಶಿಕ್ಷಣ ಅತ್ಯವಶ್ಯಕ



ರಬಕವಿ–ಬನಹಟ್ಟಿ,ಜ11: ಆರಂಭಿಕ ಬಾಲ್ಯವು ಮಗುವಿನ ಜೀವನದ ಮೊದಲ 6 ವರ್ಷಗಳ ಅವಧಿಯನ್ನು ಒಳಗೊಂಡಿರುತ್ತದೆ. ಇದರಲ್ಲಿ ಅವರ ಮೆದುಳು ಅಸಾಧಾರಣ ವೇಗದಲ್ಲಿ ಬೆಳೆಯುತ್ತದೆ. ಮೆದುಳಿಗೆ ಸಿನಾಪ್ಟಿಕ್ ಸಂಪರ್ಕಗಳನ್ನು ಮಗುವು ತನ್ನ ಪರಿಸರದಿಂದ ಸೆಳೆಯುವ ಅನುಭವಗಳಿಂದ ಮಾಡಲ್ಪಟ್ಟಿದೆ ಎಂದು ಎಸ್.ಎಸ್. ಚೆನ್ನಿ ತಿಳಿಸಿದರು.

ಸಮೀಪದ ಆಸಂಗಿ ಗ್ರಾಮದ ಶ್ರೀ ವೇಣುಗೋಪಾಲ ದೇವಸ್ಥಾನದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗು ಅಜೀಂ ಪ್ರೇಮಜಿ ಫೌಂಡೇಶನ್‌ನಿಂದ ಜರುಗಿದ ಅಂಗನವಾಡಿ ಕಾರ್ಯಕರ್ತರೆಯರು ಹಾಗು ಸಹಾಯಕಿರಿಗೆ ಇಸಿಸಿಇ ಮಾಹಿತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಬಾಲ್ಯದ ಅವಧಿಯಲ್ಲಿ ಮೆದುಳಿನ ಬೆಳವಣಿಗೆಯಲ್ಲಿ ನಿರ್ಣಾಯಕ ಹಂತಗಳಿವೆ ಎಂದು ನಿರ್ಣಾಯಕ ಪುರಾವೆಗಳಿವೆ. ಇಸಿಸಿಇ ಯೋಜನೆಯಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯ ಮತ್ತು ನಡವಳಿಕೆಯ ಮಾರ್ಗಗಳ ಮೇಲೆ ಪ್ರಭಾವ ಬೀರುತ್ತದೆ ಎಂದರು.

ವೇದಿಕೆ ಮೇಲೆ ಎ.ಆರ್. ಕರಿಗಾರ, ಗ್ರಾಪಂ ಅಧ್ಯಕ್ಷೆ ಪುಷ್ಪಾ ರಾವಳ, ರವಿ ಫಕೀರಪುರ, ಚಂದ್ರು ಭಜಂತ್ರಿ, ಸುನಂದಾ ಸಿಂಧೆ, ತುಳಜಾಬಾಯಿ ಪಾಟೀಲ, ಶಿವಕ್ಕ ಕಾಂಬಳೆ, ಹಣಮಂತರಾಯ ನಾಯಕ, ಅಶೋಕ ಸಣ್ಣಕ್ಕಿ, ಇಂದ್ರವ್ವಾ ಸಿಂಧೆ ಉಪಸ್ಥಿತರಿದ್ದರು.

ಆರ್.ಬಿ. ಕುಂಬಾರ, ಎಸ್.ಬಿ. ಹಡಪದ, ಎಸ್.ಬಿ. ಮಗದುಮ್, ಶ್ರೀಶೈಲ ದಾವಲಟ್ಟಿ ಸೇ–ರಿದಂತೆ ಅನೇಕರಿದ್ದರು.

# ಸಂಕ್ರಮಣ ಮೆರುಗಾದ ಶಾಲಾ ಆವರಣ




ರಬಕವಿ–ಬನಹಟ್ಟಿ,ಜ11: ಹೊಸೂರಿನ ಪದ್ಮಾವತಿ ಅಂತರಾಷ್ಟ್ರೀಯ ಶಾಲಾ ಆವರಣದಲ್ಲಿ ಮಕ್ಕಳಿಂದ ಅಹಾರ ತಯಾರಿಕೆಯೊಂದಿಗೆ ಸಂಕ್ರಮಣದ ಸುಗ್ಗಿ ಚಕ್ಕಡಿ, ಗುಡಿಸಲು ಸೇರಿದಂತೆ ಸಜ್ಜಿ ರೊಟ್ಟಿ, ತರಹೆವಾರಿ ಪಲ್ಯ, ಹಿಂಡಿ, ಮೊಸರು ಹೀಗೆ ಹಲವಾರು ಬಗೆಯ ಸವಿ ಭೋಜನ ಸವಿಯುವಲ್ಲಿ ಮನೆಯಿಂದಲೇ ಮಾಡಿಕೊಂಡು ಬಂದಿದ್ದ ಮಕ್ಕಳೆಲ್ಲರೂ ಸೇರಿ ಶಾಲಾ ಆವರಣದಲ್ಲಿದ್ದ ಚಕ್ಕಡಿ, ಗುಡಿಸಲು ಸೇ–ರಿದಂತೆ ಉತ್ತರ ಕರ್ನಾಟಕದ ಗ್ರಾಮೀಣ ಹಬ್ಬವಾದ ಸಂಕ್ರಮಣ ಆಚರಣೆಯು ವಿಶೇಷ ಮೆರಗು ನೀಡುವಲ್ಲಿ ಕಾರಣವಾಯಿತು.

ಇದೇ ಸಂದರ್ಭ ಸಂಸ್ಥೆ ಚೇರಮನ್ ಸತೀಷ ಹಜಾರೆ ಮಾತನಾಡಿ, ಮಕ್ಕಳಿಗೆ ಪಠ್ಯದ ಜೊತೆಗೆ ಸಾಂಸ್ಕೃತಿಕ ಚಟುವಟಿಕೆ ಹಾಗು ಲೋಕಜ್ಞಾನದ ಬಗ್ಗೆ ಅರಿವಿನ ಜಾಗೃತಿ ಮೂಡಿಸಿ ಮುನ್ನಡೆದು ಸಾಧನೆ ಮಾಡಲು ಮಕ್ಕಳಿಗೆ ಪ್ರೇರಕ ಶಕ್ತಿಯಾಗಿರುವ ಈ ಕಾರ್ಯಕ್ರಮದಲ್ಲಿ ಮಕ್ಕಳು ಸಂಭ್ರಮದಿಂದ ಭಾಗವಹಿಸಿದ್ದಾರೆ. ಮಕ್ಕಳು ತಾವು ತಂದಿದ್ದ ತಿಂಡಿ–ತಿನಿಸುಗಳು, ಕಾಯಿಪಲ್ಯೆ, ತರಕಾರಿ ವಸ್ತುಗಳನ್ನು ಸಂಕ್ರಮಣದ ನೈಜ ಹಬ್ಬದಂತೆ ಎಲ್ಲರೂ ಸೇರಿ ನೂರಾರು ವಿಧದ ಆಹಾರ ಪದಾರ್ಥಗಳನ್ನು ಹಂಚಿಕೊಂಡು ತಿಂದು ಆಚರಣೆ ಮಾಡಿರುವದೇ ಒಂದು ಸೊಬಗಾಗಿದೆ ಎಂದರು.

ಬಿ.ಡಿ. ನೇಮಗೌಡ ಆಹಾರ ಮೇಳ ಕಾರ್ಯಕ್ರಮ ಉದ್ಘಾಟಿಸಿದರು. ಬಸವರಾಜ ಕಲಾದಗಿ, ಭಾರತಿ ತಾಳಿಕೋಟಿ ಸೇರಿದಂತೆ ಅನೇಕರಿದ್ದರು.

# ಕೇಂದ್ರ ಕಾರಾಗೃಹದಲ್ಲಿ ಯೋಗ ತರಬೇತಿ ಶಿಬಿರ



ಬೆಳಗಾವಿ; ಕೇಂದ್ರ ಕಾರಾಗೃಹ ಬೆಳಗಾವಿಯಲ್ಲಿ ಕಾರಾಗೃಹ ಅಧಿಕಾರಿ/ಸಿಬ್ಬಂದಿಗಳಿಗೆ ಹಾಗೂ ನಿವಾಸಿಗಳಗೆ ಯೋಗ ತರಬೇತಿ ಶೀಬಿರದ ಉದ್ಘಾಟನಾ ಕಾರ್ಯಕ್ರಮ ಜರುಗಿತು. ಸದರಿ ಕಾರ್ಯಕ್ರಮವು ಜಿಲ್ಲಾ ಆಯುಷ್ಯ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಕೇಂದ್ರ ಕಾರಾಗೃಹ ಬೆಳಗಾವಿ ಇವರುಗಳ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟಕರಾಗಿ ಜಿಲ್ಲಾ ಆಯುಷ್ಯ ಆರೋಗ್ಯಾಧಿಕಾರಿಗಳಾದ ಡಾ॥ ಶ್ರೀಕಾಂತ ಸುಣದೋಳಿ ಆಗಮಿಸಿದ್ದರು. ಮುಖ್ಯ ಅತಿಥಿಗಳಾಗಿ ಯೋಗ ಉಪನ್ಯಾಸಕರು ಹಾಗೂ ಚಿಕಿತ್ಸಕರಾದ ಡಾ॥ ಆರತಿ ಪಡಸಲಗಿ ಆಗಮಿಸಿದ್ದರು, ಅಧ್ಯಕ್ಷತೆಯನ್ನು ಕಾರಾಗೃಹದ ಅಧೀಕ್ಷಕರಾದ ವಿ.ಕೃಷ್ಣಮೂರ್ತಿ ವಹಿಸಿದ್ದರು, ಹಾಗೂ ಕಾರಾಗೃಹದ ಸಹಾಯಕ ಅಧೀಕ್ಷರಾದ ಮಲ್ಲಿಕಾರ್ಜುನ ಕೊಣ್ಣುರ ಹಾಗೂ ಮನೋವೈದ್ಯೆ ಡಾ॥ ಸರಸ್ವತಿ ತೆನಗಿ ಉಪಸ್ಥಿತರಿದ್ದರು.

ಕಾರ್ಯಕ್ರಮ ಉದ್ಘಾಟಿಸಿ ಶ್ರೀಕಾಂತ ಸುಣದೋಳಿ ಮಾತನಾಡಿ ಯೋಗವು ಪ್ರಾಚೀನ ಕಾಲದಿಂದಲೂ ಋಷಿಮುನಿಗಳು ನೀಡಿದ ಅತ್ಯಮೂಲ್ಯ ಕೊಡುಗೆ ಆಗಿದೆ. ಹಾಗೂ ಅವರ ಧೀರ್ಘಾಯುಷ್ಯದ ಗುಟ್ಟು ಅಂ–ದರೆ ಯೋಗ, ಯೋಗದ ಉಪಯೋಗವು ಅನೇಕ ಸಂಶೋದನೆಗಳಿಂದ ದೃಢೀಕರಣಗೊಂಡಿದೆ. ಹಾಗೂ ಯೋಗವು ಮನುಷ್ಯರನ್ನು ಮಾನಸಿಕವಾಗಿ, ದೈಹಿಕವಾಗಿ ಹಾಗೂ ಆಧ್ಯಾತ್ಮೀಕವಾಗಿ ಸದೃಢಗೊಳಿಸುತ್ತಿದೆ. ಒಟ್ಟಿನಲ್ಲಿ ಯೋಗವು ಸರ್ವ ರೋಗಕ್ಕೂ ರಾಮಬಾಣವಿದ್ದಂತೆ ಎಂದು ಹೇಳಿದರು. ಹಾಗೂ ಪ್ರತಿಯೊಬ್ಬರೂ ಯೋಗ, ಧ್ಯಾನ ಹಾಗೂ ಪ್ರಾಣಾಯಾಮ ನಮ್ಮ ದಿನನಿತ್ಯದ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಹಾಗೂ ನಿವಾಸಿಗಳಾದ ತಾವು ಬಿಡುಗಡೆ ನಂತರ ಸಮಾಜದಲ್ಲಿ ಇತರರಿಗೆ ಹಾಗೂ ಕುಟುಂಬ ವರ್ಗದವರಿಗೆ ಯೋಗದ ಮಹತ್ವ ತಿಳಿಸಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಾರಾಗೃಹದ ಅಧೀಕ್ಷಕರಾದ ವಿ. ಕೃಷ್ಣಮೂರ್ತಿ ಮಾತನಾಡಿ, ಇಂದಿನ ಆಧುನಿಕ ಯುಗದಲ್ಲಿ ಪ್ರತಿಯೋಬ್ಬರು ಒತ್ತಡದಿಂದ ಬಳಲುತ್ತಿದ್ದು ಅನೇಕ ಆರೋಗ್ಯ ಸಮಸ್ಯಗಳನ್ನು ಎದುರಿಸುತ್ತಿದ್ದಾರೆ. ಕಾರಣ ನಾವೆಲ್ಲ ಯೋಗದ ಮೊರೆ ಹೋಗಬೇಕು. ನಾವೆಲ್ಲ ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರುಹೋಗಿ ನಮ್ಮ ಅಮೂಲ್ಯವಾದ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದೇವೆ. ನಮ್ಮ ದೇಶದ ಸಂಸ್ಕೃತಿ ಇಡೀ ಜಗತ್ತಿನಲ್ಲಿ ಅತ್ಯುನ್ನತ ಸಂಸ್ಕೃತಿ ಆಗಿದೆ ಕಾರಣ ಪಾಶ್ಚಿಮಾತ್ಯರು ನಮ್ಮ ಸಂಸ್ಕೃತಿಗೆ ಆಕರ್ಷಿತರಾಗಿ ಯೋಗ, ಧ್ಯಾನ, ಪ್ರಾಣಾಯಾಮವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುತ್ತಿದ್ದಾರೆ. ಕಾರಣ ನಿವಾಸಿಗಳು ಹಾಗೂ ಸಿಬ್ಬಂದಿಯವರು ಈ ಯೋಗ ತರಬೇತಿಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ಯೋಗ ಉಪನ್ಯಾಸಕ ಹಾಗೂ ಚಿಕಿತ್ಸಕರು ಆದ ಶ್ರೀಮತಿ. ಆರತಿ ಪಡಸಲಗಿ ಮಾತನಾಡಿ ದೇಹದ ಎಲ್ಲ ಅವಯವಗಳಿಗೆ ಉತ್ತೇಜನ ನೀಡುವ ಶಕ್ತಿ ಯೋಗಕ್ಕಿದೆ ಎಂದು ಹೇಳಿದರು ಹಾಗೂ ಓಂಕಾರ ಮಂತ್ರದ ಪಠಣೆಯನ್ನು ಪ್ರಾಯೋಗಿಕವಾಗಿ ಮಾಡಿ ಎಲ್ಲರಿಗೂ ಯೋಗದ ಕುರಿತು ಮಾಹಿತಿ ನೀಡಿದರು.

ಕಾರಾಗೃಹದ ಮನೋವೈದ್ಯೆ ಡಾ॥ ಸರಸ್ವತಿ ಅತಿಥಿಗಳ ಪರಿಚಯ ಮಾಡಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರಾಗೃಹದ ಶಿಕ್ಷಕರಾದ ಶ್ರೀ. ಶಶಿಕಾಂತ ಯಾದಗುಡೆ ಕಾರ್ಯಕ್ರಮ ನಿರೂಪಿಸಿ ವಂದಿಸಿದರು. ವೇದಿಕೆಯಲ್ಲಿ ಜೈಲರಗಳಾದ ರಾಜೇಶ ಧರ್ಮಟ್ಟಿ, ಎಫ್.ಟಿ.ದಂಢಯ್ಯನ್ನವರ, ಆರ್.ಬಿ.ಕಾಂಬಳೆ ಅಧಿಕಾರಿಗಳು ಸಿಬ್ಬಂದಿಗಳು ಹಾಗೂ ನಿವಾಸಿಗಳು ಉಪಸ್ಥಿತರಿದ್ದರು.

# ಗಣಕ ಇಜ್ಞಾನ ವಿಭಾಗ ಪ್ರವೇಶ ಅವಧಿ ವಿಸ್ತರಣೆ

ವಿಜಯಪುರ, : ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ ಗಣಕ ವಿಜ್ಞಾನ ವಿಭಾಗದಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕೇಂದ್ರದಲ್ಲಿ ಸರ್ಕಾರ ಕೋಟಾದಡಿ ಖಾಲಿ ಉಳಿದಿರುವ ವಿಜಯಪುರದ ಎಂ.ಸಿಎ ಕೋರ್ಸಿನ ಸೀಟುಗಳ ಭರ್ತಿಗಾಗಿ ವಿಶ್ವವಿದ್ಯಾಲಯದ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ಜನವರಿ 21 ಆಯಾ ಕೇಂದ್ರದಲ್ಲಿ ನಡೆಸಲಾಗುವುದು.

ಅರ್ಹ ಅಭ್ಯರ್ಥಿಗಳು UUCMS ತಂತ್ರಾಂಶದಲ್ಲಿ ಜನವರಿ 10 ರಿಂದ ಜ.18ರ ವರೆಗೆ ಅರ್ಜಿ ಸಲ್ಲಿಸಬಹುದು. ಸಲ್ಲಿಸಿದ ಅರ್ಜಿಯೊಂದಿಗೆ ನಿಗಧಿತ ಶುಲ್ಕ ಭರಿಸಿ, ಧೃಡಿಕೃತ ಅಗತ್ಯ ದಾಖಲೆಗಳನ್ನು ಲಗತ್ತಿಸಿ 20–01–2025 ರ ಸಾಯಂಕಾಲ 5 ಗಂಟೆಯ ಒಳಗಾಗಿ ಸ್ನಾತಕೋತ್ತರ ಕೇಂದ್ರದ ಗಣಕ ವಿಜ್ಞಾನ ವಿಭಾಗದಲ್ಲಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ವಿಶ್ವವಿದ್ಯಾಲಯದ ಜಾಲತಾಣ www.rcub.ac.in ಹಾಗೂ ದೂರವಾಣಿ ಸಂಖ್ಯೆ 0831–2565244ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯು ತಿಳಿಸಿದೆ.

# ತೊಗರಿ ಬೆಳೆ ಬೆಂಬಲ ಬೆಲೆ ಹೆಚ್ಚಳಕ್ಕೆ ಕೃಷ್ಣ ಆದ್ಯ ಆಗ್ರಹ



ವಿಜಂಋಪುರ,10– ತೊಗರಿ ಕಾಳಿಗೆ ಬೆಂಬಲ ಬೆಲೆ ಹೆಚ್ಚಳಕ್ಕೆ ಭಾರತೀಯ ಜನತಾ ಪಕ್ಷದ ಕೇಂದ್ರ ಸರಕಾರಕ್ಕೆ ಆಗ್ರಹ ಮಾಡಬೇಕೆಂದು ಎಂದು ಭುಯ್ಯಾರ ಗ್ರಾಮದ ಕೃಷಿಕ ಕೃಷ್ಣ ಆದ್ಯ ಜಿಲ್ಲಾ ಬಿಜೆಪಿ ಘಟಕಕ್ಕೆ ಅಗ್ರಹಿಸಿದ್ದಾರೆ.

ಪ್ರತಿಕೂಲ ಹವಾಮಾನದ ಫಲವಾಗಿ ತೊಗರಿ ಬೆಳೆ ಸಂಪೂರ್ಣ ಹಾಳವಾಗಿ ಪ್ರತಿಶತ 25% ಮಾತ್ರ ಫಸಲು ಬಂದಿದ್ದು ರೈತರು ಕಂಗಾಲಾಗಿದ್ದಾರೆ ಇಂತಹ ಸಮಯದಲ್ಲಿ ರೈತರ ನೆರವಿಗೆ ಬಿಜೆಪಿ ಪಕ್ಷ ಬರಬೇಕಿದೆ ತೊಗರಿಗೆ ಕನಿಷ್ಠ ಬೆಲೆ 9000 ರೂಪಾಯಿ ರಾಜ್ಯ ಸರ್ಕಾರ ಕೊಡಬೇಕು ಜೊತೆಗೆ ಕೇಂದ್ರ ಸರ್ಕಾರ 1500 ರುಪಾಯಿ ಕೊಟ್ಟು ರೈತರ ನೆರವಿಗೆ ಬರಬೇಕು ರಾಜ್ಯ ಸರ್ಕಾರ ಕೇವಲ ಪ್ರತಿ ಕ್ವಿಂಟಾಲ್‌ಗೆ 7600 ರುಪಾಯಿ ನಿಗದಿ ಮಾಡಿದ್ದು ತುಂಬಾ ಕಡಿಮೆ ಆಗುತ್ತದೆ ಎಂದು ಹೇಳಿದ ಅವರು ಬರಿ ಪಕ್ಷದ ಆಂತರಿಕ ಕಚ್ಚಾಟ ಬಿಟ್ಟು ಬೇಗನೆ ರೈತರ ನೆರವಿಗೆ ಬರಬೇಕೆಂದು ಒತ್ತಾಯಿಸಿದ್ದಾರೆ.

## ಶ್ರೀ ರೇವಣಸಿದ್ದೇಶ್ವರ ಮಹಾಪುರಾಣ ಪ್ರವಚನ ಕಾರ್ಯಕ್ರಮ



ಸಿಂದಗಿ: ಪಟ್ಟಣದ ಶ್ರೀ ಆದಿಶೇಷ ಸಂಸ್ಥಾನ ಹಿರೇಮಠದ 29 ನೇ ಜಾತ್ರಾಮಹೋತ್ಸವದ ನಿಮಿತ್ತ ಜ.12ರಿಂದ ಜ.22ವರೆಗೆ ಶ್ರೀ ರೇವಣಸಿದ್ದೇಶ್ವರ ಮಹಾಪುರಾಣ ಪ್ರವಚನ ಕಾರ್ಯಕ್ರಮ ಪ್ರಾರಂಭೋತ್ಸವ ಹಾಗೂ ಜ.23ರಂದು ಬೆಳಿಗ್ಗೆ 9 ಗಂಟೆಗೆ ಶ್ರೀಮದ್ ರಂಭಾಪುರಿ ಜಗದ್ಗುರುಗಳ ಭವ್ಯ ಮೆರವಣಿಗೆ ಮತ್ತು ಬೆಳಿಗ್ಗೆ 11.30 ಗಂಟೆಗೆ ಧರ್ಮಸಭೆ ನಡೆಯಲಿದೆ ಕಾರಣ ಸುತ್ತಮುತ್ತಲಿನ ಗ್ರಾಮಗಳಿಂದ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಶ್ರೀ ಆದಿಶೇಷ ಸಂಸ್ಥಾನ ಹಿರೇಮಠದ ನಾಗರತ್ನ ರಾ–ಜಯೋಗಿ ವೀರರಾಜೇಂದ್ರ ಮಹಾಸ್ವಾಮಿಗಳು ಕರೆ ನೀಡಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ಹೇಳಿಕೆ ನೀಡಿರುವ ಶ್ರೀಗಳು, ಜ.12ರಿಂದ ಜ.22ರವರೆಗೆ ಸಂಜೆ 6.30 ಗಂಟೆಗೆ ಶ್ರೀಮಠದ ಆವರಣದಲ್ಲಿ ಶ್ರೀ ರೇವಣಸಿದ್ದೇಶ್ವರರ ಮಹಾಪುರಾಣ ಪ್ರವಚನ ಕಾರ್ಯಕ್ರಮ ನಡೆಯುವುದು. 19 ರಂದು ಬೆಳಿಗ್ಗೆ 10 ಗಂಟೆಗೆ ವಿಜಯಪುರ ಅನುಗ್ರಹ ಕಣ್ಣಿನ ಆಸ್ಪತ್ರೆ ವತಿಯಿಂದ ಉಚಿತ ಕಣ್ಣಿನ ತಪಾಷಣೆ ಶಿಬಿರ. ಜ.22ರಂದು ರಂದು ಸಂಜೆ ಸದ್ಗುರು ಶಿವಯೋಗಿ ಡಾ.ಚಂದ್ರಶೇಖರ ಮಹಾಸ್ವಾಮಿಗಳು ಜಾಹಗೀರದಾರ ಅವರ 54ನೆಯ ವರ್ಷದ ಅನುಷ್ಠಾನದ ಸುವರ್ಣ ಮಹೋತ್ಸವ, ಹಾಗೂ ಗುರುವಂದನಾ. ಮತ್ತು ರಾತ್ರಿ 10 ಗಂಟೆಗೆ ಮದ್ದು ಸುಡುವ ಕಾರ್ಯಕ್ರಮ. ಜ.23 ರಂದು ಮದ್ಯಾಹ್ನ 3 ಗಂಟೆಗೆ ಕಲಬುರ್ಗಿಯ ಅದ್ಭುತ,ದ ಬ್ಯಾಂಡ ವತಿಯಿಂದ ಆದಿಶೇಷ ಆರಾಧನೆ, ರಾತ್ರಿ 10 ಗಂಟೆಗೆ ಹುಣಚೇರಾಯ ಮುತ್ಯಾ ಮರತೂರ ಇವರಿಂದ ಭಜನಾ ಮತ್ತು ಶ್ರೀ ಆದಿಶೇಷ ಸಂಸ್ಥಾನ ಹಿರೇಮಠದ ಧ್ವನಿ ಸುರುಳಿ ಮತ್ತು ತ್ರೈಮಾಸಿಕ ಪತ್ರಿಕೆ ಹಾಗೂ ಕ್ಯಾಲೇಂಡರ ಬಿಡುಗಡೆ ಜರುಗುವುದು ಎಂದು ಹೇಳಿದ್ದಾರೆ.

ಜ.23ರ ಬೆಳಗಿನ ಬ್ರಾಹ್ಮೀ ಮುಹೂರ್ತದ 5 ಗಂಟೆಗೆ ಆಶ್ಲೇಷ ನಾಗಪೂಜೆ ನಡೆಯಲಿದೆ. ಈ ವೇಳೆ ಕಾಳಸರ್ಪದೋಷ, ಕುಜದೋಷ ಸಮಸ್ಯೆಗಳಿಗೆ ಮುಕ್ತಿ ಕೊಡಲಾಗುತ್ತಿದ್ದು, ಆಸಕ್ತರು ಮುಂಚಿತವಾಗಿ ಶ್ರೀಮಠದಲ್ಲಿ ತಮ್ಮ ಹೆಸರನ್ನು ನೊಂದಾಯಿಸಬೇಕು ಹೆಚ್ಚಿನ ಮಾಹಿತಿಗಾಗಿ 9886595666, 9916559565 ಸಂಪರ್ಕಿಸುವಂತೆ ತಿಳಿಸಿದ್ದಾರೆ.

ಶ್ರೀಮಠದ ಜಾತ್ರಾ ಮಹೋತ್ಸವ ನಿಮಿತ್ತ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಶ್ರೀಮಠದ ಭಕ್ತರು ಪಾಲ್ಗೊಂಡು ಜಗದ್ಗುರುಗಳ ಆಶೀರ್ವಾದ ಪಡೆದು ಪುನೀತರಾಗಬೇಕು ಎಂದು ಹೇಳಿದ್ದಾರೆ.

# 338ನೆಯ ಸದ್ವಿಚಾರಗೋಷ್ಠಿ

ಸಿಂದಗಿ: ಪೂಜ್ಯ ಶ್ರೀಚೆನ್ನವೀರ ಸ್ವಾಮೀಜಿ ಪ್ರತಿಷ್ಠಾನ ಸಾರಂಗಮಠ–ಗಚ್ಚಿನಮಠದ ವತಿಯಿಂದ 338ನೆಯ ಸದ್ವಿಚಾರಗೋಷ್ಠಿಯನ್ನು ಜ.13ರ ಬನದ ಹುಣ್ಣಿಮೆ ದಿನದಂದು ಸಾಯಂಕಾಲ 6:30ಗಂಟೆಗೆ ಶ್ರೀಮಠದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಈ ಕಾರ್ಯಕ್ರಮ ಸಾರಂಗಮಠದ ಡಾ. ಪ್ರಭುಸಾರಂಗದೇವ ಶಿವಾಚಾರ್ಯರ ದಿವ್ಯ ಸಾನಿಧ್ಯದಲ್ಲಿ ವಹಿಸಿಕೊಳ್ಳಲಿದ್ದಾರೆ. ಹಾಗೂ ಶ್ರೀಪದ್ಮರಾಜ ಮಹಿಳಾ ಮಹಾವಿದ್ಯಾಲಯದ ರಾಜ್ಯಶಾಸ್ತ್ರ ಉಪನ್ಯಾಸಕ ಗಿರೀಶ ಎಸ್.ಕುಲಕರ್ಣಿ ಮಕರ ಸಂಕ್ರಮಣದ ಮಹತ್ವ ವಿಷಯ ಕುರಿತು ಉಪನ್ಯಾಸ ನೀಡಲಿದ್ದಾರೆ. ವಿಜಯಪುರದ



ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಬಿ.ಎಸ್.ಡಬ್ಲ್ಯೂ ಪರೀಕ್ಷೆಯಲ್ಲಿ ರ‍್ಯಾಂಕ ಬಂದ ಶ್ರೀ ಪದ್ಮರಾಜ ಮಹಿಳಾ ಪದವಿ ಮಹಾವಿದ್ಯಾಲಯದ 3ನೆಯ ರ‍್ಯಾಂಕ ಪಡೆದ ಐಶ್ವರ್ಯ ತಮದೊಡ್ಡಿ, 4ನೆಯ ರ‍್ಯಾಂಕ ಪಡೆದ ವಿದ್ಯಾಶ್ರೀ ಪಡಶೆಟ್ಟಿ ಅವರನ್ನು ಸನ್ಮಾನಿಸಲಾಗುವುದು. ಕಾರಣ ತಾಲೂಕಿನ ಶ್ರೀಮಠದ ಭಕ್ತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು. ದಾಸೋಹ ಸೇವೆಯನ್ನು ಲಿಂ.ಹೊನ್ನಪ್ಪಗೌಡ ಬಿರಾದಾರ ಅವರ ಸ್ಮರಣಾರ್ಥ ದಯಾನಂದಗೌಡ ಬಿರಾದಾರ, ಲಿಂ.ಬಸಪ್ಪ ಲೋಣಿ ಅವರ ಸ್ಮರಣಾರ್ಥ ಬಂಡೆಪ್ಪ ಲೋಣಿ, ಲಿಂ.ಶಂಭುಲಿಂಗಯ್ಯ ಮಠ ಹಾಗೂ ಧರ್ಮಪತ್ನಿ ವಿಮಲಾ ಮಠ ಅವರ ಸ್ಮರಣಾರ್ಥ ಸುಧಾರಾಣಿ ಮಠ ಅವರು ಮಾಡಲಿದ್ದಾರೆ ಎಂದು ಪೂಜ್ಯ ಶ್ರೀ ಚೆನ್ನವೀರ ಸ್ವಾಮೀಜಿ ಪ್ರತಿಷ್ಠಾನದ ಸಂಚಾಲಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದಿಂದ ಸಸಿ ನೆಡೆಯುವ ಕಾರ್ಯಕ್ರಮಕ್ಕೆ ಚಾಲನೆ



ಕೊಪ್ಪಳ : ಕೊಪ್ಪಳ ನಗರದ ಹಸಿ–ರೀಕರಣಕ್ಕಾಗಿ ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದಿಂದ ಹಮ್ಮಿಕೊಂಡ ಸಸಿ ನಡೆಯುವ ಕಾರ್ಯಕ್ರಮಕ್ಕೆ ಶ್ರೀ ಅಭಿನವ ಗವಿಸಿದ್ದೇಶ್ವರ ಸ್ವಾಮಿಜಿ ಹಾಗೂ ಕೊಪ್ಪಳ ಸಂಸದರಾದ ಕೆ.ರಾಜಶೇಖರ ಬಸವರಾಜ ಹಿಟ್ನಾಳ ಅವರು ಶುಕ್ರವಾರ ಜಿಲ್ಲಾಡಳಿತ ಭವನದ ಕಛೇರಿ ಆವರಣದಲ್ಲಿ ಸಸಿಗಳನ್ನು ನೆಡುವ ಮೂಲಕ ಚಾಲನೆ ನೀಡಿದರು.

ಕೊಪ್ಪಳ ನಗರದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾ–ರಿಯ ಮಧ್ಯದಲ್ಲಿ ಫಾಕ್ಸ್ಟೇಲ್ ಪಾಮ್ ಗಿಡಗಳನ್ನು ಜಿಲ್ಲಾಡಳಿ ಭವನದಿಂದ ಗದಗ ರಸ್ತೆಯ ಮಳೆ ಮಲ್ಲೇಶ್ವರ ದೇವಸ್ಥಾನದವರೆಗೆ ಹಾಗೂ ಗವಿಮಠ ರಸ್ತೆಯ ಮಧ್ಯದಲ್ಲಿರುವ ಡಿವೈಡರ್‌ನಲ್ಲಿ ಅಲಂಕಾರಿಕ ಸಸಿಗಳನ್ನು ನೆಡೆಯುವ ಉದ್ದೇಶದೊಂದಿಗೆ ನಗರಾಭಿವೃದ್ಧಿ ಪ್ರಾಧಿಕಾರವು ಈ ಕಾರ್ಯಕ್ರಮ ಹಮ್ಮಿಕೊಂಡಿದೆ.

ಈ ಸಂದರ್ಭದಲ್ಲಿ ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀನಿವಾಸ ಗುಪ್ತಾ, ಜಿಲ್ಲಾಧಿಕಾರಿ ನಲಿನ್ ಅತುಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್ ಅರಸಿದ್ದಿ, ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಯೋಗಾನಂದ ಸೇ–ರಿದಂತೆ ವಿವಿಧ ಇಲಾಖೆಗಳ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಧಾರವಾಡ ತೇಗೂರು ಗ್ರಾಮದಲ್ಲಿರುವ ಎಮ್ಮೆ ತಳಿ ಸಂವರ್ಧನಾ ಕೇಂದ್ರಕ್ಕೆ ಜಿಲ್ಲಾಧಿಕಾರಿ ದಿವ್ಯ ಪ್ರಭು ಭೇಟಿ.

ಧಾರವಾಡ : ಧಾರವಾಡ ಜಿಲ್ಲೆಯ ತೇಗೂರು ಗ್ರಾಮದ ಎಮ್ಮೆ ತಳಿ ಸಂವರ್ಧನಾ ಕೇಂದ್ರ 1910 ಪ್ರಾರಂಭವಾದ ಸಂಸ್ಥೆಯು ಜಾನುವಾರು ಕ್ಷೇತ್ರವೆಂದು ರೂಪಾಂತರಗೊಂಡು 1976 ರಲ್ಲಿ ಎಮ್ಮೆ ತಳಿ ಸಂವರ್ಧನಾ ಕೇಂದ್ರವೆಂದು ನಾಮಕರಣಗೊಂಡಿತು ಎಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಹೇಳಿದರು.

ಇಂದು ಬೆಳಿಗ್ಗೆ ಧಾರವಾಡದ ತೇಗೂ–ರಿನ ಎಮ್ಮೆ ತಳಿ ಸಂವರ್ಧನಾ ಕೇಂದ್ರಕ್ಕೆ ಭೇಟಿ ನೀಡಿ, ಮಾತನಾಡಿದ ಅವರು ಪ್ರಮುಖವಾಗಿ ಕೃಷ್ಣವ್ಯಾಲಿ ಎಂಬ ಸ್ಥಳೀಯ ತಳಿಯನ್ನು ಸಂರಕ್ಷಣೆ ಮಾಡಲಾಗುತ್ತಿದೆ. ನಮ್ಮ ರಾಜ್ಯದಲ್ಲಿಯೇ ಇದು ಒಂದೇ ಒಂದು ಕೇಂದ್ರವಾಗಿದೆ.

ಜಾನುವಾರು ಗಣತಿ ಪ್ರಕಾರ 2019 ರ ಪ್ರಕಾರ ಧಾರವಾಡ ಜಿಲ್ಲೆಯಲ್ಲಿ 2 ಲಕ್ಷ ಜಾನುವಾರುಗಳಿದ್ದು, ಇದರಲ್ಲಿ ಸುಮಾರು 50 ಸಾವಿರ ಎಮ್ಮೆಗಳಿವೆ. ಉಳಿದಂತೆ ಆಕಳು, ಆಡು ಇನ್ನೂಳಿದಂತೆ ವಿವಿಧ ಪ್ರಬೇಧದ ಜಾನುವಾರಗಳು ಇವೆ. ರಾಜ್ಯದ ವಿವಿಧ ಭಾಗಗಳಲ್ಲಿ ಬರಗಾಲ, ಅತಿವೃಷ್ಟಿ ತೊಂದರೆಗಳು ಕಾಣಿಸಿಕೊಳ್ಳುತ್ತಿವೆ. ಇಂತಹ ಸಂದರ್ಭದಲ್ಲಿ ಕೇವಲ ಕೃಷಿಗೆ ಮಾತ್ರ ಅವಲಂಭಿತರಾಗದೆ ಇತರ ಕೃಷಿ ಉಪಕಸುಬುಗಳಾದ ಎಮ್ಮೆ ಸಾಕಾಣಿಕೆ, ಹಂದಿ ಸಾಕಾಣಿಕೆ ಮುಂತಾದ ಕ್ರಮಗಳನ್ನು ಕೈಗೊಳ್ಳುವುದರಿಂದ ಆಥ–ರ್ಕವಾಗಿ ಸಹಾಯಕವಾಗಿದೆ. ಇದ–ರಿಂದ ರೈತರು ಆದಾಯ ಹೆಚ್ಚಿಸಿಕೊಳ್ಳಲು ಸಹಾಯಕವಾಗಿದೆ. ದಕ್ಷಿಣ ಕರ್ನಾಟಕ ಭಾಗಕ್ಕಿಂತ ಉತ್ತರ ಕರ್ನಾಟಕ ಭಾಗದಲ್ಲಿ ಹಾಲು ಉತ್ಪಾದನೆಗೆ ಹೆಚ್ಚು ಅವಕಾಶವಿದೆ ಎಂದು ಅವರು ಹೇಳಿದರು.ಜಾನುವಾರು ತಳಿ ಸಂವರ್ಧನಾ ಕೇಂದ್ರದ ವಿವರ: ಜಾನುವಾರು ತಳಿ ಸಂವರ್ಧನಾ ಕೇಂದ್ರದ ಜಾನುವಾರುಗಳ ಆಹಾರಕ್ಕೆ ಅನುಕೂಲವಾಗುವಂತೆ ಕ್ಕೆ ನೀರಾವರಿ ಆಶ್ರಯದ 53 ಎಕರೆ ಕ್ಷೇತ್ರದಲ್ಲಿ, ಮಳೆಯ ಆಶ್ರಯದ 51 ಎಕರೆ ಕ್ಷೇತ್ರದಲ್ಲಿ ಮೇವು ಬೆಳೆಯಲಾಗುತ್ತದೆ. ಜಾನುವಾರುಗಳನ್ನು ಮೇಯಿಸಲು 126.09 ಎಕರೆಯ ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಲಾಗಿದೆ, 41 ಎಕರೆ ವಿಸ್ತೀರ್ಣದಲ್ಲಿ ಕೆರೆ, ಬಾವಿ, ಟ್ರೆಂಚ್‌ಗಳನ್ನು ನಿರ್ಮಿಸಲಾಗಿದೆ ಎಂದು ಅವರು ಹೇಳಿದರು.

ಕೇಂದ್ರದ ಮೂಲ ಧ್ಯೆಯೋದ್ದೇಶ: ರಾಜ್ಯ ಜಾನುವಾರು ತಳಿ ಸಂವರ್ಧನಾ ಕೇಂದ್ರದ ಮುಖ್ಯವಾದ ಉದ್ದೇಶವೆಂದರೆ ರಾಜ್ಯದ ಘನೀಕೃತ ವೀರ್ಯ ಸಂಸ್ಕರಣಾ ಕೇಂದ್ರಗಳಿಗೆ ಉತ್ಕೃಷ್ಟ ಹಾಲಿನ ಇಳುವರಿ ಹೊಂದಿದ ಎಮ್ಮೆಗಳಿಗೆ ಜನಿಸಿದ ಗಂಡು ಎಮ್ಮೆ ಕರು ಅಥವಾ ಕೋಣ ಕರುಗಳನ್ನು ನೀಡುವುದು. ನಂತರ ಈ ಕೋಣಗಳಿಂದ ವೀರ್ಯವನ್ನು ಸಂಗ್ರಹಿಸಿ ಸಂಸ್ಕರಿಸಿದ ವೀರ್ಯ ಕಡ್ಡಿಗಳನ್ನು ರಾಜ್ಯದ ಎಲ್ಲಾ ಪಶುವೈದ್ಯಕೀಯ ಸಂಸ್ಥೆಗಳಿಗೆ, ಕೃತಕಗರ್ಭಧಾರಣ ಮಾಡಲು ಉಪಯೋಗಿಸಲಾಗುತ್ತಿದೆ. ಆದರಿಂದ ಇದು ರಾಜ್ಯದ ಏಕೈಕ ಮಾತ್ರ ಕೋಣ ಉತ್ಪಾದನಾ ಸಂಸ್ಥೆಯಾಗಿದೆ.ಕ್ಷೇತ್ರದಲ್ಲಿ ಹೆಚ್ಚಿನ ಇಳುವರಿ ಬರುವ ಸೂಪರ್ ಹೈಬ್ರಿಡ್ ನೇಪಿಯರ್, ಕಾಫ್ಸ್, ಗಿನಿಹುಲ್ಲು, ಗ್ರೇಝಿಂಗ್‌ಗಿನಿ, ಮೆಕ್ಕೆಜೋಳ, ಅಲಸಂಧಿ, ಸುಬಾಬುಲ್ಸ್ ಮತ್ತು ಹೆಜ್ಜ್‌ಲೂಸರ್ನ್ ಮುಂತಾದ ಮೇವಿನ ಬೆಳೆಗಳನ್ನು ಬೆಳೆದು ನಿಯಮಿತವಾಗಿ ಜಾನುವಾರುಗಳಿಗೆ ಮೇಯಿಸಲಾಗುತ್ತಿದೆ. ಕ್ಷೇತ್ರದ ಹೈನೋದ್ಯಮದಲ್ಲಿ ಆಸಕ್ತರಿಗೆ ಅಧಿಕ ಇಳುವರಿ ನೀಡುವ ಮೇವಿನ ಬೀಜ, ಬೇರು ಮತ್ತು ಕಾಂಡಗಳನ್ನು ಇಲಾಖೆ ನಿಗಧಿಪಡಿಸಿದ ದರದಲ್ಲಿ ವಿತರಿಸಲಾಗುತ್ತದೆ. ಮತ್ತು ಹೆಚ್ಚುವ–ರಿಯಾಗಿ ಉಳಿದ ಹಸಿರು ಮೇವನ್ನು ರಸಮೇವನ್ನಾಗಿ ಪರಿವರ್ತಿಸಿ ಬೇಸಿಗೆ ಹಾಗೂ ಮೇವು ಅಭಾವದ ಸಂಧರ್ಭಗಳಲ್ಲಿ ಜಾನುವಾರುಗಳಿಗೆ ನೀಡಿ ನಿರ್ವಹಿಸಲಾಗುತ್ತದೆ. ಕ್ಷೇತ್ರದಲ್ಲಿ ಎರೇಹುಳು ಗೊಬ್ಬರ ತಯಾ–ರಿಸುವ ಘಟಕವಿದ್ದು, ಪ್ರಾತ್ಯಕ್ಷೀಕೆಯೊಂದಿಗೆ ಆಸಕ್ತರಿಗೆ ವಿವರಿಸಲಾಗುತ್ತದೆ.2019–20ನೇ ಸಾಲಿನಲ್ಲಿ ಅಳುವಿನಂಚಿನಲ್ಲಿರುವ ದೇಶಿ ಆಕಳು ತಳಿಯಾದ ಕೃಷ್ಣಾವ್ಯಾಲಿ ಜಾನುವಾರುಗಳನ್ನು ಜಾನುವಾರು ಸಂವರ್ಧನಾ ಕೇಂದ್ರ ಮುನಿರಬಾದನಿಂದ ತೇಗೂರು ಕ್ಷೇತ್ರಕ್ಕೆ ವರ್ಗಾಯಿಸಿ ತಳಿ ಸಂರಕ್ಷಣಾ ಯೋಜನೆಯನ್ನು ಮುಂದುವರಿಸಲಾಗುತ್ತಿದೆ.2022–23ನೇ ಸಾಲಿನಲ್ಲಿ ಉತ್ತರ ಕರ್ನಾಟಕದಲ್ಲಿ ಪ್ರಥ–ಮ ಬಾರಿಗೆ ಸರ್ಕಾರಿ ಸೌಮ್ಯದ ಹಂದಿ ಉತ್ಪಾದನಾ ಘಟಕವನ್ನು ತೇಗೂರು ಕ್ಷೇತ್ರದಲ್ಲಿ ಪ್ರಾರಂಭಿಸಲಾಗಿದೆ. ಈ ಕ್ಷೇತ್ರದಲ್ಲಿ ಪ್ರಮುಖ ಮಾಂಸ ಹಾಗೂ ಮರಿ ಉತ್ಪಾದನೆಯಲ್ಲಿ ಉತ್ಕೃಷ್ಟವಾದ ವಿದೇಶಿ ಹಂದಿ ತಳಿಗಳಾದ ಯಾರ್ಕಶೈರ್, ಡ್ಯೂರಾಕ್ ಮತ್ತು ಲ್ಯಾಂಡ್ ರೇಸ ಹಂದಿಗಳನ್ನು ಪಾಲನೆ ಮಾಡಲಾಗುತ್ತದೆ. ಆಸಕ್ತ ಹಂದಿ ಸಾಕಾಣಿಕೆದಾರರಿಗೆ ಕ್ಷೇತ್ರದಲ್ಲಿ ಬೆಳೆಸಿದ 3 ರಿಂದ 4 ತಿಂಗಳ ಶುದ್ಧ ಹಾಗೂ ಮಿಶ್ರತಳಿ ಹಂದಿ ಮರಿಗಳನ್ನು ರೋಗ ಮುಂಜಾಗ್ರತಾ ಲಸಿಕೆ ಹಾಗೂ ಜಂತುನಾಷಕ ಔಷಧಿಗಳನ್ನು ನೀಡಿದ ನಂತರ ಪಾಲನೆಗಾಗಿ ಇಲಾಖೆ ನಿಗದಿಪಡಿಸಿದ ದರಗಳಲ್ಲಿ ವಿತ–ರಿಸಲಾಗುತ್ತದೆ. ಕಿತ್ತೂರು ಕರ್ನಾಟಕ ಭಾಗದಲ್ಲಿ ಹಂದಿ ಸಾಕಾಣಿಕೆಗೆ ನಿರುದ್ಯೋಗ ಯುವಕ ಮತ್ತು ಯುವತಿಯರು ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಿದ್ದು, ಆನೇಕ ಹಂದಿ ಫಾರ್ಮಗಳು ಪ್ರಾರಂಭವಾಗಿದ್ದು ಹಂದಿಮರಿಗಳಿಗೆ ಹೆಚ್ಚಿನ ಬೇಡಿಕೆ ಬರುತ್ತಿದ್ದು, ಬೇಡಿಕೆಯನ್ನು ಪೂರೈಸಲು ನಮ್ಮ ಹಂದಿ ಉತ್ಪಾದನಾ ಘಟಕದಲ್ಲಿ ಮಾತ್ರ ಹಂದಿಗಳ ಸಾಮರ್ಥ್ಯ ಹೆಚ್ಚಿಸಿ ಹಂದಿಮ–ರಿಗಳನ್ನು ಉತ್ಪಾದಿಸಿ ಆಸಕ್ತರಿಗೆ ನೀಡಿದಲ್ಲಿ ನಿರುದ್ಯೋಗಿ ಯುವಕರಿಗೆ ಪ್ರೋತ್ಸಾಹ ನೀಡುವಂತಾಗಿ ಅವರ ಆರ್ಥಿಕ ಉತ್ಪನ್ನವನ್ನು ಹೆಚ್ಚಿಸಿಬಹುದು. ಆದ್ದರಿಂದ ಮಾತ್ರ ಹಂದಿಗಳ ಪಾಲನೆಗಾಗಿ 2 ಹೆಚ್ಚುವರಿ ಹಂದಿ ಶೆಡ್ಡ್‌ಗಳನ್ನು ಅನುದಾನದ ಲಭ್ಯತೆಯ ಅನುಗುಣವಾಗಿ ನಿರ್ಮಿಸಲಾಗುತ್ತದೆ. ಈ ಸಂದರ್ಭದಲ್ಲಿ ಕೇಂದ್ರದ ಪಶು ಪಾಲನಾ ಮತ್ತು ಪಶು ವೈದ್ಯಕೀಯ ಸೇವೆಗಳು ಮತ್ತು ಎಮ್ಮೆ ತಳಿ ಸಂವರ್ಧನಾ ಕೇಂದ್ರದ ಉಪ ನಿರ್ದೇಶಕ ಡಾ. ಬಸವರಾಜ ಸಿ. ನರೇಗಲ್, ಮುಖ್ಯ ಪಶುವೈದ್ಯಾಧಿಕಾರಿ ಡಾ. ಅನೀಲಕುಮಾರ ಶೀಲವಂತಮಠ, ಜಾನುವಾರು ಅಭಿವೃದ್ಧಿ ಅಧಿಕಾರಿ ವಾಯ್.ವಾಯ್.ಹರಿಜನ, ಪಶುವೈದ್ಯಕೀಯ ಪರೀಕ್ಷಕರು ಪ್ರಭಾವತಿ ಹೆಬ್ಬಳ್ಳಿ, ಪ್ರಥಮ ದರ್ಜೆ ಸಹಾಯಕ ಸೈಫ್‌ವುದ್ದೀನ ಮಾಜರಿ ಹಾಗೂ ಸಿಬ್ಬಂದಿವರು ಉಪಸ್ಥಿತರಿದ್ದರು.

*****

# ಗುಣಮಟ್ಟದ ಶಿಕ್ಷಣ ಮತ್ತು ಮುಕ್ತ ಅಭಿವ್ಯಕ್ತಿ ಸ್ವಾತಂತ್ರ್ಯ ಪ್ರತಿ ಮಗುವಿನ ಶಾಸನಬದ್ಧ ಹಕ್ಕು

ವಿಜಯಪುರ : ಸದೃಢ ಆರೋಗ್ಯ, ಗುಣಮಟ್ಟದ ಶಿಕ್ಷಣ ಮತ್ತು ಮುಕ್ತ ಅಭಿವ್ಯಕ್ತಿ ಸ್ವಾತಂತ್ರ್ಯ ಪ್ರತಿ ಮಗುವಿನ ಶಾಸನಬದ್ಧ ಹಕ್ಕು, ಅದನ್ನು ಸಕಾಲದಲ್ಲಿ, ಸಮರ್ಥವಾಗಿ ಮಕ್ಕಳಿಗೆ ದೊರಕಿಸಿಕೊಡುವುದು ಶಾಲಾ ಶಿಕ್ಷಣ ವ್ಯವಸ್ಥೆಯ ಪ್ರತಿಯೋರ್ವ ಭಾಗೀದಾರರ ಕರ್ತವ್ಯ ಅದರಲ್ಲೂ ವಿಶೇಷವಾಗಿ ಶಾಲಾ ಶಿಕ್ಷಣ ಇಲಾಖೆಯ ಎಲ್ಲ ಹಂತದ ಶಾಲಾ ಮೇಲ್ವಿಚಾರಣಾಧಿಕಾರಿಗಳು ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಪರಿಪಾಲನೆ ಕು–ರಿತು ನಿರ್ಣಾಯಕ ಪಾತ್ರ ನಿರ್ವಹಿಸುವ ಗುರುತರವಾದ ಹೊಣೆಗಾರಿಕೆಯನ್ನು ಅತ್ಯಂತ ಜವಾಬ್ದಾರಿಯುತವಾಗಿ ನಿರ್ವಹಿಸಬೇಕು ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶ್ರೀ ಶಶಿಧರ ಕೋಸುಂಬೆ ಅವರು ಕರೆ ನೀಡಿದರು.



ವಿಜಯಪುರ ನಗರದ ಪಿ.ಡಿ.ಜೆ ಪದವಿ ಪೂರ್ವ ಕಾಲೇಜಿನ ಸಭಾ ಭವನದಲ್ಲಿ ಜರುಗಿದ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿ ಪ್ರತಿಯೊಂದೂ ಶಾಲೆಯಲ್ಲಿ ಮಕ್ಕಳ ಸಹಾಯವಾಣಿ 1098, ಸಲಹಾ ಪೆಟ್ಟಿಗೆ, ಕುಡಿಯುವ ಶುದ್ಧ ನೀರಿನ ವ್ಯವಸ್ಥೆ, ಕಾರ್ಯಾತ್ಮಕ ಶೌಚಾಲಯ, ಉತ್ತಮವಾದ ಆಟದ ಮೈದಾನ, ಸಾಕಷ್ಟು ಸಂಖ್ಯೆಯಲ್ಲಿ ಆಟೋಪಕರಣಗಳು, ಪಾಠೋಪಕರಣಗಳು ಮತ್ತು ಪೀಠೋಪಕರಣಗಳು ಕಡ್ಡಾಯವಾಗಿ ಲಭ್ಯವಿರುವಂತೆ ಅಗತ್ಯ ಕ್ರಮ ವಹಿಸುವಂತೆ ಸಂಬಂಧಿಸಿದ ಅಧಿಕಾ–ರಿಗಳಿಗೆ ಸೂಚಿಸಿದರು.

ಆರ್.ಡಿ.ಪಿ.ಆರ್ ಇಲಾಖೆಯಿಂದ ಗುರುತಿಸಲ್ಪಟ್ಟಿರುವ ಶಾಲೆಯಿಂದ ಹೊರಗುಳಿದ 10268 ಮಕ್ಕಳ ಪೈಕಿ ಇಲ್ಲಿಯವರೆಗೂ 7114 ಮಕ್ಕಳನ್ನು ಮುಖ್ಯ ವಾಹಿನಿಗೆ ತರಲಾಗಿದ್ದು ಬಾಕಿ ಉಳಿದಿರುವ 3154 ಮಕ್ಕಳನ್ನು ಶೀಘ್ರವಾಗಿ ಮುಖ್ಯ ವಾಹಿನಿಗೆ ತರುವ ಕಾರ್ಯವನ್ನು ಪೂರ್ಣಗೊಳಿಸಬೇಕು ಶಾಲಾ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುವ ಅಡುಗೆ ಸಿಬ್ಬಂದಿ, ಸ್ವಚ್ಛತಾ ಕರ್ಮಚಾರಿಗಳು, ಭದ್ರತಾ ಸಿಬ್ಬಂದಿ ಮತ್ತು ಇತರೆ ಎಲ್ಲ ಅನ್ಯಕಾರ್ಯನಿಮಿತ್ತ ನಿಯುಕ್ತಿಗೊಳ್ಳುವ ಪ್ರತಿಯೊಬ್ಬರಿಂದ ಮಕ್ಕಳ ಸುರಕ್ಷತೆ ಮತ್ತು ಭದ್ರತೆ ಕು–ರಿತು ಬದ್ಧತಾ ಮುಚ್ಚಳಿಕೆ ಪಡೆಯಬೇಕು, ಶಾಲೆಗಳಲ್ಲಿ ಹಂಗಾಮಿಯಾಗಿ ನೇಮಕಗೊಳ್ಳುವ ಅತಿಥಿ ಶಿಕ್ಷಕರುಗಳ ಕುರಿತು ಪೋಲೀಸ್ ಇಲಾಖೆಯಿಂದ ಪೂರ್ವಾಪರ ಪರಿಶೀಲನಾ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಪಡೆದು ದಾಖಲೆಗಳನ್ನು ನಿರ್ವಹಿಸಲು ಕ್ರಮ ವಹಿಸುವಂತೆ ಕ್ಷೇತ್ರ–ಶಿಕ್ಷಣಾಧಿಕಾರಿಗಳಿಗೆ ಸೂಚಿಸಿದರು.

ಶಾಲಾ ಹಂತದ ಮಕ್ಕಳ ರಕ್ಷಣಾ ಸಮಿತಿಗಳನ್ನು ಕ್ರಿಯಾಶೀಲಗೊಳಿಸುವುದರ ಮೂಲಕ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ, ಬಾಲ ಕಾರ್ಮಿಕ ಪದ್ಧತಿ, ಬಾಲ್ಯ ವಿವಾಹ ಮತ್ತು ಇತರೆ ಯಾವುದೇ ರೀತಿಯಲ್ಲಿ ಮಕ್ಕಳ ನೈಸರ್ಗಿಕ ಹಕ್ಕುಗಳ ಉಲ್ಲಂಘನೆಯಾಗದಂತೆ ಜಾಗೃತೆ ಮತ್ತು ಮುನ್ನೆಚ್ಚರಿಕೆ ವಹಿಸಲು ಸೂಚಿಸಿದರು.

ನೆರೆಯ ಮಹಾರಾಷ್ಟ್ರ ರಾಜ್ಯದೊಂದಿಗೆ ಮೇರೆಗಳನ್ನು ಹಂಚಿಕೊಳ್ಳುವ ಚಡಚಣ, ಇಂಡಿ ಮತ್ತು ವಿಜಯಪುರ ಗ್ರಾಮೀಣ ತಾಲ್ಲೂಕುಗಳ ಗಡಿಭಾಗದಲ್ಲಿನ ಶಾಲೆಯಿಂದ ಹೊರಗುಳಿದ ಮಕ್ಕಳ ಕು–ರಿತು ವಿಶೇಷ ಗಮನಹರಿಸುವ ಮೂಲಕ ದ್ವಿದಾಖಲಾತಿಯ ಸಮಸ್ಯೆಯಾಗದಂತೆ ಕಟ್ಟುನಿಟ್ಟಿನ ಕ್ರಮ ವಹಿಸಲು ಸೂಚಿಸಿದರು.

ಆಧಾರ ಜೋಡನೆ, ಅಪಾರ ನೋಂದಣಿ ಮತ್ತು ಸ್ಯಾಟ್ಸ್ ವಿಷಯಗಳ ಕುರಿತು ಆಂದೋಲನ ರೂಪದಲ್ಲಿ ಕಾರ್ಯಾಚರಣೆ ನಡೆಸಿ ಜಿಲ್ಲೆಯ ಪ್ರಗತಿಯನ್ನು ಹೆಚ್ಚಿಸಬೇಕೆಂದು ಸಲಹೆ ನೀಡಿದರು.

ಉಪನಿರ್ದೇಶಕಿ ಶ್ರೀಮತಿ ಟಿ. ಎಸ್.ಕೊಲ್ಹಾರ ಇವರು ಪ್ರಾರಂಭದಲ್ಲಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿ ಸಮಗ್ರ ಅಂಕಿ ಸಂಖ್ಯೆಗಳ ವಿವರಗಳನ್ನು ಸಭೆಗೆ ನೀಡಿದರು. ಶಾಲಾ ಶಿಕ್ಷಣ ಇಲಾಖೆ, ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಜಿಲ್ಲೆಯ ಎಲ್ಲ ಕ್ಷೇತ್ರ–ಶಿಕ್ಷಣಾಧಿಕಾ–ರಿಗಳು, ಕ್ಷೇತ್ರ–ಸಮನ್ವಯಾಧಿಕಾರಿಗಳು, ಬಿ.ಆರ್.ಪಿ, ಇ.ಸಿ.ಓ, ಸಿ.ಆರ್.ಪಿ. ಹಾಗೂ ಅಕ್ಷರ ದಾಸೋಹ ಅಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

********

BELAGINA SURYODHYA KANNADA DAILY MORNING Editor, Printer, PUblisher and Owned By GURURAJ IRAPPA KADAM Plot No.2743 NEAR KEB POWER HOUSE RAMTEERTH NAGAR, SHIVAJI NAGAR BELAGAVI-590016 DIST-BELAGAVI,STATE KARNATAKA PRINTED At M/S LAXMI PRINTERS, No. 627,Auto Nagar,Belagavi,Dist- Belagavi Karnataka, RNI No. KARKAN/2019/77640, Volume : 06, Issue : 286, Postal Reg No. PMG/KA/NK/BM/135/22-24 / POST AT Vantamury Colony Post Office